ಅಧ್ಯಾಯ - ೩

# ಜನತೆ

ಗುಲಬರ್ಗಾ ಜಿಲ್ಲೆಯು ೧೦ ತಾಲೂಕುಗಳನ್ನೊಳಗೊಂಡಿದ್ದು, ಭೌಗೋಳಿಕವಾಗಿ ಕರ್ನಾಟಕದ ಈಶಾನ್ಯ ಭಾಗದಲ್ಲಿ ಎತ್ತರವಾದ ವ್ಯಾಪಕ ಪ್ರದೇಶದಲ್ಲಿದೆ. ಈ ಜಿಲ್ಲೆಯು ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ರಾಜ್ಯಗಳ ಎಲ್ಲೆಗಳಿಂದ ಸುತ್ತುವರೆದಿದ್ದು ಅಲ್ಲಿಯ ಜನಜೀವನದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಒಂದು ಪ್ರದೇಶದ ಸಮಗ್ರ ಅಧ್ಯಯನಕ್ಕೆ ಅಲ್ಲಿಯ ಜನಸಂಖ್ಯಾ ಬೆಳವಣಿಗೆ ಹಾಗೂ ಸಾಮಾಜಿಕ ಲಕ್ಷಣಗಳು ಅವಿಭಾಜ್ಯ ಅಂಗವಾಗಿದ್ದು ಇವು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುತ್ತವೆ. ರಾಜ್ಯದ ಇತರೆ ಜಿಲ್ಲೆಗಳಂತೆ ಈ ಜಿಲ್ಲೆಯಲ್ಲಿಯೂ ಸಹ ವಿವಿಧ ಜಾತಿ, ಮತ, ಧರ್ಮ, ಭಾಷೆ, ಆಚಾರ-ವಿಚಾರಗಳು, ನಂಬಿಕೆಗಳು, ಆಹಾರಾಭ್ಯಾಸ, ಭಾಷೆ, ವೇಷ-ಭೂಷಣಗಳು ಇವೇ ಮೊದಲಾದ ವೈವಿಧ್ಯತೆಯಿಂದ ಕೂಡಿದ ಸಾಮಾಜಿಕ ಲಕ್ಷಣಗಳು ಕಂಡು ಬರುತ್ತವೆ. ಈ ಅಧ್ಯಾಯದಲ್ಲಿ ಗುಲಬರ್ಗಾ ಜಿಲ್ಲೆಯ ಜನತೆಯ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

## ಜನಸಂಖ್ಯಾ ಬೆಳವಣಿಗೆ

೧೯೬೧ರ ಜನಗಣತಿಯಂತೆ ಜಿಲ್ಲೆಯ ಜನಸಂಖ್ಯೆಯು ೧೩,೯೯,೪೫೭ ಇದ್ದು ೧೯೯೧ರಲ್ಲಿ ೨೫,೮೨,೧೬೯ ಆಗಿರುವುದು. ರಾಜ್ಯದ ೨೦ ಜಿಲ್ಲೆಗಳ ಜನಸಂಖ್ಯೆಯನ್ನು ಅವಲೋಕಿಸಿದಾಗ ಇದು ಏಳನೆಯ ಸ್ಥಾನವನ್ನು ಪಡೆದಿರುವುದು. ಜಿಲ್ಲೆಯಲ್ಲಿನ ೧೯೬೧ರಿಂದ ೧೯೯೧ರವರೆಗಿನ ಜನಸಂಖ್ಯಾ ಬೆಳವಣಿಗೆಯನ್ನು ತಾಲೂಕುವಾರು, ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗನುಗುಣವಾಗಿ ಈ ಕೆಳಗಿನ ಕೋಷ್ಟಕದಲ್ಲಿ (೩.೧) ನೀಡಲಾಗಿದೆ.

೧೯೦೧ ರಿಂದ ೧೯೧೧ರ ಜನಸಂಖ್ಯಾ ಬೆಳವಣಿಗೆಯು ಶೇ. ೯.೨೨ ಆಗಿದ್ದು ಇದು ರಾಜ್ಯದ ಜನಸಂಖ್ಯಾ ಬೆಳವಣಿಗೆಗಿಂತ (ಶೇ. ೩.೬೦) ಹೆಚ್ಚಾಗಿರುತ್ತದೆ. ೧೯೧೧-೨೧ರ ದಶಕದಲ್ಲಿ ರಾಜ್ಯದ ಜನಸಂಖ್ಯೆಯಲ್ಲಿ ಇಳಿಮುಖವಾಗಿದ್ದು ಇದು ಗುಲಬರ್ಗಾ ಜಿಲ್ಲೆಗೂ ಅನ್ವಯವಾಗಿರುತ್ತದೆ. ಇದಕ್ಕೆ ಕಾರಣ ಈ ಅವಧಿಯಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪಗಳು ಹಾಗೂ ವ್ಯಾಪಕವಾಗಿ ತಲೆ ದೋರಿದ ಸಾಂಕ್ರಾಮಿಕ ರೋಗಗಳೂ ಇದ್ದಿರಬಹುದು. ನಂತರದ ಪ್ರತಿದಶಕದಲ್ಲೂ ಜಿಲ್ಲೆಯ ಜನಸಂಖ್ಯೆ ಹೆಚ್ಚುತ್ತಾ ಬಂದಿದ್ದರೂ ಇದು ರಾಜ್ಯದ ಸರಾಸರಿ ಏರಿಕೆಯ ದರಕ್ಕಿಂತ ಕಡಿಮೆಯಾಗಿರುತ್ತದೆ. ೧೯೬೧ ರಿಂದ ೧೯೭೧ರವರೆಗಿನ ಜನಸಂಖ್ಯಾ ಬೆಳವಣಿಗೆಯು (ಶೇ ೨೪.೨೮) ರಾಜ್ಯದ ಸರಾಸರಿ ಜನಸಂಖ್ಯಾ ಬೆಳವಣಿಗೆಯ

## ಗುಲಬರ್ಗಾ ಜಿಲ್ಲಾ ಪಂಚಾಯತ್‌ಗೆ ಆಯ್ಕೆಯಾದ ವಿವಿಧ ಪಕ್ಷಗಳ ಸದಸ್ಯರ ತಾಲೂಕುವಾರು ಮಾಹಿತಿ ದಿನಾಂಕ ೬-೩-೯೭ರಲ್ಲಿದ್ದಂತೆ

| ತಾಲೂಕು | ಭಾರತೀಯ ಜನತಾಪಕ್ಷ | ಜನತಾದಳ | ಕರ್ನಾಟಕ ಕಾಂಗ್ರೆಸ್ | ಭಾರತೀಯ ಕಮ್ಯೂನಿಸ್ಟ ಪಕ್ಷ (ಮಾರ್ಕ್ಸ್‌ವಾದಿ | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ |
|---|---|---|---|---|---|
| ಗುಲಬರ್ಗಾ | ೧ | ೪ | ೧ | -- | -- |
| ಆಳಂದ | ೧ | ೩ | ೧ | ೧ | -- |
| ಅಫ್‌ಜಲ್‌ಪುರ | -- | -- | ೨ | -- | ೨ |
| ಜೇವರ್ಗಿ | -- | -- | ೧ | -- | ೪ |
| ಚಿಂಚೋಳಿ | -- | ೩ | -- | -- | ೨ |
| ಚಿತ್ತಾಪುರ | -- | ೪ | -- | -- | ೨ |
| ಸೇಡಂ | -- | ೨ | -- | -- | ೨ |
| ಯಾದಗಿರಿ | -- | ೩ | -- | -- | ೩ |
| ಶಹಾಪುರ | -- | ೫ | -- | -- | ೧ |
| ಸುರಪುರ | -- | ೩ | ೩ | -- | -- |
| . | ೨ | ೨೭ | ೮ | ೧ | ೧೬ |

ಒಟ್ಟು ೫೪

ಖಾಲಿ ೧ ಖಾಲಿ ಕರ್ನಾಟಕ ಕಾಂಗ್ರೆಸ್ ಪಕ್ಷ

೫೫

## ಕೋಷ್ಟಕ : ೩.೧

| ಕ್ರ.ಸಂ | ತಾಲೂಕು | | ೧೯೬೧ | ೧೯೭೧ | ೧೯೮೧ | ೧೯೯೧ |
|---|---|---|---|---|---|---|
| 1. | ಅಫಜಲ್‌ಪುರ | ಗ್ರಾಮಾಂತರ | ೯೦,೦೭೧ | ೧,೧೧,೭೭೯ | ೧,೧೪,೪೯೦ | ೧,೫೦,೮೫೬ |
| | | ನಗರ | -- | -- | ೧೦,೫೮೮ | -- |
| | | ಒಟ್ಟು | ೯೦,೦೭೧ | ೧,೧೧,೭೭೯ | ೧,೨೫,೦೭೮ | ೧,೫೦,೮೫೬ |
| ೨. | ಆಳಂದ | ಗ್ರಾಮಾಂತರ | ೧,೪೨,೩೨೬ | ೧,೭೫,೬೩೫ | ೧,೮೯,೬೭೭ | ೨,೩೪,೨೭೦ |
| | | ನಗರ | ೧೮,೦೦೯ | ೨೧,೫೬೮ | ೨೬,೪೩೫ | ೨೬,೫೬೪ |
| | | ಒಟ್ಟು | ೧,೬೦,೩೩೫ | ೧,೯೭,೨೦೩ | ೨,೧೬,೧೧೨ | ೨,೬೦,೮೩೪ |
| ೩. | ಚಿಂಚೋಳಿ | ಗ್ರಾಮಾಂತರ | ೧,೦೧,೭೧೬ | ೧,೨೫,೨೦೦ | ೧,೪೭,೭೬೬ | ೧,೭೮,೫೭೭ |
| | | ನಗರ | ೬,೦೪೭ | ೭,೩೮೦ | ೧೦,೪೩೪ | ೧೦,೫೮೪ |
| | | ಒಟ್ಟು | ೧,೦೭,೭೬೩ | ೧,೩೨,೫೮೦ | ೧,೫೮,೨೦೦ | ೧,೮೯,೧೬೧ |
| ೪. | ಚಿತ್ತಾಪುರ | ಗ್ರಾಮಾಂತರ | ೧,೪೨,೯೪೮ | ೧,೭೨,೨೫೬ | ೧,೭೦,೮೧೧ | ೨,೦೮,೯೬೫ |
| | | ನಗರ | ೩೧,೮೨೮ | ೪೪,೭೯೩ | ೮೭,೦೭೩ | ೧,೦೦,೫೧೬ |
| | | ಒಟ್ಟು | ೧,೭೪,೭೭೬ | ೨,೧೭,೦೪೯ | ೨,೫೭,೮೮೩ | ೩,೦೯,೪೮೧ |
| ೫. | ಗುಲಬರ್ಗಾ | ಗಾಮಾಂತರ | ೧,೩೧,೭೦೪ | ೧,೬೦,೧೩೪ | ೧,೮೧,೧೭೯ | ೨,೧೩,೦೨೪ |
| | | ನಗರ | ೯೭,೦೬೯ | ೧,೪೫,೫೮೮ | ೨,೨೧,೩೨೫ | ೩,೧೦,೯೨೦ |
| | | ಒಟ್ಟು | ೨,೨೮,೭೭೩ | ೩,೦೫,೭೨೨ | ೪,೦೨,೫೦೪ | ೫,೨೩,೯೪೪ |
| ೬. | ಜೇವರಗಿ | ಗಾಮಾಂತರ | ೧,೧೧,೨೧೨ | ೧,೩೬,೩೫೮ | ೧,೪೪,೭೫೪ | ೧,೮೮,೭೦೭ |
| | | ನಗರ | -- | -- | ೮,೨೯೩ | -- |
| | | ಒಟ್ಟು | ೧,೧೧,೨೧೨ | ೧,೩೬,೩೫೮ | ೧,೫೩,೦೪೭ | ೧,೮೮,೭೦೭ |

| | | | | | | |
|---|---|---|---|---|---|---|
| ೭. | ಸೇಡಂ | ಗ್ರಾಮಾಂತರ | ೮೨,೧೬೨ | ೯೫,೯೩೮ | ೧,೧೩,೬೧೧ | ೧,೨೯,೮೮೯ |
| | | ನಗರ | ೮,೫೨೭ | ೧೧,೩೭೮ | ೧೫,೮೨೩ | ೩೩,೨೬೬ |
| | | ಒಟ್ಟು | ೯೦,೬೮೯ | ೧,೦೭,೩೧೬ | ೧,೨೯,೪೩೪ | ೧,೬೩,೧೧೫ |
| ೮. | ಶಹಾಪುರ | ಗ್ರಾಮಾಂತರ | ೧,೨೬,೩೨೫ | ೧,೪೫,೦೮೮ | ೧,೭೩,೬೭೩ | ೨,೦೮,೪೧೭ |
| | | ನಗರ | ೧೧,೭೭೬ | ೧೪,೨೫೯ | ೧೭,೯೮೧ | ೩೧,೭೮೯ |
| | | ಒಟ್ಟು | ೧,೩೮,೧೦೧ | ೧,೫೯,೩೪೭ | ೧,೯೧,೬೫೪ | ೨,೪೦,೨೦೬ |
| ೯. | ಸುರಪುರ | ಗ್ರಾಮಾಂತರ | ೧,೧೯,೮೯೫ | ೧,೫೪,೫೫೧ | ೧,೯೭,೯೨೭ | ೨,೪೨,೯೧೯ |
| | | ನಗರ | ೧೭,೬೮೯ | ೨೧,೦೫೬ | ೨೫,೫೯೫ | ೩೮,೮೨೪ |
| | | ಒಟ್ಟು | ೧,೩೭,೫೮೪ | ೧,೭೫,೬೦೭ | ೨,೨೩,೫೨೨ | ೨,೮೧,೭೪೩ |
| ೧೦ | ಯಾದಗಿರಿ | ಗ್ರಾಮಾಂತರ | ೧,೨೪,೬೭೭ | ೧,೫೩,೦೦೫ | ೧,೭೧,೦೨೪ | ೨,೧೬,೭೪೨ |
| | | ನಗರ | ೩೫,೪೭೬ | ೪೩,೨೫೪ | ೫೨,೧೮೫ | ೫೭,೩೪೦ |
| | | ಒಟ್ಟು | ೧,೬೦,೧೫೩ | ೧,೯೬,೨೫೯ | ೨,೨೩,೨೦೯ | ೨,೭೪,೦೮೨ |
| | ಜಿಲ್ಲೆಯ ಒಟ್ಟು | ಗ್ರಾಮಾಂತರ | ೧೧,೭೩,೦೩೬ | ೧೪,೨೯,೯೪೪ | ೧೬,೦೪,೯೧೧ | ೧೯,೭೨,೩೬೬ |
| | | ನಗರ | ೨,೨೬,೪೨೧ | ೩,೦೯,೨೭೬ | ೪,೭೫,೭೩೨ | ೬,೦೯,೮೦೩ |
| | | ಒಟ್ಟು | ೧೩,೯೯,೪೫೭ | ೧೭,೩೯,೨೨೦ | ೨೦,೮೦,೬೪೩ | ೨೫,೮೨,೧೬೯ |

## ಕೋಷ್ಟಕ : ೩.೧

## ಜನಸಂಖ್ಯೆಯಲ್ಲಿ ದಶವಾರ್ಷಿಕ ವ್ಯತ್ಯಾಸ

| ಜನಗಣತಿಯ ವರ್ಷ | ಒಟ್ಟು ಜನಸಂಖ್ಯೆ | ದಶಕದ ವ್ಯತ್ಯಾಸ | ದಶಕದ ವ್ಯತ್ಯಾಸದ ಪ್ರತಿಶತ | ಪುರುಷರು | ಸ್ತ್ರೀಯರು |
|---|---|---|---|---|---|
| ೧೯೦೧ | ೮,೦೩,೦೬೨ | -- | -- | ೪,೪೭,೩೨೮ | ೩,೫೫,೭೩೪ |
| ೧೯೧೧ | ೯,೬೪,೪೬೮ | ೮೧,೪೦೬ | + ೯.೨೨(೩.೬೦) | ೪,೮೮,೨೮೦ | ೪,೭೬,೧೮೮ |
| ೧೯೨೧ | ೮,೮೭,೮೪೫ | − ೭೬,೫೯೩ | − ೭.೯೪(−೧.೦೯) | ೪,೪೯,೯೨೬ | ೪,೩೭,೯೧೯ |
| ೧೯೩೧ | ೯,೯೦,೫೦೫ | + ೧,೦೨,೬೩೦ | + ೧೧.೫೬(೯.೩೮) | ೫,೦೨,೮೬೫ | ೪,೮೭,೬೪೦ |
| ೧೯೪೧ | ೧೦,೫೯,೭೧೬ | + ೬೯,೨೧೧ | + ೬.೯೦(೧೧.೦೯) | ೫,೪೦,೭೭೧ | ೫,೧೮,೯೪೫ |
| ೧೯೫೧ | ೧೨,೧೩,೬೦೮ | + ೧,೫೩,೮೯೨ | + ೧೪.೫೨(೧೯.೩೬) | ೬,೦೯,೦೮೮ | ೬,೦೪,೫೨೦ |
| ೧೯೬೧ | ೧೩,೯೯,೪೫೭ | + ೧,೮೫,೮೪೯ | + ೧೫.೩೧(೨೧.೫೭) | ೭,೦೩,೪೪೭ | ೬,೯೬,೦೧೦ |
| ೧೯೭೧ | ೧೭,೩೯,೨೨೦ | + ೩,೩೯,೭೬೩ | + ೨೪.೨೮(೨೪.೨೨) | ೮,೭೮,೧೪೨ | ೮,೬೧,೦೭೮ |
| ೧೯೮೧ | ೨೦,೮೦,೬೪೩ | + ೩,೪೧,೨೨೩ | + ೧೯.೬೩(೨೬.೭೫) | ೧೦,೫೦,೧೮೭ | ೧೦,೩೦,೪೫೬ |
| ೧೯೯೧ | ೨೫,೮೨,೧೬೯ | + ೫,೦೧,೫೨೬ | + ೨೪.೧೦(೨೧.೨೨) | ೧೩,೧೬,೦೮೮ | ೧೨,೬೬,೦೮೧ |

ದರಕ್ಕಿಂತ (ಶೇ. ೨೪.೨೨) ಸ್ವಲ್ಪ ಹೆಚ್ಚಿದ್ದು, ೧೯೭೧ರಿಂದ ೧೯೮೧ರ ದಶಕದಲ್ಲಿ ಮತ್ತೆ ಇದು ಇಳಿಮುಖವಾಗಿದೆ. ಈ ಅವಧಿಯಲ್ಲಿ ಮಳೆಯು ವಿಫಲವಾಗಿದ್ದು ಕ್ಷಾಮ ತಲೆದೋರಿದುದರಿಂದ ಜನರು ಬೇರೆ ಪ್ರದೇಶಗಳಿಗೆ ವಲಸೆ ಹೋಗಿರುವುದು ಇದಕ್ಕೆ ಕಾರಣವಿದ್ದಿರಬಹುದು. ಇಂದಿಗೂ ಈ ಜಿಲ್ಲೆಯಿಂದ ಅಭಾವ ಪರಿಸ್ಥಿತಿಯಲ್ಲಿ ಸಣ್ಣಪುಟ್ಟ ಹಿಡುವಳಿದಾರರು, ಒಣಬೇಸಾಯದಾರರು, ವ್ಯವಸಾಯ ಕಾರ್ಮಿಕರು ದಕ್ಷಿಣ ಕರ್ನಾಟಕದ ಜಿಲ್ಲೆಗಳತ್ತ, ಹಂಗಾಮಿಯಾಗಿ ಗುಳೇ ಹೋಗುವುದು ಸರ್ವೇಸಾಮಾನ್ಯವಾಗಿರುವುದು. ಈ ಕೆಳಗಿನ ಕೋಷ್ಟಕದಲ್ಲಿ (೩.೨) ೧೯೦೧ರಿಂದ ೧೯೯೧ರ ವರೆಗಿನ ಜಿಲ್ಲೆಯ ಜನಸಂಖ್ಯೆಯ ವ್ಯತ್ಯಾಸ ಹಾಗೂ ಶೇಕಡವಾರು ಬೆಳವಣಿಗೆಯನ್ನು ಕೊಡಲಾಗಿದೆ. ರಾಜ್ಯದ ದಶಕದ ವ್ಯತ್ಯಾಸದ ಪ್ರತಿ ಶತದ ಅಂಕಿ ಅಂಶವನ್ನು ಆವರಣದಲ್ಲಿ ನೀಡಲಾಗಿದೆ.

**ಜನಸಾಂದ್ರತೆ :**

ಪ್ರತೀ ಚದರ ಕಿಲೋಮೀಟರ್ ಪ್ರದೇಶದಲ್ಲಿ ವಾಸಿಸುವ ಜನಸಂಖ್ಯೆಯನ್ನು ಆ ಪ್ರದೇಶದ ಜನಸಾಂದ್ರತೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಜನಸಾಂದ್ರತೆಯು ನಗರ ಪ್ರದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗಿಂತ ಹೆಚ್ಚಾಗಿರುತ್ತದೆ. ೧೯೮೧ರ ಜನಗಣತಿಯಂತೆ ಜಿಲ್ಲೆಯಲ್ಲಿನ ಜನಸಾಂದ್ರತೆಯು ೧೨೮ ಆಗಿದ್ದು ಇದು ರಾಜ್ಯದ ಸರಾಸರಿ ಜನಸಾಂದ್ರತೆಗಿಂತ (೧೯೪) ಕಡಿಮೆಯಾಗಿತ್ತು. ೧೯೭೧ರಲ್ಲಿ ಜಿಲ್ಲೆಯ ಜನಸಾಂದ್ರತೆಯು ೧೦೭ ಆಗಿದ್ದು ಇದು ಜನಸಾಂದ್ರತೆಯಲ್ಲಿ ರಾಜ್ಯದ ೧೯ ಜಿಲ್ಲೆಗಳಲ್ಲಿ ೧೫ನೇ ಸ್ಥಾನವನ್ನು ಪಡೆದಿತ್ತು. ೧೯೮೧ರಲ್ಲಿ ಜನಸಾಂದ್ರತೆಯು ಹೆಚ್ಚಿದ್ದರೂ ಅದೇ ಸ್ಥಾನದಲ್ಲಿತ್ತು. ೧೯೮೧ರಲ್ಲಿ ಜಿಲ್ಲೆಯ ನಗರ ಜನಸಾಂದ್ರತೆಯು ೩,೮೮೮ ಆಗಿದ್ದು ಇದು ರಾಜ್ಯದ ನಗರಗಳ ಸರಾಸರಿ ಜನಸಾಂದ್ರತೆಗಿಂತ (೨೯೧೮) ಅಧಿಕವಾಗಿತ್ತು. ಇದು ರಾಜ್ಯದ ನಗರಗಳ ಜನಸಾಂದ್ರತೆಯಲ್ಲಿ ಒಂಭತ್ತನೇ ಸ್ಥಾನವನ್ನು ಪಡೆದಿತ್ತು. ಜಿಲ್ಲೆಯಲ್ಲಿ ಗುಲಬರ್ಗಾ ತಾಲೂಕಿನ ನಗರ ಜನಸಾಂದ್ರತೆಯು ಅತಿ ಕಡಿಮೆಯೂ (೧,೪೩೮) ಇತ್ತು. ಗ್ರಾಮಾಂತರ ಪ್ರದೇಶಗಳ ಜನಸಾಂದ್ರತೆಯನ್ನು ಗಮನಿಸಿದರೆ ಜಿಲ್ಲೆಯ ಸರಾಸರಿಯು ೧೯೮೧ರಲ್ಲಿ ೧೧೦ ಆಗಿದ್ದು ಸೇಡಂ ತಾಲೂಕಿನಲ್ಲಿ ಅತಿ ಹೆಚ್ಚಾಗಿಯೂ (೧೧೨) ಮತ್ತು ಜೇವರ್ಗಿ ತಾಲ್ಲೂಕಿನಲ್ಲಿ ಅತಿ ಕಡಿಮೆಯೂ (೮೦) ಇತ್ತು. ಈ ಮುಂದಿನ ಕೋಷ್ಟಕದಲ್ಲಿ (೩.೩), ೧೯೭೧ ಹಾಗೂ ೧೯೮೧ರ ಜನಸಾಂದ್ರತೆಯನ್ನು ತಾಲೂಕುವಾರು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ.

೧೯೯೧ ರ ಜನಗಣತಿಯಂತೆ ಜಿಲ್ಲೆಯ ತಾಲೂಕುವಾರು ಜನಸಾಂದ್ರತೆಯು ಈ ಮುಂದೆ ಅವರಣದಲ್ಲಿ ಸೂಚಿಸಿದಂತಿದೆ.

೧. ಅಫಜಲ್‌ಪುರ (೧೧೬), ೨. ಆಳಂದ (೧೫೦), ೩. ಚಿಂಚೋಳಿ (೧೨೧), ೪. ಚಿತ್ತಾಪುರ (೧೭೫), ೫. ಗುಲಬರ್ಗಾ (೩೦೩), ೬. ಜೇವರ್ಗಿ (೧೦೪), ೭. ಸೇಡಂ (೧೫೯), ೮. ಶಹಾಪುರ (೧೪೨), ೯. ಸುರಪುರ (೧೫೫), ೧೦. ಯಾದಗಿರಿ (೧೬೦) ಹಾಗೂ ಜಿಲ್ಲೆಯ ಒಟ್ಟು (೧೫೯)

**ವಾಸದ ಮನೆಗಳು ಮತ್ತು ಕುಟುಂಬಗಳು :**

ಜನಗಣತಿಯ ಪ್ರಕಾರ ವಾಸದ ಮನೆಯೆಂದರೆ ಪೂರ್ತಿಯಾಗಿ ಅಥವಾ ಭಾಗಶಃ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕುಟುಂಬಗಳು ವಾಸಿಸುವ ಕಟ್ಟಡ ಎಂದರ್ಥ. ಕುಟುಂಬವೆಂದರೆ ಜನಗಣತಿಯ ಪ್ರಕಾರ ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ಜನರು ಒಟ್ಟಿಗೆ ವಾಸಿಸುತ್ತಿದ್ದು ಒಂದೇ ಅಡಿಗೆ ಮನೆಯಲ್ಲಿ ತಯಾರಿಸಿದ ಅಡಿಗೆಯನ್ನು (ಅನೇಕ ವೇಳೆ ಕೆಲಸ ಕಾರ್ಯಗಳ ಕಾರಣಗಳನ್ನು ಹೊರತುಪಡಿಸಿ) ಊಟ ಮಾಡುವ ಜನರ ಸಮೂಹ ಎಂದರ್ಥ. ಕೆಲವು ಕುಟಂಬಗಳಿಗೆ ವಾಸದ ಮನಗಳೇ ಇರುವುದಿಲ್ಲ. ಅಂತಹವುಗಳನ್ನು ಮನೆಗಳಿಲ್ಲದ ಕುಟುಂಬಗಳೆನ್ನುತ್ತಾರೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯ ಪ್ರಕಾರ ೩,೪೭,೩೯೯ ವಾಸದ ಮನೆಗಳು ಮತ್ತು ೩,೪೯,೧೬೮ ಕುಟುಂಬಗಳೂ ಇದ್ದವು. ಅಂದಾಜಿನಲ್ಲಿ ಹೇಳುವುದಾದರೆ ಪ್ರತಿ ಸಾವಿರ ವಾಸದ ಮನೆಗಳಿಗೆ ೧,೦೦೫ ಕುಟುಂಬಗಳಿದ್ದವು. ಈ ಕೆಳಗಿನ ಕೋಷ್ಟಕದಲ್ಲಿ (೩.೪) ೧೯೭೧, ೧೯೮೧ ಮತ್ತು ೧೯೯೧ನೇ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿನ ವಾಸದ ಮನೆಗಳನ್ನು ಹಾಗೂ ಕುಟುಂಬಗಳನ್ನು ತಾಲೂಕುವಾರು ಗ್ರಾಮಾಂತರ ಮತ್ತು ನಗರ ಪ್ರದೇಶಗಳಿಗೆ ಬೇರೆಬೇರೆಯಾಗಿ ಕೊಟ್ಟಿದೆ.

## ಕೋಷ್ಟಕ : ೩.೩

## ಜನಸಾಂದ್ರತೆ

| ತಾಲೂಕುಗಳು | ೧೯೭೧ | | | ೧೯೮೧ | | |
|---|---|---|---|---|---|---|
| | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು |
| ಅಫಜಲಪುರ | ೮೫.೬೫ | -- | ೮೫.೬೫ | ೮೭.೮೭ | ೫೨೯೪.೦೦ | ೯೫.೮೫ |
| ಆಳಂದ | ೧೦೧.೫೬ | ೫೬೭೫.೭೯ | ೧೧೩.೭೮ | ೧೧೦.೦೩ | ೨೪೪೭.೬೯ | ೧೨೪.೫೯ |
| ಚಿಂಚೋಳಿ | ೮೦.೫೧ | ೫೬.೯೨ | ೮೫.೧೯ | ೯೪.೩೦ | ೪೯೬೮.೫೭ | ೧೦೦.೮೨ |
| ಚಿತ್ತಾಪುರ | ೯೯.೦೬ | ೧೭೬೩.೫೦ | ೧೨೩.೦೨ | ೯೯.೦೦ | ೨೨೦೪.೩೮ | ೧೪೬.೧೩ |
| ಗುಲಬರ್ಗಾ | ೯೩.೨೩ | ೧೦,೩೯೯.೧೪ | ೧೭೬.೫೫ | ೧೦೬.೪೪ | ೮೨೦.೬೭ | ೨೩೨.೬೧ |
| ಜೇವರಗಿ | ೭೫.೨೨ | -- | ೭೫.೨೨ | ೭೯.೫೨ | ೪೬೦೭.೨೨ | ೮೩.೯೯ |
| ಸೇಡಂ | ೯೪.೫೮ | ೧೮೬೫.೨೫ | ೧೦೫.೧೬ | ೧೧೨.೧೦ | ೧೪೩೮.೪೫ | ೧೨೬.೩೪ |
| ಶಹಾಪುರ | ೮೬.೪೭ | ೨೦,೩೭೦.೦೦ | ೯೪.೯೩ | ೧೦೨.೭೪ | ೪೮೫೯.೭೩ | ೧೧೩.೧೩ |
| ಸುರಪುರ | ೮೩.೬೭ | ೨೬೯೯.೪೯ | ೯೪.೬೭ | ೧೦೯.೧೦ | ೪೪೧೨.೯೩ | ೧೨೨.೮೨ |
| ಯಾದಗಿರಿ | ೮೯.೭೬ | ೬೯೭೬.೪೫ | ೧೧೪.೭೨ | ೧೦೧.೦೭ | ೩೦೧೬.೪೭ | ೧೩೦.೫೮ |
| ಜಿಲ್ಲೆಯ ಒಟ್ಟು | ೮೮.೪೯ | ೪೭೩೬.೨೩ | ೧೦೭.೨೦ | ೯೩.೬೭ | ೩೮೮೯.೮೮ | ೧೨೮.೨೪ |

**ಕೋಷ್ಟಕ : ೩.೪**

## ವಾಸದ ಮನೆಗಳು ಮತ್ತು ಕುಟುಂಬಗಳು

| ತಾಲೂಕುಗಳು | | ೧೯೭೧ ಗ್ರಾಮ | ೧೯೭೧ ನಗರ | ೧೯೭೧ ಒಟ್ಟು | ೧೯೮೧ ಗ್ರಾಮ | ೧೯೮೧ ನಗರ | ೧೯೮೧ ಒಟ್ಟು | ೧೯೯೧ ಗ್ರಾಮ | ೧೯೯೧ ನಗರ | ೧೯೯೧ ಒಟ್ಟು |
|---|---|---|---|---|---|---|---|---|---|---|
| ಅಫಜಲಪುರ | ವಾಸದ ಮನೆಗಳು | ೧೭,೦೧೮ | -- | ೧೭,೦೧೮ | ೧೯,೫೪೫ | ೧,೭೬೬ | ೨೧,೩೩೧ | ೨೫,೧೪೬ | -- | ೨೫,೧೪೬ |
| | ಕುಟುಂಬಗಳು | ೧೮,೭೪೯ | -- | ೧೮,೭೪೯ | ೧೯,೮೦೮ | ೧,೭೮೭ | ೨೧,೫೯೫ | ೨೫,೧೮೯ | -- | ೨೫,೧೮೯ |
| ಆಳಂದ | ವಾಸದ ಮನೆಗಳು | ೨೮,೫೫೧ | ೩,೦೩೮ | ೩೧,೫೮೯ | ೩೨,೪೧೩ | ೩,೯೭೭ | ೩೬,೩೯೦ | ೩೯,೦೪೭ | -- | ೩೯,೦೪೭ |
| | ಕುಟುಂಬಗಳು | ೩೧,೧೦೭ | ೩,೬೨೮ | ೩೪,೭೩೫ | ೩೨,೭೨೩ | ೪,೦೨೯ | ೩೬,೭೫೨ | ೩೯,೨೬೩ | -- | ೩೯,೨೬೩ |
| ಚಿಂಚೋಳಿ | ವಾಸದ ಮನೆಗಳು | ೨೧,೦೫೧ | ೧,೩೯೦ | ೨೨,೪೪೧ | ೨೭,೧೮೯ | ೧,೮೩೦ | ೨೯,೦೧೯ | ೩೧,೦೭೪ | ೧,೮೭೬ | ೩೨,೯೫೦ |
| | ಕುಟುಂಬಗಳು | ೨೩,೧೯೭ | ೧,೪೫೧ | ೨೪,೬೪೮ | ೨೭,೩೨೮ | ೧,೮೪೧ | ೨೯,೧೬೯ | ೩೧,೨೧೮ | ೧,೮೯೭ | ೩೩,೧೧೫ |
| ಚಿತ್ತಾಪುರ | ವಾಸದ ಮನೆಗಳು | ೩೦,೧೯೮ | ೮,೫೫೮ | ೩೮,೭೫೬ | ೩೧,೩೭೪ | ೧೬,೭೬೯ | ೪೭,೧೪೩ | ೩೭,೧೭೫ | ೪,೫೪೭ | ೪೧,೭೨೨ |
| | ಕುಟುಂಬಗಳು | ೩೪,೧೫೧ | ೮,೮೭೩ | ೪೩,೦೨೪ | ೩೧,೭೦೫ | ೧೫,೯೩೩ | ೪೭,೬೩೮ | ೩೭,೩೧೬ | ೪,೬೩೩ | ೪೧,೯೪೯ |
| ಗುಲಬರ್ಗಾ | ವಾಸದ ಮನೆಗಳು | ೨೫,೮೦೩ | ೨೪,೨೪೭ | ೫೦,೦೫೦ | ೩೧,೦೪೫ | ೩೪,೮೯೮ | ೬೫,೯೪೩ | ೩೫,೯೮೫ | ೧,೨೪೨ | ೩೭,೨೨೭ |
| | ಕುಟುಂಬಗಳು | ೨೯,೨೫೯ | ೨೬,೦೧೬ | ೫೫,೨೭೫ | ೩೧,೪೬೧ | ೩೫,೪೭೦ | ೬೬,೯೪೧ | ೩೬,೦೪೯ | ೧,೨೪೨ | ೩೭,೨೯೧ |
| ಜೇವರಗಿ | ವಾಸದ ಮನೆಗಳು | ೨೧,೪೧೭ | -- | ೨೧,೪೧೭ | ೨೫,೨೭೯ | ೧,೪೬೮ | ೨೬,೭೪೭ | ೩೧,೮೭೫ | -- | ೩೧,೮೭೫ |
| | ಕುಟುಂಬಗಳು | ೨೪,೪೧೬ | -- | ೨೪,೪೧೬ | ೨೫,೪೦೩ | ೧,೪೭೫ | ೨೬,೮೭೮ | ೩೧,೯೨೨ | -- | ೩೧,೯೨೨ |
| ಸೇಡಂ | ವಾಸದ ಮನೆಗಳು | ೧೭,೪೦೬ | ೧,೯೪೨ | ೧೯,೩೪೮ | ೨೧,೫೪೨ | ೨,೬೮೪ | ೨೪,೨೨೬ | ೨೩,೬೭೫ | ೨,೧೧೩ | ೨೫,೭೮೮ |
| | ಕುಟುಂಬಗಳು | ೧೯,೧೫೯ | ೨,೩೩೭ | ೨೧,೪೯೬ | ೨೧,೭೮೦ | ೨,೭೦೭ | ೨೪,೪೮೭ | ೨೩,೭೮೩ | ೨,೧೬೨ | ೨೫,೯೪೫ |
| ಶಹಾಪುರ | ವಾಸದ ಮನೆಗಳು | ೨೫,೨೭೧ | ೨,೨೧೮ | ೨೭,೫೮೯ | ೩೧,೦೩೦ | ೨,೯೪೦ | ೩೩,೯೭೦ | ೩೫,೧೮೪ | -- | ೩೫,೧೮೪ |
| | ಕುಟುಂಬಗಳು | ೨೭,೯೧೬ | ೨,೫೨೨ | ೩೦,೪೩೮ | ೩೧,೪೦೮ | ೨,೯೪೯ | ೩೪,೩೫೭ | ೩೫,೩೮೭ | -- | ೩೫,೩೮೭ |
| ಸುರಪುರ | ವಾಸದ ಮನೆಗಳು | ೨೬,೭೬೩ | ೩,೩೨೫ | ೩೦,೦೮೮ | ೩೫,೬೧೧ | ೪,೨೪೫ | ೩೯,೮೫೬ | ೪೦,೨೮೫ | ೧,೦೩೪ | ೪೧,೩೧೯ |
| | ಕುಟುಂಬಗಳು | ೩೦,೧೦೨ | ೩,೮೦೮ | ೩೩,೯೧೦ | ೩೫,೮೮೬ | ೪,೨೭೦ | ೪೦,೧೫೬ | ೪೦,೮೨೩ | ೧,೦೩೬ | ೪೧,೮೫೯ |
| ಯಾದಗಿರಿ | ವಾಸದ ಮನೆಗಳು | ೨೭,೫೧೮ | ೭,೪೧೦ | ೩೪,೯೨೮ | ೩೨,೧೭೮ | ೮,೮೭೩ | ೪೧,೦೫೧ | ೩೭,೧೪೧ | -- | ೩೭,೧೪೧ |
| | ಕುಟುಂಬಗಳು | ೩೦,೮೦೪ | ೮,೩೮೮ | ೩೮,೬೯೨ | ೩೨,೩೦೫ | ೮,೯೮೯ | ೪೧,೧೯೪ | ೩೭,೨೪೮ | -- | ೩೭,೨೪೮ |
| ಜಿಲ್ಲೆಯ ಒಟ್ಟು | ವಾಸದ ಮನೆಗಳು | ೨,೪೦,೯೯೬ | ೫೨,೨೩೮ | ೨,೯೩,೨೩೪ | ೨,೮೭,೨೦೬ | ೭೮,೪೫೦ | ೩,೬೫,೬೫೬ | ೩,೩೬,೫೮೭ | ೧೦,೮೧೨ | ೩,೪೭,೩೯೯ |
| | ಕುಟುಂಬಗಳು | ೨,೬೮,೮೬೦ | ೫೭,೦೨೩ | ೩,೨೫,೩೮೩ | ೨,೮೯,೮೦೭ | ೭೯,೪೬೦ | ೩,೬೯,೨೬೭ | ೩,೩೮,೧೯೮ | ೧೦,೯೭೦ | ೩,೪೯,೧೬೮ |

**ಸಾಂಸ್ಥಿಕ ಕುಟುಂಬಗಳು ಮತ್ತು ಜನಸಂಖ್ಯೆ :**

ವಿದ್ಯಾರ್ಥಿ ನಿಲಯಗಳು, ಭೋಜನಗೃಹಗಳು, ಸೆರೆಮನೆ, ಆಶ್ರಮ, ಮುಂತಾದವುಗಳಲ್ಲಿ ವಾಸಿಸುವ ಜನರನ್ನು ಸಂಸ್ಥೆಗಳ ಜನಸಂಖ್ಯೆಯೆಂದು ಜನಗಣತಿಯಲ್ಲಿಹೇಳುತ್ತಾರೆ. ಗುಲಬರ್ಗಾ ಜಿಲ್ಲೆಯಲ್ಲಿ ೧೯೮೧ರ ಜನಗಣತಿಯಂತೆ ಸಾಂಸ್ಥಿಕ ಕುಟುಂಬಗಳು ಮತ್ತು ಅವುಗಳಲ್ಲಿ ವಾಸಿಸುತ್ತಿದ್ದ ಜನಸಂಖ್ಯೆಯನ್ನು ತಾಲೂಕುವಾರು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಬೇರೆ ಬೇರೇಯಾಗಿ ಈ ಮುಂದಿನ ಕೋಷ್ಟಕದಲ್ಲಿ (೩.೫) ನೀಡಲಾಗಿದೆ. ೧೯೯೧ರ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.

**ಕೋಷ್ಟಕ ೩.೫**

೧೯೮೧ರ ಜನಗಣತಿಯಂತೆ ಜಿಲ್ಲೆಯಲ್ಲಿನ ಸಾಂಸ್ಥಿಕ ಕುಟುಂಬಗಳು ಹಾಗೂ ಜನಸಂಖ್ಯೆ.

| ತಾಲೂಕುಗಳು | | ೧೯೮೧ | | | |
|---|---|---|---|---|---|
| | | ಎ | ಬಿ | ಸಿ | ಡಿ |
| ಅಫಜಲ್‌ಪುರ | ಗ್ರಾಮ | ೯ | ೮೮ | ೨೩ | ೧೧೧ |
| | ನಗರ | ೧೧ | ೪೦ | ೦೧ | ೪೯ |
| | ಒಟ್ಟು | ೨೦ | ೧೨೮ | ೨೪ | ೧೫೨ |
| ಆಳಂದ | ಗ್ರಾಮ | ೧೧ | ೧೦೫ | ೦೮ | ೧೧೩ |
| | ನಗರ | ೪೦ | ೨೭೬ | ೫೮ | ೩೩೪ |
| | ಒಟ್ಟು | ೫೧ | ೩೮೧ | ೬೬ | ೪೪೭ |
| ಚಿಂಚೋಳಿ | ಗ್ರಾಮ | ೧೦ | ೩೫೭ | ೧೦ | ೩೬೭ |
| | ನಗರ | ೦೩ | ೧೦೩ | ೨೩ | ೧೨೬ |
| | ಒಟ್ಟು | ೧೩ | ೪೬೦ | ೩೩ | ೪೯೩ |
| ಚಿತ್ತಾಪುರ | ಗ್ರಾಮ | ೦೭ | ೯೦ | ೦೩ | ೯೩ |
| | ನಗರ | ೨೦ | ೨೯೨ | ೬೦ | ೩೫೨ |
| | ಒಟ್ಟು | ೨೭ | ೩೮೨ | ೬೩ | ೪೪೫ |
| ಗುಲಬರ್ಗಾ | ಗ್ರಾಮ | ೧೨ | ೬೩೯ | ೨೧ | ೬೬೦ |
| | ನಗರ | ೧೬೭ | ೪,೩೭೭ | ೮೩೫ | ೫,೨೧೨ |
| | ಒಟ್ಟು | ೧೭೯ | ೫,೦೧೬ | ೮೫೬ | ೫,೮೭೨ |
| ಜೇವರ್ಗಿ | ಗ್ರಾಮ | ೦೯ | ೧೮೭ | ೦೪ | ೧೯೧ |
| | ನಗರ | ೦೪ | ೧೩೫ | - | ೧೩೫ |
| | ಒಟ್ಟು | ೧೩ | ೩೨೨ | ೦೪ | ೩೨೬ |

| | | | | | |
|---|---|---|---|---|---|
| ಸೇಡಂ | ಗ್ರಾಮ | ೦೯ | ೧೫೫ | ೬೯ | ೨೨೪ |
| | ನಗರ | ೦೭ | ೨೨೯ | ೧೩ | ೨೪೨ |
| | ಒಟ್ಟು | ೧೬ | ೩೮೪ | ೮೨ | ೪೬೬ |
| ಶಹಾಪುರ | ಗ್ರಾಮ | ೨೫ | ೩೨೭ | ೨೩ | ೩೫೦ |
| | ನಗರ | ೧೯ | ೧೯೦ | ೨೮ | ೨೧೮ |
| | ಒಟ್ಟು | ೪೪ | ೫೧೭ | ೫೧ | ೫೬೮ |
| ಸುರಪುರ | ಗ್ರಾಮ | ೭೬ | ೪೮೫ | ೧೦೭ | ೫೯೨ |
| | ನಗರ | ೧೧ | ೩೦೧ | ೧೩೫ | ೩೬ |
| | ಒಟ್ಟು | ೮೭ | ೭೮೬ | ೨೪೨ | ೧,೦೨೮ |
| ಯಾದಗಿರಿ | ಗ್ರಾಮ | ೧೧ | ೧೪೫ | ೦೬ | ೧೫೧ |
| | ನಗರ | ೧೪ | ೫೬೮ | ೨೫ | ೫೯೩ |
| | ಒಟ್ಟು | ೨೫ | ೭೧೩ | ೩೧ | ೭೪೪ |
| ಜಿಲ್ಲೆಯ ಒಟ್ಟು | ಗ್ರಾಮ | ೧೭೯ | ೨,೫೭೮ | ೨೭೪ | ೨,೮೫೨ |
| | ನಗರ | ೨೯೬ | ೬,೫೧೧ | ೧೧೭೮ | ೭,೬೮೯ |
| | ಒಟ್ಟು | ೪೭೫ | ೯,೦೮೯ | ೧೪೫೨ | ೧೦,೫೪೧ |

ಸೂಚನೆ : ಎ - ಸಾಂಸ್ಥಿಕ ಕುಟುಂಬಗಳ ಸಂಖ್ಯೆ, ಬಿ - ಗಂಡಸರು, ಸಿ - ಹೆಂಗಸರು, ಡಿ - ಒಟ್ಟು.

**ನಿರ್ವಸಿತ ಕುಟುಂಬಗಳು ಮತ್ತು ಜನಸಂಖ್ಯೆ :**

ಅಲೆಮಾರಿ ಜನಾಂಗಗಳು, ಭಿಕ್ಷುಕರು,ಮೊದಲಾದವರು ನಿರ್ದಿಷ್ಟವಾದ ವಾಸದ ಮನೆಗಳನ್ನು ಹೊಂದಿರುವುದಿಲ್ಲ. ಸಾಮಾನ್ಯವಾಗಿ ಇವರುಗಳು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಹಳೇಕಟ್ಟಡ, ಮಂಟಪಗಳು, ಧರ್ಮಶಾಲೆಗಳು, ರಸ್ತೆಬದಿಗಳು ಮೊದಲಾದ ಕಡೆಗಳಲ್ಲಿ ವಾಸಿಸುತ್ತಾರೆ. ಇಂಥವರನ್ನು ಜನಗಣತಿಯಲ್ಲಿ ನಿರ್ವಸಿತ ಅಥವಾ ಮನೆಯಿಲ್ಲದ ಕುಟುಂಬಗಳು ಎಂದು ಕರೆದಿದ್ದಾರೆ. ಈ ಕೆಳಗಿನ ಕೋಷ್ಟಕದಲ್ಲಿ (೩.೬) ೧೯೮೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಅಂತಹ ಕುಟುಂಬಗಳು ಹಾಗೂ ಅವುಗಳ ಜನಸಂಖ್ಯೆಯನ್ನು ತಾಲೂಕುವಾರು ಹಾಗೂ ಗ್ರಾಮಾಂತರ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ಕೊಡಲಾಗಿದೆ. ೧೯೯೧ರ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.

**ಕೋಷ್ಟಕ ೩.೬**

೧೯೮೧ರ ಜನಗಣತಿಯಂತೆ ಜಿಲ್ಲೆಯಲ್ಲಿನ ನಿರ್ವಸಿತ ಕುಟುಂಬಗಳು ಮತ್ತು ಜನಸಂಖ್ಯೆ.

| ತಾಲೂಕುಗಳು | | ೧೯೮೧ | | | |
|---|---|---|---|---|---|
| | | ಎ | ಬಿ | ಸಿ | ಡಿ |
| ಅಫಜಲ್‌ಪುರ | ಗ್ರಾಮ | ೧೩೮ | ೨೭೦ | ೨೦೧ | ೪೭೧ |
| | ನಗರ | ೧೦ | ೨೧ | ೦೫ | ೨೬ |
| | ಒಟ್ಟು | ೧೪೮ | ೨೯೧ | ೨೦೬ | ೪೯೭ |
| ಆಳಂದ | ಗ್ರಾಮ | ೬೦ | ೧೨೩ | ೯೯ | ೨೨೨ |
| | ನಗರ | ೧೧ | ೧೬ | ೧೧ | ೨೭ |
| | ಒಟ್ಟು | ೭೧ | ೧೩೯ | ೧೧೦ | ೨೪೯ |
| ಚಿಂಚೋಳಿ | ಗ್ರಾಮ | ೧೩೧ | ೨೭೦ | ೨೪೧ | ೫೧೧ |
| | ನಗರ | ೦೮ | ೧೪ | ೦೯ | ೨೩ |
| | ಒಟ್ಟು | ೧೩೯ | ೨೮೪ | ೨೫೦ | ೫೩೪ |
| ಚಿತ್ತಾಪುರ | ಗ್ರಾಮ | ೩೨೫ | ೭೩೮ | ೭೨೭ | ೧,೪೬೫ |
| | ನಗರ | ೧೨೮ | ೨೦೨ | ೧೪೨ | ೩೪೪ |
| | ಒಟ್ಟು | ೪೫೩ | ೯೪೦ | ೮೬೯ | ೧,೮೦೯ |
| ಗುಲಬರ್ಗಾ | ಗ್ರಾಮ | ೩೩೫ | ೬೧೦ | ೫೫೨ | ೧,೧೬೨ |
| | ನಗರ | ೨೪೭ | ೩೪೨ | ೧೮೦ | ೫೨೨ |
| | ಒಟ್ಟು | ೫೮೨ | ೯೫೨ | ೭೩೨ | ೧,೬೮೪ |
| ಜೇವರ್ಗಿ | ಗ್ರಾಮ | ೧೧೭ | ೨೪೮ | ೨೩೮ | ೪೮೬ |
| | ನಗರ | ೦೩ | ೦೭ | ೦೬ | ೧೩ |
| | ಒಟ್ಟು | ೧೨೦ | ೨೫೫ | ೨೪೪ | ೪೯೯ |
| ಸೇಡಂ | ಗ್ರಾಮ | ೨೨೬ | ೪೭೧ | ೪೬೯ | ೯೪೦ |
| | ನಗರ | ೧೭ | ೩೭ | ೨೬ | ೬೩ |
| | ಒಟ್ಟು | ೨೪೩ | ೫೦೮ | ೪೯೫ | ೧,೦೦೩ |
| ಶಹಾಪುರ | ಗ್ರಾಮ | ೩೫೩ | ೭೫೧ | ೬೭೯ | ೧,೪೩೦ |
| | ನಗರ | ೦೪ | ೦೨ | ೦೩ | ೦೫ |

| | | | | | |
|---|---|---|---|---|---|
| | ಒಟ್ಟು | ೩೫೭ | ೭೫೩ | ೬೮೨ | ೧,೪೩೫ |
| ಸುರಪುರ | ಗ್ರಾಮ | ೧೯೫ | ೪೨೧ | ೨೯೦ | ೭೧೧ |
| | ನಗರ | ೧೪ | ೧೯ | ೦೯ | ೨೮ |
| | ಒಟ್ಟು | ೨೦೯ | ೪೪೦ | ೨೯೯ | ೭೩೯ |
| ಯಾದಗಿರಿ | ಗ್ರಾಮ | ೧೧೦ | ೨೬೪ | ೨೬೨ | ೫೨೬ |
| | ನಗರ | ೨೨ | ೭೫ | ೫೮ | ೧೩೩ |
| | ಒಟ್ಟು | ೧೩೨ | ೩೩೯ | ೩೨೦ | ೬೫೯ |
| ಜಿಲ್ಲೆಯ ಒಟ್ಟು | ಗ್ರಾಮ | ೧೯೯೦ | ೪,೧೬೬ | ೩,೭೫೮ | ೭,೯೨೪ |
| | ನಗರ | ೪೬೪ | ೭೩೫ | ೪೪೯ | ೧,೧೮೪ |
| | ಒಟ್ಟು | ೨,೪೫೪ | ೪,೯೦೧ | ೪,೨೦೭ | ೯,೧೦೮ |

ಸೂಚನೆ : ಎ - ನಿರ್ವಸಿತ ಕುಟುಂಬಗಳ ಸಂಖ್ಯೆ; ಬಿ - ಗಂಡಸರು; ಸಿ - ಹೆಂಗಸರು; ಡಿ - ಒಟ್ಟು.

**ವಲಸೆ**

ಹಲವಾರು ಕಾರಣಗಳಿಂದ ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಿ ವಾಸಿಸುವುದಕ್ಕೆ ವಲಸೆ ಎನ್ನುತ್ತಾರೆ. ವಲಸೆಯು ತತ್ಕಾಲಿಕವಾಗಿರಬಹುದು ಇಲ್ಲವೇ ಶಾಶ್ವತವಾಗಿರಬಹುದು. ತತ್ಕಾಲಿಕ ವಲಸೆಯು ವರ್ಷದ ಯಾವುದಾದರೂ ಒಂದು ನಿರ್ದಿಷ್ಟ ಅವಧಿಗೆ ಸೀಮಿತವಾಗಿರುತ್ತದೆ. ಸಾಮಾನ್ಯವಾಗಿ ಮಲೆನಾಡು ಪ್ರದೇಶಗಳಿಗೆ ಮೈದಾನದ ಪ್ರದೇಶದಿಂದ ಬಿತ್ತನೆ ಹಾಗೂ ಸುಗ್ಗಿಯ ಕಾಲದಲ್ಲಿ ಜನ ವಲಸೆ ಹೋಗಿ ನಂತರ ಹಿಂದಿರುಗುತ್ತಾರೆ. ಕೆಲವು ಸಂದರ್ಭಗಳಲ್ಲಿ ನೈಸರ್ಗಿಕ ವಿಕೋಪಗಳೂ ತತ್ಕಾಲಿಕ ವಲಸೆಗೆ ಕಾರಣವಾಗಿರಬಹುದು. ಈ ಜಿಲ್ಲೆಯಿಂದ ವಲಸೆ ಹೋದವರ ಪೈಕಿ ಅನೇಕರು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಕಾರವಾರ, ಮಂಗಳೂರು, ಧಾರವಾಡ, ಗೋವಾಗಳಲ್ಲಿ ಕಟ್ಟಡದ ಕಾರ್ಮಿಕರಾಗಿ, ಬಂದರದ ಕೆಲಸಗಾರರಾಗಿ ಕಂಡು ಬರುವರು. ವಿವಾಹ, ಉದ್ಯೋಗ, ಶಿಕ್ಷಣ ಇವೇ ಮುಂತಾದವುಗಳೂ ಸಹ ವಲಸೆಗೆ ಪ್ರಭಾವಪೂರಿತ ಅಂಶಗಳಾಗಿರುತ್ತವೆ. ೧೯೮೧ರ ಜನಗಣತಿಯಂತೆ ಜಿಲ್ಲೆಯ ಜನಸಂಖ್ಯೆಯಲ್ಲಿ ೧೬೧ ಪುರುಷರು ಮತ್ತು ೭೫ ಸ್ತ್ರೀಯರು ಹೊರದೇಶಗಳಲ್ಲಿ ೨೦,೯೮೯ ಪುರುಷರು ಮತ್ತು ೫೦,೧೮೮ ಸ್ತ್ರೀಯರು ಇತರ ರಾಜ್ಯ ಮತ್ತು ಕೇಂದ್ರಾಡಳಿತ ವ್ಯಾಪ್ತಿಯ ಪ್ರದೇಶಗಳಲ್ಲಿ ಮತ್ತು ೩೮,೩೪೧ ಪುರುಷರು ಹಾಗೂ ೬೬,೪೬೩ ಸ್ತ್ರೀಯರು ರಾಜ್ಯದ ಇತರ ಜಿಲ್ಲೆಗಳಲ್ಲಿ ಜನಿಸಿದವರಾಗಿರುತ್ತಾರೆ. ರಾಜ್ಯದ ಬೇರೆ ಜಿಲ್ಲೆಗಳಿಲ್ಲಿ ಹುಟ್ಟಿ ಗುಲಬರ್ಗಾ ಜಿಲ್ಲೆಯಲ್ಲಿ ಜನಗಣತಿಯಾದವರಲ್ಲಿ ಪ್ರಮುಖರಾಗಿ ೮,೬೩೯ ಪುರುಷರು ಮತ್ತು ೧೮,೯೬೬ ಸ್ತ್ರೀಯರು ಬೀದರ್ ಜಿಲ್ಲೆಗೆ, ೧೫,೮೨೧ ಪುರುಷರು ಮತ್ತು ೯,೮೫೯ ಸ್ತ್ರೀಯರು ರಾಯಚೂರು ಜಿಲ್ಲೆಗೆ ಸೇರಿದವರಾಗಿರುತ್ತಾರೆ. ೧೯೮೧ನೇ ಜನಗಣತಿಯಂತೆ ಹೊರಗಡೆ ಹುಟ್ಟಿ ಗುಲಬರ್ಗಾ ಜಿಲ್ಲೆಯಲ್ಲಿ ಗಣತಿಯಾದ ಜನಸಂಖ್ಯೆಯನ್ನು ಈ ಮುಂದಿನ ಕೋಷ್ಟಕದಲ್ಲಿ (೩.೭) ಕೊಡಲಾಗಿದೆ.

ಹೊರಗಡೆ ಹುಟ್ಟಿ ಜಿಲ್ಲೆಯಲ್ಲಿ ಗಣತಿಯಾದವರ ಸಂಖ್ಯೆಯನ್ನು ೧೯೯೧ರ ಜನಗಣತಿಯಂತೆ ಪುರುಷರು ಮತ್ತು ಸ್ತ್ರೀಯರಿಗನುಗುಣವಾಗಿ ಈ ಮುಂದೆ ಸೂಚಿಸಲಾಗಿದೆ.

ಭಾರತದಲ್ಲಿ (೧೩,೧೩,೨೦೮ : ೧೨,೬೩,೪೭೧ ಕರ್ನಾಟಕದಲ್ಲಿ (೧೨,೯೭,೫೨೮ : ೧೨,೧೨,೯೬೫), ಗಣತಿಯಾಗುವ ಸ್ಥಳದಲ್ಲಿ (೧೧,೬೩,೩೪೨ : ೭,೮೮,೨೧೧), ರಾಜ್ಯದ ಇತರ ಜಿಲ್ಲೆಗಳಲ್ಲಿ (೩೪,೧೬೦ : ೭೫,೭೨೭), ಇತರ ರಾಜ್ಯ ಹಾಗೂ ಕೇಂದ್ರ ಆಡಳಿತ ಪ್ರದೇಶದಲ್ಲಿ (೧೫,೭೮೦ : ೫೦,೫೦೬), ಆಂಧ್ರ ಪ್ರದೇಶ (೬,೪೮೦ :

**ಕೋಷ್ಟಕ : ೩.೭**

**೧೯೮೧ನೇ ಜನಗಣತಿಯಂತೆ ಹೊರಗಡೆ ಹುಟ್ಟಿ ಜಿಲ್ಲೆಯಲ್ಲಿ ಗಣತಿಯಾದವರು.**

| ಕ್ರ.ಸಂ. | ಹುಟ್ಟದ ಸ್ಥಳ | ಗ್ರಾಮಾಂತರ | | ನಗರ | | ಒಟ್ಟು | |
|---|---|---|---|---|---|---|---|
| | | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ೧ | ಭಾರತದಲ್ಲಿ | ೮,೦೪,೩೦೫ | ೮,೦೦,೫೧೫ | ೨,೪೫,೭೦೨ | ೨,೨೯,೮೫೧ | ೧೦,೫೦,೦೦೬ | ೧೦,೩೦,೧೬೬ |
| ೨ | ಕರ್ನಾಟಕದಲ್ಲಿ | ೭,೯೪,೬೧೦ | ೭,೬೬,೦೭೨ | ೨,೩೪,೪೦೭ | ೨,೧೪,೧೦೭ | ೧೦,೨೯,೦೦೭ | ೯೯,೧೭೦ |
| ೩ | ಗಣತಿಯಾಗುವ ಸ್ಥಳದಲ್ಲಿ | ೭,೦೯,೫೩೧ | ೪,೫೦,೧೩೧ | ೧,೭೩,೫೮೬ | ೧,೪೬,೬೫೯ | ೮,೮೩,೧೧೬ | ೫,೯೬,೭೯೦ |
| ೪ | ಜಿಲ್ಲೆಯಲ್ಲಿ | ೬೪,೫೩೪ | ೨,೬೬,೯೭೧ | ೪೩,೦೨೬ | ೪೯,೯೫೫ | ೧,೦೭,೫೬೦ | ೩,೧೬,೯೨೬ |
| ೫ | ರಾಜ್ಯದ ಇತರ ಜಿಲ್ಲೆಗಳಲ್ಲಿ | ೨೦,೫೪೫ | ೪೮,೯೭೦ | ೧೭,೭೯೬ | ೧೭,೪೯೩ | ೩೮,೩೪೧ | ೬೬,೪೬೩ |
| ೬ | ಇತರ ರಾಜ್ಯ ಹಾಗೂ ಕೇಂದ್ರ ಆಡಳಿತ ಪ್ರದೇಶದಲ್ಲಿ | ೯,೬೯೪ | ೩೪,೪೪೪ | ೧೧,೨೯೫ | ೧೫,೭೪೪ | ೨೦,೯೮೯ | ೫೦,೧೮೮ |
| ೭ | ಆಂಧ್ರ ಪ್ರದೇಶ | ೪,೯೭೫ | ೧೮,೭೬೦ | ೩,೨೦೨ | ೫,೯೧೦ | ೮,೧೭೭ | ೨೪,೬೭೯ |
| ೮ | ಕೇರಳ | ೨೭೨ | ೧೧೫ | ೫೬೯ | ೩೨೨ | ೮೪೧ | ೪೩೭ |
| ೯ | ಮಹಾರಾಷ್ಟ್ರ | ೩,೭೬೪ | ೧೫,೧೮೩ | ೪,೨೧೫ | ೮,೦೮೯ | ೭,೯೭೯ | ೨೩,೨೭೨ |
| ೧೦ | ತಮಿಳುನಾಡು | ೧೯೯ | ೧೬೬ | ೬೧೩ | ೪೪೭ | ೮೧೨ | ೬೧೨ |
| ೧೧ | ಉತ್ತರ ಪ್ರದೇಶ | ೩೬೪ | ೧೪ | ೫೫೩ | ೧೩೪ | ೯೧೬ | ೧೪೮ |
| ೧೨ | ಏಷ್ಯ ರಾಷ್ಟ್ರಗಳಲ್ಲಿ | ೫೬ | ೩೪ | ೧೧೯ | ೫೦ | ೧೭೧ | ೮೪ |

ಆಧಾರ : ಭಾರತದ ಜನಗಣತಿ ಸರಣಿ ೯ ಭಾಗ -೫ - ಎ ಮತ್ತು ಬಿ ೧೯೮೧

೨೨,೯೪೦), ಕೇರಳ (೩೮೦ : ೪೯೯), ಮಹಾರಾಷ್ಟ್ರ (೬,೫೫೦ : ೨೫,೨೩೬), ತಮಿಳುನಾಡು (೭೯೦ : ೬೨೦), ಉತ್ತರ ಪ್ರದೇಶ (೩೭೦ : ೨೫೦) ಮತ್ತು ಏಷ್ಯ ರಾಷ್ಟ್ರಗಳಲ್ಲಿ (೫೦೦ : ೫೧೦). ಆವರಣದಲ್ಲಿರುವ ಮೊದಲನೆ ಸಂಖ್ಯೆಯು ಪುರುಷರ ಸಂಖ್ಯೆಯನ್ನು ಮತ್ತು ಎರಡನೇ ಸಂಖ್ಯೆಯು ಸ್ತ್ರೀಯರ ಸಂಖ್ಯೆಯನ್ನು ಸೂಚಿಸುತ್ತದೆ.

**ಸ್ತ್ರೀ ಪುರಷರ ಪ್ರಮಾಣ :**

ಸ್ತ್ರೀ-ಪುರುಷರ ಪ್ರಮಾಣವೆಂದರೆ ಪ್ರತಿ ಸಾವಿರ ಗಂಡಸರಿಗೆ ಇರುವ ಹೆಂಗಸರ ಸಂಖ್ಯೆ. ಸ್ತ್ರೀ-ಪುರುಷರ ಪ್ರಮಾಣವು ಒಂದು ಪ್ರದೇಶದಲ್ಲಿನ ಸಂಪ್ರದಾಯಗಳು, ಜನರ ವಲಸೆ, ಸ್ತ್ರೀಯರ ಮತ್ತು ಪುರಷರ ಸಾವಿನ ಪ್ರಮಾಣದ ಅಂತರ ಮೊದಲಾದವುಗಳನ್ನು ಅವಲಂಬಿಸಿರುತ್ತದೆ. ೧೯೮೧ ಮತ್ತು ೧೯೯೧ರ ಜನಗಣತಿಯಂತೆ ಗುಲಬರ್ಗಾ ಜಿಲ್ಲೆಯಲ್ಲಿ ಸ್ತ್ರೀ-ಪುರುಷರ ಪ್ರಮಾಣವು ಕ್ರಮವಾಗಿ ೯೮೧ ಮತ್ತು ೯೬೨ ಆಗಿದ್ದು ಇದು ರಾಜ್ಯದ ಸ್ತ್ರೀ-ಪುರುಷರ ಪ್ರಮಾಣದ ಅಂಕಿ ಅಂಶಕ್ಕಿಂತ ಕ್ರಮವಾಗಿ (೯೬೩ ಮತ್ತು ೯೬೦) ಅಧಿಕವಾಗಿರುತ್ತದೆ. ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗನುಗುಣವಾಗಿ ಹೋಲಿಸಿದರೆ ೧೯೮೧ ಹಾಗೂ ೧೯೯೧ರ ಜನಗಣತಿಯಂತೆ ಗ್ರಾಮಾಂತರ ಪ್ರದೇಶದ ಸ್ತ್ರೀ-ಪುರುಷರ ಪ್ರಮಾಣವು ನಗರ ಪ್ರದೇಶದ ಸ್ತ್ರೀ ಪುರುಷರ ಪ್ರಮಾಣಕ್ಕಿಂತ ಅಧಿಕವಾಗಿರುತ್ತದೆ. ೧೯೮೧ರ ಜನಗಣತಿಯಂತೆ ಜಿಲ್ಲೆಯ ತಾಲೂಕುವಾರು ಅಂಕಿ ಅಂಶಗಳನ್ನು ಗಮನಿಸಿದರೆ ಗುಲಬರ್ಗಾ ತಾಲೂಕಿನಲ್ಲಿ ಅತಿ ಕಡಿಮೆಯೂ (೯೩೫) ಮತ್ತು ಸೇಡಂ ತಾಲೂಕಿನಲ್ಲಿ ಅತಿ ಹೆಚ್ಚಾಗಿಯೂ (೧೦೧೨) ಕಂಡು ಬರುತ್ತದೆ. ಇದಕ್ಕೆ ಗುಲಬರ್ಗಾ ತಾಲೂಕು ಹೆಚ್ಚು ನಗರೀಕರಣವಾಗಿರುವದು ಕಾರಣವಾಗಿರಬಹುದು. ಗ್ರಾಮಾಂತರ ಪ್ರದೇಶಗಳ ಸ್ತ್ರೀಪುರುಷರ ಪ್ರಮಾಣವನ್ನು ಗಮನಿಸಿದರೆ ಜಿಲ್ಲೆಯ ಐದು ತಾಲೂಕುಗಳಲ್ಲಿ ಸ್ತ್ರೀ-ಪುರುಷರ ಪ್ರಮಾಣವು, (ಶಹಾಪುರ, ಚಿತ್ತಾಪುರ, ಜೇವರ್ಗಿ, ಸೇಡಂ ಮತ್ತು ಯಾದಗಿರಿ) ೧೦೦೦ ಕ್ಕಿಂತ ಹೆಚ್ಚಾಗಿರುತ್ತದೆ. ಈ ಮುಂದಿನ ಕೋಷ್ಟಕದಲ್ಲಿ (೩.೮) ಸ್ತ್ರೀ-ಪುರುಷರ ಪ್ರಮಾಣವನ್ನು ಗ್ರಾಮಾಂತರ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ೧೯೦೧ ರಿಂದ ೧೯೯೧ರವರೆವಿಗೆ ಕೊಟ್ಟಿದೆ.

**ಕೋಷ್ಟಕ ೩.೮**
**ಸ್ತ್ರೀ - ಪುರುಷರ ಪ್ರಮಾಣ**

| ದಶಕಗಳು | ಪ್ರತಿಸಾವಿರ ಪುರುಷರಿಗೆ ಸ್ತ್ರೀಯರ ಸಂಖ್ಯೆ | | |
|---|---|---|---|
| | ಗ್ರಾಮಾಂತರ | ನಗರ | ಒಟ್ಟು |
| ೧೯೦೧ | ೯೭೪(೯೮೪) | ೯೭೪(೯೭೬) | ೯೭೪(೯೮೩) |
| ೧೯೧೧ | ೯೭೫(೯೮೪) | ೯೭೮(೯೫೯) | ೯೭೫(೯೮೧) |
| ೧೯೨೧ | ೯೭೩(೯೭೫) | ೯೭೪(೯೩೬) | ೯೭೩(೯೬೯) |
| ೧೯೩೧ | ೯೭೨(೯೭೨) | ೯೫೦(೯೨೭) | ೯೭೦(೯೬೫) |
| ೧೯೪೧ | ೯೫೯(೯೬೫) | ೯೬೭(೯೩೫) | ೯೬೦(೯೬೦) |
| ೧೯೫೧ | ೯೯೫(೯೭೪) | ೯೮೧(೯೪೧) | ೯೯೩(೯೬೬) |
| ೧೯೬೧ | ೯೯೬(೯೫೯) | ೯೫೫(೯೧೩) | ೯೮೯(೯೫೯) |
| ೧೯೭೧ | ೯೯೦(೯೭೧) | ೯೪೦(೯೧೩) | ೯೮೭(೯೫೯) |
| ೧೯೮೧ | ೯೯೫(೯೭೮) | ೯೩೫(೯೨೬) | ೯೮೧(೯೬೩) |
| ೧೯೯೧ | ೯೭೩(೯೭೩) | ೯೨೫(೯೩೦) | ೯೬೨(೯೬೦) |

**ಆಧಾರ** : ಭಾರತದ ಜನಗಣತಿ ೧೯೮೧ ಸರಣಿ ೯ ಕರ್ನಾಟಕ ಭಾಗ ೨೪ ಹಾಗೂ ೧೯೯೧ರ ಜನಗಣತಿ.

ಸೂಚನೆ : ಆವರಣದಲ್ಲಿರುವ ಸಂಖ್ಯೆಗಳು ರಾಜ್ಯದಲ್ಲಿನ ಸ್ತ್ರೀ-ಪುರುಷರ ಪ್ರಮಾಣವನ್ನು ಸೂಚಿಸುತ್ತದೆ.

**ವಯೋಮಾನದಂತೆ ವಿಂಗಡಣೆ**

ಜನತೆಯನ್ನು ವಯೋಮಾನದ ಆಧಾರದ ಮೇಲೆ ವಿಂಗಡಿಸುವುದು ಜನತೆಯ ಲಕ್ಷಣವನ್ನು ಸೂಚಿಸುವ ಒಂದು ಪ್ರಮುಖ ಸಾಮಾಜಿಕ ಅಂಶವಾಗಿದೆ. ಇದರಿಂದ ದುಡಿಯುವ ವಯಸ್ಸಿನವರು ಹಾಗೂ ದುಡಿಯಲು ಸಾಧ್ಯವಿಲ್ಲದವರು ಎಷ್ಟು ಎಂಬುದು ತಿಳಿದು ಬರುತ್ತದೆ. ಸಾಮಾನ್ಯವಾಗಿ ೧೫ ವರ್ಷಗಳಿಗಿಂತ ಕಡಿಮೆ ವಯಸ್ಸಿನವರನ್ನು ಹಾಗೂ ೬೦ ವರ್ಷಕ್ಕಿಂತ ಹೆಚ್ಚು ವಯಸ್ಸಿನವರನ್ನು ವೃತ್ತಿಯೋಗ್ಯರೆಂದು ಪರಿಗಣಿಸುವುದಿಲ್ಲ. ೧೯೮೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಅಂತಹವರ ಸಂಖ್ಯೆ ೧,೯೧,೪೯೯ ಆಗಿದ್ದು ಇದು ಜಿಲ್ಲೆಯ ಒಟ್ಟು ಜನಸಂಖ್ಯೆ ಶೇ ೪೦.೨೯ ಆಗಿರುತ್ತದೆ. ಈ ಕೆಳಗಿನ ಕೋಷ್ಟಕ (೩.೯)ರಲ್ಲಿ ೧೯೮೧ರ ಜನಗಣತಿಯಂತೆ ಜಿಲ್ಲೆಯ ಜನತೆಯ ವಯೋಮಾನಗಳ ಗುಂಪು ವಯೋಮಾನದ ಗುಂಪಿನ ಶತಾಂಶ (ಶೇಕಡಾ) ಹಾಗೂ ರಾಜ್ಯದ ವಯೋಮಾನದ ಗುಂಪಿನ ಶತಾಂಶವನ್ನು ಕೊಡಲಾಗಿದೆ.

**ವಯೋ ಗುಂಪು ಮತ್ತು ವೈವಾಹಿಕ ಸ್ಥಿತಿ**

ಜನತೆಯನ್ನು ವೈವಾಹಿಕ ಸ್ಥಿತಿಯ ಆಧಾರದ ಮೇಲೆ ನಾಲ್ಕು ಗುಂಪುಗಳಾಗಿ ಅಂದರೆ ವಿವಾಹವಾಗದವರು, ವಿವಾಹವಾದವರು, ವಿವಾಹ ವಿಚ್ಛೇಧನ ಪಡೆದವರು ಹಾಗೂ ಬೇರೆಯಾದವರು ಮತ್ತು ವಿಧುರರು ಹಾಗೂ ವಿಧವೆಯರು ಎಂಬುದಾಗಿ ವಿಂಗಡಗಿಸುತ್ತಾರೆ. ಈ ವಿಂಗಡಣೆಯಿಂದ ಬಾಲ್ಯ ವಿವಾಹ, ವಿಧವಾ ವಿವಾಹ ಮೊದಲಾದ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ತಿಳಿಯಬಹುದೇ ಅಲ್ಲದೆ ಸಾಮಾಜಿಕ ಅಧ್ಯಯನ ಮಾಡಲೂ ನೆರವಾಗುತ್ತದೆ. ಈ ಮುಂದಿನ ಕೋಷ್ಟಕಗಳಲ್ಲಿ (೩.೧೦ ಎ, ಬಿ ಮತ್ತು ಸಿ.) ವಯೋಗುಂಪಿಗೆ  ಅನುಗುಣವಾಗಿ ಜನರ ವೈವಾಹಿಕ ಸ್ಥಿತಿಯನ್ನು ಗ್ರಾಮಾಂತರ, ನಗರ ಹಾಗೂ ಒಟ್ಟು ಜನಸಂಖ್ಯೆಗೆ ೧೯೮೧ರ ಜನಗಣತಿಯಂತೆ ಕೊಡಲಾಗಿದೆ. ಇಲ್ಲಿ ೦ - ೯ ವಯೋಗುಂಪಿನವರನ್ನು ಅವಿವಾಹಿತರೆಂದು ಪರಿಗಣಿಸಲಾಗಿದೆ.

**ಗ್ರಾಮೀಣ ಜನತೆ**

ಜಿಲ್ಲೆಯ ಗ್ರಾಮೀಣ ಜನಸಂಖ್ಯೆಯ ಪ್ರಮಾಣವು ೧೯೮೧ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ ೭೭.೧೪ ಆಗಿದ್ದು, ೧೯೯೧ರ ಜನಗಣತಿಯಂತೆ ಇದು ಶೇ ೭೬.೩೮ ಆಗಿರುತ್ತದೆ. ಇದರಿಂದ ಈ ದಶಕದಲ್ಲಿ ಗ್ರಾಮೀಣ ಜನತೆಯ ಪ್ರಮಾಣದಲ್ಲಿ ಸ್ವಲ್ಪ ಇಳಿಮುಖ ಕಂಡುಬರುತ್ತದೆ. ಅಲ್ಲದೆ ಜಿಲ್ಲೆಯ ತಾಲೂಕುಗಳಲ್ಲಿ ಗ್ರಾಮೀಣ ಮತ್ತು ನಗರಗಳ ಜನತೆಯ ಬೆಳವಣಿಗೆಯು ಏಕರೀತಿಯಾಗಿರುವುದಿಲ್ಲ. ೧೯೭೧-೮೧ರ ದಶಕದಲ್ಲಿ ಚಿತ್ತಾಪುರ ತಾಲೂಕಿನಲ್ಲಿ ಗ್ರಾಮೀಣ ಜನಸಂಖ್ಯೆಯು ಶೇ. ೦.೮೪ರಷ್ಟು ಇಳಿಮುಖವಾಗಿದ್ದು ಸುರಪುರ ತಾಲೂಕಿನಲ್ಲಿ ಶೇ ೨೮.೦೭ ರಷ್ಟು ಹೆಚ್ಚಿದ್ದರೆ ೧೯೮೧-೯೧ರ ದಶಕದಲ್ಲಿ ಸೇಡಂ ತಾಲೂಕಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದು (ಶೇ. ೧೪.೩೨) ಅಫಜಲ್‌ಪುರ ತಾಲ್ಲೂಕ್ಕಿನಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿಯೂ (ಶೇ. ೩೧.೭೬) ಗ್ರಾಮೀಣ ಜನಸಂಖ್ಯೆ ಹೆಚ್ಚಿರುತ್ತದೆ. ಜನಗಣತಿಯ ಆಧಾರದ ಮೇಲೆ ಜಿಲ್ಲೆಯಲ್ಲಿ ೧೯೦೧ರಿಂದ ೧೯೯೧ರವರೆವಿಗೆ ಪ್ರತಿ ದಶಕದಲ್ಲಿ ಜನವಸತಿಯಿದ್ದ ಗ್ರಾಮಗಳ ಸಂಖ್ಯೆಯನ್ನು ಈ ಮುಂದೆ ಆವರಣದಲ್ಲಿ ನೀಡಲಾಗಿದೆ. ೧೯೦೧ - (೧,೧೦೨), ೧೯೧೧ - (೧,೫೮೫), ೧೯೨೧ - (೧,೬೭೦), ೧೯೩೧ - (೧,೬೯೮), ೧೯೪೧ - (೧,೭೫೦), ೧೯೫೧ - (೧,೫೫೭), ೧೯೬೧ - (೧,೨೯೮), ೧೯೭೧ - (೧,೩೦೪), ೧೯೮೧ - (೧.೩೦೫), ಮತ್ತು ೧೯೯೧ - (೧,೩೦೨). ಕಾಲಕಾಲಕ್ಕೆ ಉಂಟಾದ ಆಡಳಿತಾತ್ಮಕ ಬದಲಾವಣೆಯಿಂದ ಗ್ರಾಮಗಳ ಸಂಖ್ಯೆಯಲ್ಲಿ ವ್ಯಾಪಕ ಏರಿಳಿತವನ್ನು ಗಮನಿಸಬಹುದು. ೧೯೯೧ರ ಜನಗಣತಿಯಂತೆ ಸುರಪುರ ತಾಲೂಕು ೧೭೬ ಜನವಸತಿಯಿರುವ ಗ್ರಾಮಗಳನ್ನೊಳಗೊಂಡಿದ್ದು ಜಿಲ್ಲೆಯಲ್ಲಿ ಅತಿ ಹೆಚ್ಚು ಗ್ರಾಮಗಳನ್ನು ಮತ್ತು ಅಫಜಲ್‌ಪುರ ತಾಲೂಕು ೮೮ ಜನವಸತಿಯಿರುವ ಗ್ರಾಮಗಳನ್ನೊಳಗೊಂಡಿದ್ದು ಜಿಲ್ಲೆಯಲ್ಲಿ ಅತಿ ಕಡಿಮೆ ಗ್ರಾಮಗಳನ್ನು ಹೊಂದಿರುತ್ತದೆ. ಜಿಲ್ಲೆಯಲ್ಲಿನ ಗ್ರಾಮೀಣ ಜನಸಂಖ್ಯೆಯನ್ನು ೧೯೯೧ರ ಜನಗಣತಿಯಂತೆ ಗಮನಿಸಿದರೆ ಆಳಂದ, ಚಿತ್ತಾಪುರ, ಗುಲಬರ್ಗಾ, ಶಹಾಪುರ, ಸುರಪುರ ಮತ್ತು ಯಾದಗಿರಿ ತಾಲೂಕುಗಳಲ್ಲಿ ಗ್ರಾಮೀಣ ಜನಸಂಖ್ಯೆಯು ಎರಡು ಲಕ್ಷಕ್ಕಿಂತ ಹೆಚ್ಚಾಗಿರುವುದು ಕಂಡು ಬರುತ್ತದೆ ಗ್ರಾಮೀಣ ಸಂಖ್ಯೆಯ ವ್ಯತ್ಯಾಸಗಳಿಗೆ ಗ್ರಾಮಗಳ ವಿಸ್ತೀರ್ಣ, ವಲಸೆ ಹಾಗೂ ನಗರೀಕರಣವು ಕಾರಣವಿದ್ದಿರಬಹುದು. ೧೯೮೧ರ ಜನಗಣತಿಯಂತೆ ಜಿಲ್ಲೆಯಲ್ಲಿನ ಜನಸಂಖ್ಯಾವಾರು

## ಕೋಷ್ಟಕ : ೩.೯

## ೧೯೮೧ರ ಜನಗಣತಿಯಂತೆ ಗುಲಬರ್ಗಾ ಜಿಲ್ಲೆಯ ವಯೋ ಗುಂಪುಗಳು

| ವಯೋ ಗುಂಪುಗಳು | ಜಿಲ್ಲೆಯ ಜನಸಂಖ್ಯೆ | | | ಜಿಲ್ಲೆಯ ಒಟ್ಟು ಜನಸಂಖ್ಯೆ ಶತಾಂಶ (ಶೇ) | | | ರಾಜ್ಯದ ಒಟ್ಟು ಜನಸಂಖ್ಯೆಯ ವಯೋ ಗುಂಪಿನ ಶತಾಂಶ | | |
|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು |
| ೦-೯ | ೨,೯೯,೩೫೦ | ೨,೯೩,೧೪೧ | ೫,೯೨,೪೯೧ | ೨೮.೪೩ | ೨೮.೪೩ | ೨೮.೪೩ | ೨೬.೧೩ | ೨೬.೮೧ | ೨೬.೪೭ |
| ೧೦-೧೪ | ೧,೪೩,೩೪೬ | ೧,೩೩,೩೧೨ | ೨,೭೬,೬೫೮ | ೧೩.೬೧ | ೧೨.೯೩ | ೧೩.೨೭ | ೧೩.೦೦ | ೧೩.೨೯ | ೧೩.೧೬ |
| ೧೫-೧೯ | ೯೩,೨೯೮ | ೮೧,೭೯೩ | ೧,೭೫,೦೯೧ | ೮.೮೬ | ೭.೯೩ | ೮.೪೦ | ೧೦.೧೪ | ೯.೭೮ | ೯.೯೬ |
| ೨೦-೨೪ | ೭೫,೦೨೯ | ೭೮,೧೪೬ | ೧,೫೩,೧೭೫ | ೭.೧೨ | ೭.೫೮ | ೭.೩೫ | ೮.೮೫ | ೮.೮೫ | ೮.೮೫ |
| ೨೫-೨೯ | ೭೪,೬೦೪ | ೮೦,೫೪೭ | ೧,೫೫,೧೫೧ | ೭.೦೮ | ೭.೮೧ | ೭.೪೪ | ೭.೬೩ | ೮.೦೭ | ೭.೮೫ |
| ೩೦-೩೪ | ೬೪,೩೧೫ | ೬೮,೦೯೬ | ೧,೩೨,೪೧೧ | ೬.೧೦ | ೬.೬೦ | ೬.೩೫ | ೮.೮೩ | ೭.೩೬ | ೬.೨೨ |
| ೩೫-೩೯ | ೬೨,೫೯೨ | ೬೧,೮೭೨ | ೧,೨೪,೪೬೪ | ೫.೯೪ | ೬.೬೧ | ೫.೯೭ | ೫.೭೬ | ೫.೭೨ | ೫.೭೪ |
| ೪೦-೪೪ | ೫೭,೧೧೦ | ೫೩,೨೮೨ | ೧,೧೦,೩೯೨ | ೫.೪೨ | ೫.೧೬ | ೫.೨೯ | ೫.೨೧ | ೪.೭೬ | ೪.೯೯ |
| ೪೫-೪೯ | ೪೫,೬೨೯ | ೪೦,೪೫೩ | ೮೬,೦೮೨ | ೪.೩೩ | ೩.೯೨ | ೪.೧೩ | ೪.೫೦ | ೩.೯೩ | ೪.೨೨ |
| ೫೦-೫೪ | ೪೨,೭೯೧ | ೪೧,೭೮೦ | ೮೪,೫೭೧ | ೪.೦೬ | ೪.೦೫ | ೪.೦೫ | ೩.೦೧ | ೩.೬೯ | ೩.೮೦ |
| ೫೫-೫೯ | ೨೩,೪೮೮ | ೨೧,೭೮೬ | ೪೫,೨೭೪ | ೨.೨೩ | ೨.೧೧ | ೨.೧೭ | ೨.೩೭ | ೨.೦೮ | ೨.೨೩ |
| ೬೦-೬೪ | ೨೯,೭೩೩ | ೩೩,೭೧೮ | ೬೩,೪೫೧ | ೨.೮೨ | ೩.೨೧ | ೩.೦೪ | ೨.೭೧ | ೨.೭೯ | ೨.೭೫ |
| ೬೫-೬೯ | ೧೩,೨೯೫ | ೧೫,೦೮೩ | ೨೮,೩೭೮ | ೧.೨೬ | ೧.೪೬ | ೧.೩೬ | ೧.೩೭ | ೧.೪೨ | ೧.೪೦ |
| ೭೦+ | ೨೧,೪೭೨ | ೨೬,೫೧೬ | ೪೭,೯೮೮ | ೨.೦೩ | ೨.೫೩ | ೨.೩೦ | ೨.೩೮ | ೨.೫೮ | ೨.೪೮ |

**ಆಧಾರ** : ಭಾರತ ಜನಗಣತಿ ೧೯೮೧ ಸರಣಿ - ೯ ಕರ್ನಾಟಕ ಭಾಗ ೪ ಎ ಸೋಷಿಯಲ್ ಅಂಡ್ ಕಲ್ಚರಲ್ ಟೇಬಲ್ಸ್.

## ಕೋಷ್ಟಕ : ೩.೧೦ ಎ

### ೧೯೮೧ರ ಜನಗಣತಿಯಂತೆ ಗುಲಬರ್ಗಾ ಜಿಲ್ಲೆಯ ಗ್ರಾಮಾಂತರ ಜನತೆಯ ವಯೋಮಾನ ಹಾಗೂ ವೈವಾಹಿಕ ಸ್ಥಿತಿ.

| ವಯೋ ಗುಂಪುಗಳು | ಒಟ್ಟು ಜನಸಂಖ್ಯೆ | | ವಿವಾಹವಾಗದವರು | | ವಿವಾಹವಾದವರು | | ವಿಧುರ-ವಿಧವೆಯರು | | ವಿವಾಹ ವಿಚ್ಛೇದನೆ ಪಡೆದವರು | |
|---|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಎಲ್ಲಾ ವಯಸ್ಸಿನವರು | ೮೦೪,೩೬೧ | ೮೦೦,೫೫೦ | ೪೪೮,೬೮೩ | ೩೪೪,೪೨೬ | ೩೩೬,೨೩೯ | ೩೫೯,೨೫೦ | ೧೭,೨೬೯ | ೯೩,೫೭೬ | ೧,೭೦೦ | ೩,೧೯೫ |
| ೦-೯ | ೨,೩೫,೭೩೧ | ೨೨೯,೨೭೧ | ೨,೩೫,೭೩೧ | ೨೨೯,೨೭೧ | -- | -- | -- | -- | -- | -- |
| ೧೦-೧೪ | ೧,೧೦,೨೫೬ | ೧೦೨,೩೯೩ | ೧೦೮,೧೯೨ | ೯೧,೨೨೭ | ೧,೯೧೩ | ೧೦,೯೩೨ | ೬೪ | ೯೫ | ೧೧ | ೬೦ |
| ೧೫-೧೯ | ೬೬,೫೦೮ | ೫೯,೭೦೪ | ೬೦,೨೯೪ | ೧೯,೮೫೨ | ೬,೦೮೫ | ೩೯,೩೦೫ | ೫೫ | ೨೪೯ | ೧೦ | ೨೭೮ |
| ೨೦-೨೪ | ೫೩,೦೦೦ | ೫೮,೪೬೬ | ೨೯,೬೪೩ | ೨,೪೮೮ | ೨೩,೦೩೪ | ೫೪,೬೦೫ | ೧೬೦ | ೭೮೨ | ೧೧೮ | ೫೮೧ |
| ೨೫-೨೯ | ೫೬,೨೯೧ | ೬೧,೮೭೪ | ೯,೯೦೩ | ೬೨೭ | ೪೫,೭೧೪ | ೫೯,೩೩೩ | ೩೬೧ | ೧,೪೩೯ | ೨೫೯ | ೪೭೫ |
| ೩೦-೩೪ | ೪೮,೮೨೪ | ೫೩,೭೫೮ | ೨,೦೬೩ | ೨೩೮ | ೪೫,೯೪೮ | ೫೦,೨೨೯ | ೫೫೫ | ೨,೮೧೨ | ೨೨೯ | ೪೮೦ |
| ೩೫-೩೯ | ೪೮,೫೩೨ | ೪೮,೬೫೫ | ೮೩೭ | ೧೦೪ | ೪೬,೬೨೮ | ೪೩,೮೧೪ | ೭೮೧ | ೪,೨೪೪ | ೨೬೨ | ೪೯೩ |
| ೪೦-೪೪ | ೪೪,೪೯೯ | ೪೨,೬೧೦ | ೪೭೭ | ೧೧೯ | ೪೨,೫೫೬ | ೩೪,೯೫೧ | ೧,೨೩೩ | ೭,೨೬೫ | ೨೧೮ | ೨೭೫ |
| ೪೫-೪೯ | ೩೫,೬೮೮ | ೩೨,೦೯೫ | ೩೫೪ | ೪೧ | ೩೩,೬೯೮ | ೨೪,೦೭೭ | ೧,೪೦೭ | ೭,೭೬೮ | ೨೧೫ | ೨೧೦ |
| ೫೦-೫೪ | ೩೪,೦೧೨ | ೩೩,೮೧೩ | ೨೪೮ | ೪೫ | ೩೧,೨೩೮ | ೧೯,೪೭೪ | ೨,೩೬೬ | ೧೪,೧೭೧ | ೧೩೧ | ೧೨೪ |
| ೫೫-೫೯ | ೧೮,೫೮೬ | ೧೭,೨೨೫ | ೧೨೬ | ೩೩ | ೧೬,೭೫೨ | ೮,೭೫೦ | ೧,೬೪೨ | ೮,೩೮೨ | ೫೧ | ೬೧ |
| ೬೦-೬೪ | ೨೩,೬೯೭ | ೨೭,೨೪೯ | ೨೨೧ | ೩೬ | ೨೦,೨೬೯ | ೭,೮೧೫ | ೩,೦೮೭ | ೧೯,೩೧೫ | ೧೧೦ | ೮೩ |
| ೬೫-೬೯ | ೧೦,೭೯೫ | ೧೧,೮೬೯ | ೭೦ | ೨೦ | ೮,೮೭೧ | ೨,೯೧೬ | ೧,೭೯೭ | ೮,೯೦೮ | ೪೧ | ೨೫ |
| ೭೦+ | ೧೭,೧೮೦ | ೨೦,೯೭೦ | ೧೨೬ | ೩೫ | ೧೩,೨೩೮ | ೨,೭೮೦ | ೩,೭೫೬ | ೧೮,೧೦೪ | ೪೫ | ೫೧ |

**ಕೋಷ್ಟಕ : ೩.೧೦ ಬಿ.**

**೧೯೮೧ರ ಜನಗಣತಿಯ ಪ್ರಕಾರ ಗುಲಬರ್ಗಾ ಜಿಲ್ಲೆಯ ನಗರ ಪ್ರದೇಶಗಳ ಜನಸಂಖ್ಯೆಯ ವಯೋಮಾನ ಹಾಗೂ ವೈವಾಹಿಕ ಸ್ಥಿತಿ.**

| ವಯೋ ಗುಂಪುಗಳು | ಒಟ್ಟು ಜನಸಂಖ್ಯೆ | | ವಿವಾಹವಾಗದವರು | | ವಿವಾಹವಾದವರು | | ವಿಧುರ-ವಿಧವೆಯರು | | ವಿವಾಹ ವಿಚ್ಛೇದನೆ ಪಡೆದವರು | |
|---|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಎಲ್ಲಾ ವಯಸ್ಸಿನವರು | ೨೪೫,೮೨೬ | ೨೨೯,೯೦೬ | ೧೫೦,೩೯೬ | ೧೧೧,೭೧೬ | ೯೨,೨೪೨ | ೯೬,೮೭೩ | ೨,೮೫೪ | ೨೦,೭೨೫ | ೧೨೩ | ೫೧೬ |
| ೦-೯ | ೬೩,೬೧೯ | ೬೩,೮೭೦ | ೬೩,೬೧೯ | ೬೩,೮೭೦ | -- | -- | -- | -- | -- | -- |
| ೧೦-೧೪ | ೩೩,೦೯೧ | ೩೦,೯೧೯ | ೩೨,೮೧೮ | ೨೯,೭೨೯ | ೨೪೮ | ೧,೧೩೩ | ೫ | ೨೬ | -- | ೧೦ |
| ೧೫-೧೯ | ೨೬,೭೯೦ | ೨೨,೦೮೯ | ೨೫,೯೦೧ | ೧೩,೪೩೦ | ೮೩೪ | ೮,೪೯೨ | ೧೬ | ೭೦ | -- | ೭೨ |
| ೨೦-೨೪ | ೨೫,೦೨೯ | ೧೯,೬೯೦ | ೧೯,೪೫೫ | ೩,೩೯೯ | ೫,೫೦೪ | ೧೫,೯೪೯ | ೨೪ | ೨೪೧ | ೧೦ | ೯೬ |
| ೨೫-೨೯ | ೧೮,೩೧೩ | ೧೮,೬೭೨ | ೫,೯೭೪ | ೬೬೦ | ೧೨,೨೫೬ | ೧೭,೫೫೫ | ೪೬ | ೩೫೯ | ೨೬ | ೯೯ |
| ೩೦-೩೪ | ೧೫,೪೯೧ | ೧೪,೩೩೮ | ೧,೩೩೮ | ೧೪೨ | ೧೪,೦೨೦ | ೧೩,೬೧೨ | ೯೭ | ೫೩೨ | ೨೧ | ೫೨ |
| ೩೫-೩೯ | ೧೪,೦೬೦ | ೧೩,೨೧೭ | ೩೫೬ | ೯೮ | ೧೩,೫೨೧ | ೧೨,೨೫೬ | ೧೩೭ | ೮೨೧ | ೨೧ | ೪೨ |
| ೪೦-೪೪ | ೧೨,೬೧೧ | ೧೦,೬೭೨ | ೨೬೬ | ೬೩ | ೧೨,೦೭೧ | ೯,೧೫೩ | ೨೩೮ | ೧,೪೦೦ | ೧೫ | ೫೭ |
| ೪೫-೪೯ | ೯,೯೪೧ | ೮,೩೫೭ | ೧೧೬ | ೪೩ | ೯,೫೪೧ | ೬,೬೪೫ | ೨೬೮ | ೧,೬೩೨ | ೧೫ | ೨೬ |
| ೫೦-೫೪ | ೮,೭೭೯ | ೭,೯೬೬ | ೧೪೦ | ೩೫ | ೮,೩೧೬ | ೫,೦೦೭ | ೨೧೨ | ೨,೮೯೪ | ೫ | ೨೫ |
| ೫೫-೫೯ | ೪,೯೦೨ | ೪,೫೬೧ | ೧೫ | ೧೦ | ೪,೬೩೧ | ೨,೫೯೧ | ೨೫೭ | ೧,೯೪೪ | -- | ೧೬ |
| ೬೦-೬೪ | ೬,೦೩೬ | ೬,೪೬೯ | ೫೬ | ೧೦ | ೫,೪೪೩ | ೨,೩೧೨ | ೫೧೯ | ೪,೧೩೫ | ೧೦ | ೫ |
| ೬೫-೬೯ | ೨,೫೦೧ | ೩,೨೧೩ | ೨೬ | -- | ೨,೧೯೬ | ೧,೦೩೩ | ೨೭೫ | ೨,೧೭೫ | -- | ೫ |
| ೭೦+ | ೪,೨೯೨ | ೫,೫೪೬ | ೪೪ | ೫ | ೩,೫೭೪ | ೧,೦೬೫ | ೬೬೦ | ೪,೪೬೦ | -- | ೧೦ |

## ಕೋಷ್ಟಕ : ೩.೧೦ ಸಿ.

### ೧೯೮೧ರ ಜನಗಣತಿಯಂತೆ ಗುಲಬರ್ಗಾ ಜಿಲ್ಲೆಯ ಒಟ್ಟು ಜನಸಂಖ್ಯೆಯ ವಯೋಮಾನ ಹಾಗೂ ವೈವಾಹಿಕ ಸ್ಥಿತಿ.

| ವಯೋ ಗುಂಪುಗಳು | ಒಟ್ಟು ಜನಸಂಖ್ಯೆ | | ವಿವಾಹವಾಗದವರು | | ವಿವಾಹವಾದವರು | | ವಿಧುರ-ವಿಧವೆಯರು | | ವಿವಾಹ ವಿಚ್ಛೇದನೆ ಪಡೆದವರು | |
|---|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಎಲ್ಲಾ ವಯಸ್ಸಿನವರು | ೧೦,೫೦,೧೮೭ | ೧೦,೩೦,೪೫೬ | ೫೯೯,೦೭೯ | ೪೫೬,೧೪೨ | ೪೨೮,೪೮೦ | ೪೫೬,೧೨೩ | ೨೦,೧೨೩ | ೧೧೪,೩೦೧ | ೧,೮೨೩ | ೩,೭೧೧ |
| ೦-೯ | ೨೯೯,೩೫೦ | ೨೯೩,೧೪೧ | ೨೯೯,೩೫೦ | ೨೯೩,೧೪೧ | -- | -- | -- | -- | -- | -- |
| ೧೦-೧೪ | ೧೪೩,೩೪೬ | ೧೩೩,೩೦೨ | ೧೪೧,೦೦೦ | ೧೨೦,೯೫೬ | ೨,೧೬೧ | ೧೨,೦೬೬ | ೬೯ | ೧೨೧ | ೧೧ | ೭೦ |
| ೧೫-೧೯ | ೯೩,೨೯೮ | ೮೧,೭೯೩ | ೮೬,೧೯೫ | ೩೩,೨೮೨ | ೬,೯೧೯ | ೪೭,೭೯೭ | ೭೧ | ೩೧೯ | ೧೦ | ೩೫೦ |
| ೨೦-೨೪ | ೭೮,೦೨೯ | ೭೮,೧೪೬ | ೪೯,೦೯೮ | ೫,೮೮೭ | ೨೮,೫೩೮ | ೭೦,೫೫೪ | ೧೮೫ | ೧,೦೨೩ | ೧೨೮ | ೬೭೭ |
| ೨೫-೨೯ | ೭೪,೬೦೪ | ೮೦,೫೪೭ | ೧೫,೮೭೬ | ೧,೨೮೬ | ೫೭,೯೭೦ | ೭೬,೮೮೮ | ೪೦೬ | ೧,೭೯೮ | ೨೮೫ | ೫೭೪ |
| ೩೦-೩೪ | ೬೪,೩೧೫ | ೬೮,೦೯೬ | ೩,೪೦೧ | ೩೮೦ | ೫೯,೯೬೭ | ೬೩,೮೪೧ | ೬೫೨ | ೩,೩೪೪ | ೨೫೦ | ೫೩೨ |
| ೩೫-೩೯ | ೬೨,೫೯೨ | ೬೧,೮೭೨ | ೧,೧೯೨ | ೨೦೨ | ೬೦,೧೪೯ | ೫೬,೦೭೦ | ೯೧೮ | ೫,೦೬೬ | ೨೮೨ | ೫೩೫ |
| ೪೦-೪೪ | ೫೭,೧೧೦ | ೫೩,೨೮೨ | ೭೪೩ | ೧೮೧ | ೫೪,೬೨೨ | ೪೪,೧೦೪ | ೧,೪೭೧ | ೮,೬೬೫ | ೨೩೩ | ೩೩೨ |
| ೪೫-೪೯ | ೪೫,೬೨೯ | ೪೦,೪೫೩ | ೪೭೦ | ೮೪ | ೪೩,೨೩೮ | ೩೦,೭೨೨ | ೧,೬೭೫ | ೯,೪೦೧ | ೨೩೦ | ೨೩೬ |
| ೫೦-೫೪ | ೪೨,೭೯೧ | ೪೧,೭೮೦ | ೩೮೮ | ೮೦ | ೩೯,೫೫೫ | ೨೪,೪೮೧ | ೨,೬೭೮ | ೧೭,೦೬೫ | ೧೩೬ | ೧೪೯ |
| ೫೫-೫೯ | ೨೩,೪೮೮ | ೨೧,೭೮೬ | ೧೪೧ | ೪೨ | ೨೧,೩೮೨ | ೧೧,೩೪೧ | ೧,೮೯೯ | ೧೦,೩೨೬ | ೫೧ | ೭೭ |
| ೬೦-೬೪ | ೨೯,೭೩೩ | ೩೩,೭೧೮ | ೨೭೬ | ೪೬ | ೨೫,೭೧೧ | ೧೦,೧೨೭ | ೩,೬೦೬ | ೨೩,೪೫೧ | ೧೨೦ | ೮೮ |
| ೬೫-೬೯ | ೧೩,೨೯೫ | ೧೫,೦೮೩ | ೯೬ | ೨೦ | ೧೧,೦೬೭ | ೩,೯೪೮ | ೨,೦೭೨ | ೧೧,೦೮೪ | ೪೧ | ೩೦ |
| ೭೦+ | ೨೧,೪೭೨ | ೨೬,೫೧೬ | ೧೬೯ | ೪೧ | ೧೬,೮೧೨ | ೩,೮೪೫ | ೪,೪೧೬ | ೨೨,೫೬೪ | ೪೫ | ೬೧ |

ಹಳ್ಳಿಗಳ ಸಂಖ್ಯೆಯು ಈ ರೀತಿ ಇದೆ. ೨೦೦ ಕ್ಕಿಂತ ಕಡಿಮೆ (೫೫೪೪,೨೨) ೨೦೦ - ೪೯೯ (೨೩೧; ೧೭.೭೦) : ೫೦೦-೪೯೯೯ (೮೧೨; ೬೨.೨೨) ಹಾಗೂ ೫೦೦೦ - ೯,೯೯೯ (೨೩-೧.೭೬) ಆವರಣದಲ್ಲಿರುವ ಮೊದಲನೇ ಸಂಖ್ಯೆಯು ಹಳ್ಳಿಗಳ ಸಂಖ್ಯೆಯನ್ನು ಮತ್ತು ಎರಡನೇ ಸಂಖ್ಯೆಯು ಆ ಶ್ರೇಣಿಯಲ್ಲಿನ ಒಟ್ಟು ಶೇಕಡಾವಾರು ಹಳ್ಳಿಗಳ ಸಂಖ್ಯೆಯನ್ನು ಸೂಚಿಸುತ್ತದೆ. ೧೯೯೧ರ ಜನಗಣತಿಯ ಪ್ರಕಾರ ಜಿಲ್ಲೆಯ ೧೯೮೧ ಹಾಗೂ ೧೯೯೧ರ ತಾಲೂಕುವಾರು ಗ್ರಾಮಗಳ ವರ್ಗೀಕರಣ ಮತ್ತು ಗ್ರಾಮೀಣ ಜನಸಂಖ್ಯೆಯನ್ನು ಹಾಗೂ ೧೯೮೧ರ ಜನಗಣತಿಯ ಪ್ರಕಾರ ಜನಸಂಖ್ಯೆಯ ಆಧಾರದ ಮೇಲೆ ಗ್ರಾಮಗಳ ವರ್ಗೀಕರಣವನ್ನು ಈ ಮುಂದಿನ ಎರಡು ಕೋಷ್ಟಕಗಳಲ್ಲಿ (೩.೧೧ ಎ ಹಾಗೂ ೩.೧೧ ಬಿ) ಕೊಡಲಾಗಿದೆ.

**ಪಟ್ಟಣಗಳ ಜನಸಂಖ್ಯೆ ಹಾಗೂ ಬೆಳವಣಿಗೆ**

ಹಲವಾರು ಕಾರಣಗಳಿಂದ ಗ್ರಾಮಗಳು ಬೆಳೆದು ಪುರಗಳಾಗಿ ಹಾಗೂ ನಗರಗಳಾಗಿ ರೂಪಗೊಂಡಿರುವುದನ್ನು ಇತಿಹಾಸದ ಉದ್ದಕ್ಕೂ ಗಮನಿಸಬಹುದು. ಪ್ರಾಚೀನ ಹಾಗೂ ಮಧ್ಯಯುಗದಲ್ಲೂ ವರ್ತಕರ ಸಮುದಾಯಗಳು ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತವಾಗಿದ್ದವು ಮತ್ತು ಇದಕ್ಕೆ ರಾಜಾಶ್ರಯವೂ ಇತ್ತು. ಪಟ್ಟಣ ಮತ್ತು ನಗರಗಳ ಬೆಳವಣಿಗೆಗೆ ನಗರೀಕರಣ ಎನ್ನುತ್ತಾರೆ. ನಗರೀಕರಣವು ಇಪ್ಪತ್ತನೆಯ ಶತಮಾನದ ಒಂದು ಸಾಮಾಜಿಕ ಪ್ರಕ್ರಿಯೆಯಾಗಿದೆ. ಪಟ್ಟಣಗಳನ್ನು ಗ್ರಾಮೀಣ ಪ್ರದೇಶದಿಂದ ಪ್ರತ್ಯೇಕಿಸಲು ಕೆಲವು ಲಕ್ಷಣಗಳನ್ನು ಸೂಚಿಸಲಾಗಿದೆ. ಆದರಂತೆ ಪಟ್ಟಣ ಪ್ರದೇಶಗಳಲ್ಲಿ ಕನಿಷ್ಟ ಜನಸಂಖ್ಯೆ ಐದು ಸಾವಿರ ಇರಬೇಕು, ಶೇ. ೭೫ರಷ್ಟು ಜನ ಕೃಷಿಯಲ್ಲದ ಉದ್ಯೋಗವನ್ನು ಅವಲಂಬಿಸಿರಬೇಕು ಮತ್ತು ಜನಸಾಂದ್ರತೆಯು ಚ.ಕಿ.ಮೀ ಗೆ. ೪೦೦ ರಷ್ಟಾದರೂ ಇರಬೇಕು. ಸಾಮಾನ್ಯವಾಗಿ ಪುರಸಭೆ, ನಗರ ಸಭೆ, ದಂಡು ಪ್ರದೇಶ (ಕಂಟೋನಮೆಂಟ್), ಅನುಸೂಚಿತ (ನೋಟಿಫೈಡ್) ಪ್ರದೇಶಗಳು ಪಟ್ಟಣಗಳ ವ್ಯಾಪ್ತಿಯಲ್ಲಿ ಬರುತ್ತವೆ. ೧೯೭೧ರಲ್ಲಿ ಗುಲಬರ್ಗಾ ಜಿಲ್ಲೆಯು ರಾಜ್ಯದ (ಆಗಿನ) ೧೯ ಜಿಲ್ಲೆಗಳ ಪಟ್ಟಣಗಳ ಜನಸಂಖ್ಯೆಗೆ ಸಂಬಂಧಿಸಿದಂತೆ ೧೧ನೇ ಸ್ಥಾನದಲ್ಲಿದ್ದು ೧೯೯೧ರ ಜನಗಣತಿಯಂತೆ ಇದು ರಾಜ್ಯದ ಈಗಿನ ೨೦ ಜಿಲ್ಲೆಗಳಲ್ಲಿ ಏಳನೇ ಸ್ಥಾನವನ್ನು ಪಡೆದಿದೆ. ಜನಗಣತಿಯ ಪ್ರಕಾರ ಪಟ್ಟಣಗಳನ್ನು ಪುನರ್ವರ್ಗೀಕರಿಸಿರುವುದು ಇದಕ್ಕೆ ಕಾರಣ ವಿದ್ದಿರಬಹುದು. ೧೯೮೧ರ ಜನಗಣತಿಯ ಪ್ರಕಾರ ಪುರಸಭಾ ಪಟ್ಟಣಗಳೆಂದು ಗುರುತಿಸಿದ್ದ ಅಫಜಲ್‌ಪುರ ಮತ್ತು ಜೇವರ್ಗಿಯನ್ನು ೧೯೯೧ರ ಜನಗಣತಿಯ ಪ್ರಕಾರ ಗ್ರಾಮೀಣ ಪ್ರದೇಶವೆಂದು ಪುನರ್ವರ್ಗೀಕರಿಸಲಾಗಿದೆ. ೧೯೮೧ರಲ್ಲಿ ಪುರಸಭಾ ಪಟ್ಟಣವೆಂದು ಗುರುತಿಸಿದ್ದ ಚಿಂಚೋಳಿಯನ್ನು ೧೯೯೧ರ ಜನಗಣತಿಯಂತೆ ಜನಗಣತಿಯ ಪಟ್ಟಣ (ಸೆನ್ಸಸ್ ಟೌನ್) ಎಂದು ಪರಿಗಣಿಸಿಲಾಗಿದೆ. ೧೯೯೧ ರ ಜನಗಣತಿಯಂತೆ ಕೃಷ್ಣಾಪುರ (ಕೃಷ್ಣಮೇಲ್ದಂಡೆ ಯೋಜನೆ ಕಾಲೋನಿ), ಹುಣಸಗಿ (ಕೃಷ್ಣಾಮೇಲ್ದಂಡೆ ಯೋಜನೆ ಕ್ಯಾಂಪ್), ಕುರ್ಕುಂಟ ಮತ್ತು ಆದಿತ್ಯನಗರಗಳನ್ನು ಜನಗಣತಿ ಪಟ್ಟಣವೆಂದೂ ಹಾಗೂ ಭೀಮರಾಯನಗುಡಿ ಮತ್ತು ನಾರಾಯಣಪುರಗಳನ್ನು ಶಾಸನಬದ್ಧ ಪಟ್ಟಣಗಳೆಂದೂ (ಸ್ಟಾಟ್ಯುಟರಿಟ್ನ್ - ಅಧಿಸೂಚಿತ ಪ್ರದೇಶ ಸಮಿತಿಗಳು) ಪರಿಗಣಿಸಲಾಗಿದೆ. ಈ ಮುಂದಿನ ಕೋಷ್ಟಕಗಳಲ್ಲಿ (೩.೧೨ 'ಎ' ಮತ್ತು ೩.೧೨ 'ಬಿ') ಕ್ರಮವಾಗಿ ಜಿಲ್ಲೆಯ ಪಟ್ಟಣಗಳನ್ನು, ಜನಸಂಖ್ಯಾ ಬೆಳವಣಿಗೆಯನ್ನು ೧೯೦೧ರಿಂದ ೧೯೯೧ರವರೆವಿಗೆ ಕೊಡಲಾಗಿದೆ. ೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿನ ೧೯ ಪಟ್ಟಣ ಪ್ರದೇಶಗಳನ್ನು ಹಾಗೂ ಜನಸಂಖ್ಯೆಯನ್ನು ಈ ಮುಂದೆ ನೀಡಲಾಗಿದೆ.

ಆಳಂದ (೨೬,೫೬೪) ; ಚಿಂಚೋಳಿ (೧೦,೫೮೪); ಚಿತ್ತಾಪುರ (೧೯,೭೬೭) ; ಶಹಾಬಾದ್ (೪೪,೧೪೨); ಶಹಾಬಾದ್ ಎ. ಸಿ. ಸಿ. (೮,೪೨೪) ; ವಾಡಿ (೨೫,೦೫೦); ವಾಡಿ ಎ.ಸಿ.ಸಿ. (೩,೧೩೫); ಗುಲಬರ್ಗಾ ಹಾಗೂ ನಗರ ಹೊರವಲಯ ಬೆಳವಣಿಗೆ (ಅರ್ಬನ್ ಅಗ್ಲೋಮರೇಷನ್) ಬೆಳವಣಿಗೆಗೆ ಸೇರಿದಂತೆ (೩,೧೦,೯೨೦); ಆದಿತ್ಯನಗರ (೧,೭೮೩) ; ಕುರ್ಗುಂಟ (೮,೨೧೩); ಸೇಡಂ (೨೩,೨೭೦); ಭೀಮಾರಾಯನಗುಡಿ (೭,೦೪೯); ಶಹಾಪುರ (೨೪,೭೪೦); ಹುಣಸಗಿ (ಕೃಷ್ಣಾ ಮೇಲ್ದಂಡೆ ಯೋಜನೆ ಕ್ಯಾಂಪ್ - (೨,೫೯೫); ಕೃಷ್ಣಾಪುರ (ಕೃಷ್ಣಾ ಮೇಲ್ದಂಡೆ ಯೋಜನೆ ಕಾಲೋನಿ) (೧,೫೬೨); ನಾರಾಯಣಪುರ (೪,೦೭೫); ಸುರಪುರ (೩೦,೫೮೯); ಯಾದಗಿರಿ (೪೩,೬೬೬) ಮತ್ತು ಗುರುಮಟಕಲ್ (೧೩,೬೭೪);

## ಕೋಷ್ಟಕ : ೩.೧೧ ಎ.

| ತಾಲೂಕುಗಳು | ೧೯೮೧ | | | ೧೯೯೧ | | |
|---|---|---|---|---|---|---|
| | ಜನವಸತಿ ಇರುವ ಗ್ರಾಮಗಳ ಸಂಖ್ಯೆ | ಜನವಸತಿ ಇಲ್ಲದ ಗ್ರಾಮಗಳ ಸಂಖ್ಯೆ | ಗ್ರಾಮೀಣ ಜನಸಂಖ್ಯೆ | ಜನವಸತಿ ಇರುವ ಗ್ರಾಮಗಳ ಸಂಖ್ಯೆ | ಜನವಸತಿ ಇಲ್ಲದ ಗ್ರಾಮಗಳ ಸಂಖ್ಯೆ | ಗ್ರಾಮೀಣ ಜನಸಂಖ್ಯೆ |
| ಅಫಜಲಪುರ | ೮೯ | ೦೨ | ೧,೧೪,೪೯೦ | ೮೮ | ೦೨ | ೧,೫೦,೮೫೬ |
| ಆಳಂದ | ೧೨೮ | ೦೧ | ೧,೮೯,೬೭೭ | ೧೨೮ | ೦೧ | ೨,೩೪,೨೭೦ |
| ಚಿಂಚೋಳಿ | ೧೩೩ | ೧೨ | ೧,೪೭,೭೬೬ | ೧೩೧ | ೧೪ | ೧,೭೮,೫೭೭ |
| ಚಿತ್ತಾಪುರ | ೧೧೭ | ೦೪ | ೧,೭೦,೮೧೧ | ೧೧೮ | ೦೩ | ೨,೦೮,೯೬೫ |
| ಗುಲಬರ್ಗಾ | ೧೩೯ | ೧೦ | ೧,೮೧,೧೭೯ | ೧೩೯ | ೦೮ | ೨,೧೩,೦೨೪ |
| ಜೇವರ್ಗಿ | ೧೪೪ | ೧೪ | ೧,೪೪,೭೫೪ | ೧೪೬ | ೦೨ | ೧,೮೮,೭೦೭ |
| ಸೇಡಂ | ೧೦೫ | ೦೬ | ೧,೧೩,೬೧೧ | ೧೦೨ | ೦೮ | ೧,೨೯,೮೮೯ |
| ಶಹಾಪುರ | ೧೪೭ | ೦೨ | ೧,೭೩,೬೭೩ | ೧೪೩ | ೧೧ | ೨,೦೮,೪೧೭ |
| ಸುರಪುರ | ೧೭೪ | ೦೨ | ೧,೯೭,೯೨೭ | ೧೭೬ | ೦೯ | ೨,೪೨,೯೧೯ |
| ಯಾದಗಿರಿ | ೧೨೯ | ೧೩ | ೧,೭೧,೦೨೪ | ೧೩೧ | ೦೨ | ೨,೧೬,೭೪೨ |
| ಜಿಲ್ಲೆಯ ಒಟ್ಟು | ೧೩೦೫ | ೮೬ | ೧೬,೦೪,೯೧೧ | ೧೩೦೨ | ೮೦ | ೧೯,೭೨,೩೬೬ |

**ಆಧಾರ** : ೧೯೮೧ ಜನಗಣತಿ - ಕರ್ನಾಟಕ ಸರಣಿ - ೯ - ಭಾಗ - ೧೩ - ಎ- ಬಿ ಹಾಗೂ ೧೯೯೧ರ ಜನಗಣತಿ

## ಕೋಷ್ಟಕ : ೩.೧೧ ಬಿ.

### ಜಿಲ್ಲೆಯಲ್ಲಿ ೧೯೮೧ರ ಜನಗಣತಿ ಪ್ರಕಾರ ಪ್ರತೀ ತಾಲೂಕಿನಲ್ಲೂ ಜನಸಂಖ್ಯೆ ಆಧಾರದ ಮೇಲೆ ಗ್ರಾಮಗಳ ಸಂಖ್ಯೆಯ ವರ್ಗೀಕರಣ.

| ತಾಲೂಕುಗಳು | ೨೦೦ಕ್ಕಿಂತ ಕಡಿಮೆ | | ೨೦೦ - ೪೯೯ | | ೫೦೦ - ೯೯೯ | | ೧೦೦೦ - ೧೯೯೯ | | ೨೦೦೦ - ೪೯೯೯ | | ೫೦೦೦-೯೯೯೯ | |
|---|---|---|---|---|---|---|---|---|---|---|---|---|
| | ಹಳ್ಳಿಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಹಳ್ಳಿಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಹಳ್ಳಿಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಹಳ್ಳಿಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಹಳ್ಳಿಗಳು ಸಂಖ್ಯೆ | ಒಟ್ಟು ಜನಸಂಖ್ಯೆ | ಹಳ್ಳಿಗಳು ಸಂಖ್ಯೆ | ಒಟ್ಟು ಜನಸಂಖ್ಯೆ |
| ಅಫಜಲಪುರ | ೦೬ | ೬೭೪ | ೧೮ | ೬೫೮೮ | ೨೭ | ೨೦೩೭೫ | ೨೦ | ೨೬೮೯೩ | ೧೬ | ೪೬೭೮೩ | ೦೨ | ೧೩೧೭೭ |
| ಆಳಂದ | ೦೧ | ೯೩ | ೧೪ | ೫೬೪೦ | ೪೫ | ೩೪೫೮೧ | ೩೮ | ೫೧೫೭೦ | ೨೬ | ೭೫೫೭೮ | ೦೪ | ೨೧೮೧೫ |
| ಚಿಂಚೋಳಿ | ೦೮ | ೭೪೨ | ೨೪ | ೯೩೫೬ | ೫೦ | ೩೭೦೮೧ | ೩೩ | ೪೭೨೬೭ | ೧೭ | ೪೮೨೪೮ | ೦೧ | ೫೦೭೨ |
| ಚಿತ್ತಾಪುರ | ೦೨ | ೩೦೭ | ೧೪ | ೫೨೯೫ | ೪೨ | ೩೩೮೯೨ | ೩೩ | ೪೮೪೪೮ | ೨೩ | ೬೫೦೩೦ | ೦೩ | ೨೦೦೩೮ |
| ಗುಲಬರ್ಗಾ | ೦೩ | ೬೦ | ೧೭ | ೬೬೬೯ | ೪೬ | ೩೩೭೮೧ | ೫೦ | ೬೮೮೨೩ | ೨೧ | ೫೯೨೧೯ | ೦೨ | ೧೨೬೨೭ |
| ಜೇವರ್ಗಿ | ೦೨ | ೩೦೮ | ೩೯ | ೧೪೧೧೭ | ೫೪ | ೩೮೪೨೯ | ೩೪ | ೪೬೪೨೮ | ೧೫ | ೪೫೪೭೨ | - | - |
| ಸೇಡಂ | ೦೯ | ೯೯೭ | ೨೩ | ೮೭೭೯ | ೪೧ | ೨೯೧೪೫ | ೨೧ | ೩೧೪೮೩ | ೦೮ | ೨೪೭೬೮ | ೦೩ | ೧೯೧೩೪ |
| ಶಹಾಪುರ | ೬೮ | ೮೮೧ | ೨೮ | ೧೦೦೫೪ | ೫೫ | ೩೯೯೫೩ | ೩೪ | ೪೮೨೨೩ | ೧೯ | ೫೫೪೨೮ | ೦೩ | ೧೯೧೩೪ |
| ಸುರಪುರ | ೧೦ | ೧೩೩೪ | ೩೫ | ೧೨೭೪೯ | ೬೬ | ೪೭೫೭೨ | ೪೪ | ೬೨೫೭೫ | ೧೬ | ೪೯೨೧೬ | ೦೩ | ೨೪೪೮೧ |
| ಯಾದಗಿರಿ | ೦೬ | ೭೭೨ | ೧೯ | ೭೩೭೮ | ೩೭ | ೨೭೪೫೨ | ೪೨ | ೬೦೩೩೦ | ೨೩ | ೬೪೩೯೫ | ೦೨ | ೧೦೬೯೭ |
| ಜಿಲ್ಲೆಯ ಒಟ್ಟು | ೫೫ | ೬೧೬೮ | ೨೩೧ | ೮೬೬೨೫ | ೪೬೩ | ೩೪೦೨೬೧ | ೩೪೯ | ೪೯೨೦೪೦ | ೧೮೪ | ೫೩೪೧೩೭ | ೨೩ | ೧೪೫೨೮೦ |

ಆಧಾರ : ೧೯೮೧ರ ಜನಗಣತಿ ಕರ್ನಾಟಕ ಸರಣಿ - ಭಾಗ ೯ - ೨ ಎ.

**ಕೋಷ್ಟಕ ೩.೧೨ (ಎ) : ಪಟ್ಟಣಗಳ ಜನಸಂಖ್ಯಾ ಬೆಳವಣಿಗೆ**

| ದಶಕಗಳು | ಜಿಲ್ಲೆಯ ಪಟ್ಟಣಗಳು ಜನಸಂಖ್ಯೆ | ಜಿಲ್ಲೆಯ ಒಟ್ಟು ಜನಸಂಖ್ಯೆಯ ಶತಾಂಶ | ಪಟ್ಟಣಗಳ ಜನಸಂಖ್ಯೆಯ ದಶಕವಾರು ಬೆಳವಣಿಗೆ | ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶ |
|---|---|---|---|---|
| ೧೯೦೧ | ೬೪,೫೦೮ | ೭.೩೦ | -- | -- |
| ೧೯೧೧ | ೮೩,೩೦೬ | ೮.೬೪ | ೧೮,೭೯೮ | ೨೯.೧೪ |
| ೧೯೨೧ | ೮೪,೨೬೫ | ೯.೪೯ | ೯೫೯ | ೧.೧೫ |
| ೧೯೩೧ | ೧,೧೦,೨೪೮ | ೧೧.೧೩ | ೨೫,೯೮೩ | ೩೦.೮೩ |
| ೧೯೪೧ | ೧,೩೮,೩೫೪ | ೧೩.೦೫ | ೨೮,೧೦೬ | ೨೫.೪೯ |
| ೧೯೫೧ | ೨,೧೭,೬೭೫ | ೧೭.೯೪ | ೭೯,೩೨೧ | ೫೭.೩೩ |
| ೧೯೬೧ | ೨,೨೬,೪೨೧ | ೧೬.೧೮ | ೮,೭೯೬ | ೪.೦೪ |
| ೧೯೭೧ | ೩,೦೯,೨೭೬ | ೧೭.೭೮ | ೮೨,೮೫೫ | ೩೬.೫೯ |
| ೧೯೮೧ | ೪,೭೫,೭೩೨ | ೨೨.೮೬ | ೧,೬೬,೪೫೬ | ೫೩.೮೨ |
| ೧೯೯೧ | ೬,೦೯,೮೦೩ | ೨೩.೬೧ | ೧,೩೪,೦೭೧ | ೨೮.೧೮ |

## ಪರಿಶಿಷ್ಟ ಜಾತಿ

ಭಾರತದ ರಾಜ್ಯಾಂಗದ ೩೪೧ನೇ ವಿಧಿಯಲ್ಲಿ ಸೂಚಿಸಿರುವಂತೆ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿಗಳನ್ನು ಜನಾಂಗಗಳನ್ನು ಅಥವಾ ಅವುಗಳ ಭಾಗಗಳನ್ನು ಪರಿಶಿಷ್ಟ ಜಾತಿಗಳೆಂದು ಕರೆಯುತ್ತಾರೆ. ಭಾರತ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ೧೯೭೬ರಲ್ಲಿ ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟ ವರ್ಗಗಳ (ಬುಡಕಟ್ಟುಗಳ) ಆಜ್ಞೆಗೆ ತಿದ್ದುಪಡಿಯನ್ನು ಮಾಡಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಇವರ ಸಂಖ್ಯೆ ೧೯೮೧ರ ಜನಗಣತಿಯಂತೆ ೪,೫೫,೪೬೨ ಹಾಗೂ ೧೯೯೧ರ ಜನಗಣತಿಯಂತೆ ೬,೧೦,೬೪೧ ಇದ್ದು ಕ್ರಮವಾಗಿ ಜಿಲ್ಲೆಯ ಒಟ್ಟಿನ ಜನಸಂಖ್ಯೆಯ ಶೇ ೨೧.೮೯ ಹಾಗೂ ಶೇ. ೨೩.೬೫ರಷ್ಟಿತ್ತು. ೧೯೮೧ನೇ ಜನಗಣತಿಯಂತೆ ಜಿಲ್ಲೆಯಲ್ಲಿ ವಿವಿಧ ಜಾತಿಗಳಿಗೆ ಸೇರಿದ ೫೦೦ ಕ್ಕೂ ಹೆಚ್ಚು ಜನಸಂಖ್ಯೆ ಇದ್ದ ಪರಿಶಿಷ್ಟ ಜಾತಿಗಳ ಜನಸಂಖ್ಯೆ ಈರೀತಿ ಇತ್ತು. ಬಂಜಾರ (ಲಂಬಾಣಿ) - ೧,೨೧,೮೪೨ ಭಂಗಿ - ೧೪೬೬; ಭಂಬಿ - ೨೪,೫೬೯; ಭೋವಿ - ೨೭,೩೪೪; ಬ್ಯಾಗಾರ್ - ೯೧೮; ಚಲವಾದಿ, ಚಲ್ವಾದಿ ಚನ್ನಯ್ಯ - ೭೫೧; ಚನ್ನದಾಸರ, ಹೊಲೆಯದಾಸರ - ೧೨೭೯; ಡೋರ, ಕಕ್ಕಯ್ಯ, ಕಂಕಯ್ಯ - ೪೮೯೫; ಹೊಲಯ, ಹೊಲೇರ, ಹೊಲೆಯ ೧,೫೧,೧೮೯; ಹೊಲೆಯದಾಸರಿ - ೮೪೯, ಕೊರಮ - ೨೮೯೩; ಮಾದಿಗ - ೮೭,೭೫೫; ಮಹರ್, ತರಲ್, ದೇಗುಮೇಗು ೧೧೬೩; ಮಾಲಾ - ೩,೪೦೬; ಮಾಂಗ್, ಮತಂಗ, ಮಿಣಿಮಾದಿಗ - ೩,೦೮೬; ಮಾಂಗ್‌ಗರುಡಿ, ಮಾಂಗ್‌ಗರೋಡಿ - ೬೧೨ ಮತ್ತು ಸಮಗಾರ - ೬,೧೧೪.

ಈ ಮುಂದಿನ ಕೋಷ್ಟಕದಲ್ಲಿ (೩.೧೩) ೧೯೮೧ ಮತ್ತು ೧೯೯೧ನೇ ಜನಗಣತಿಯ ಪ್ರಕಾರ ಗುಲಬರ್ಗಾ ಜಿಲೆಯಲ್ಲಿದ್ದ ಪರಿಶಿಷ್ಟ ಜಾತಿಗಳ ಜನಸಂಖ್ಯೆಯನ್ನು ತಾಲೂಕುವಾರು ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗನುಗುಣವಾಗಿ ಕೊಡಲಾಗಿದೆ.

## ಕೋಷ್ಟಕ : ೩.೧೨ ಬಿ.

## ಜಿಲ್ಲೆಯ ತಾಲೂಕುವಾರು ಪಟ್ಟಣ ಪ್ರದೇಶಗಳ ಜನಸಂಖ್ಯಾ ಬೆಳವಣಿಗೆ

| ಕ್ರ.ಸಂ. | ಪಟ್ಟಣಗಳು | ೧೯೦೧ | ೧೯೧೧ | ೧೯೨೧ | ೧೯೩೧ | ೧೯೪೧ | ೧೯೫೧ | ೧೯೬೧ | ೧೯೭೧ | ೧೯೮೧ | ೧೯೯೧ |
|---|---|---|---|---|---|---|---|---|---|---|---|
| ೧. | ಅಫ್‌ಜಲ್‌ಪುರ | -- | -- | -- | -- | -- | ೪೦೨೭ | -- | -- | ೧೦೫೮೮ | -- |
| ೨. | ಆಳಂದ್ | ೧೧೧೩೦ | ೧೨೦೫೧ | ೧೧೪೩೧ | ೧೨೯೨೪ | ೧೩೦೪೧ | ೧೫೬೦೭ | ೧೮೦೦೯ | ೨೧೫೬೮ | ೨೬೪೩೫ | ೨೬೫೬೪ |
| ೩. | ಚಿಂಚೋಳಿ | -- | -- | -- | -- | -- | ೫೩೫೨ | ೬೦೪೭ | ೭೩೮೦ | ೧೦೪೩೪ | ೧೦೫೮೪ |
| ೪. | ಚಿತ್ತಾಪುರ | ೫೧೦೫ | ೧೪೯೬೨ | ೧೨೨೭೪ | ೧೪೨೬೧ | ೧೭೩೬೯ | ೨೭೮೬೪ | ೩೧೮೨೮ | ೪೪೭೯೩ | ೮೭೦೭೩ | ೧೦೦೫೧೬ |
| ೫. | ಗುಲಬರ್ಗಾ | ೨೯೨೦೮ | ೩೨೪೩೭ | ೩೫೮೨೦ | ೪೧೦೮೩ | ೫೩೫೫೧ | ೭೭೧೮೯ | ೯೭೦೬೯ | ೧೪೫೫೮೮ | ೨೨೧೩೨೫ | ೩೧೦೯೨೦ |
| ೬. | ಜೇವರ್ಗಿ | -- | -- | -- | -- | ೮೨೯೩ | -- | -- | -- | ೮೨೯೩ | -- |
| ೭. | ಸೇಡಂ | ೫೫೦೩ | ೪೮೬೮ | | ೫೨೮೦ | ೫೬೧೯ | ೮೩೮೭ | ೮೫೨೭ | ೧೧೩೭೮ | ೧೫೮೨೩ | ೩೩೨೬೬ |
| ೮. | ಶಹಾಪುರ | -- | -- | -- | -- | ೫೧೪೬ | ೧೦೫೧೩ | ೧೧೭೭೬ | ೧೪೨೫೯ | ೧೭೯೮೧ | ೩೧೭೮೯ |
| ೯. | ಸುರಪುರ | ೮೨೭೧ | ೮೦೪೫ | ೧೨೭೪೮ | ೧೨೬೭೫ | ೧೧೮೩೬ | ೧೮೩೫೨ | ೧೭೬೮೯ | ೨೧೦೫೬ | ೨೫೧೮೫ | ೫೭೩೪೦ |
| ೧೦. | ಯಾದಗಿರಿ | ೬೨೭೧ | ೧೦೯೪೫ | ೧೧೯೨೨ | ೨೪೦೨೭ | ೨೬೭೦೬ | ೩೧೮೩೧ | ೩೫೪೭೬ | ೪೩೨೫೪ | ೫೨೧೮೫ | ೫೭೩೪೦ |

## ಕೋಷ್ಟಕ : ೩.೧೩ ಪರಿಶಿಷ್ಟ ಜಾತಿ

| ತಾಲೂಕುಗಳು | | ೧೯೮೧ ಪುರುಷರು | ೧೯೮೧ ಸ್ತ್ರೀಯರು | ೧೯೮೧ ಒಟ್ಟು | ೧೯೯೧ ಪುರುಷರು | ೧೯೯೧ ಸ್ತ್ರೀಯರು | ೧೯೯೧ ಒಟ್ಟು |
|---|---|---|---|---|---|---|---|
| ಅಫಜಲಪುರ | ಗ್ರಾಮ | ೧೦,೦೬೨ | ೧೦,೧೭೬ | ೨೦,೨೩೮ | ೧೪,೫೨೪ | ೧೩,೫೮೦ | ೨೮,೧೦೪ |
| | ನಗರ | ೧,೦೧೮ | ೯೮೦ | ೧,೯೯೮ | -- | -- | -- |
| | ಒಟ್ಟು | ೧೧,೦೮೦ | ೧೧,೧೫೬ | ೨೨,೨೩೬ | ೧೪,೫೨೪ | ೧೩,೫೮೦ | ೨೮,೧೦೪ |
| ಆಳಂದ | ಗ್ರಾಮ | ೨೨,೦೭೨ | ೨೧,೮೮೪ | ೪೩,೯೫೬ | ೩೧,೦೪೬ | ೨೯,೭೭೯ | ೬೦,೮೨೫ |
| | ನಗರ | ೧,೬೧೧ | ೧,೪೭೦ | ೩,೦೮೧ | ೧,೫೮೭ | ೧,೪೦೧ | ೨,೯೮೮ |
| | ಒಟ್ಟು | ೨೩,೬೮೩ | ೨೩,೩೫೪ | ೪೭,೦೩೭ | ೩೨,೬೩೩ | ೩೧,೧೮೦ | ೬೩,೮೧೩ |
| ಚಿಂಚೋಳಿ | ಗ್ರಾಮ | ೨೧,೭೧೯ | ೨೧,೨೭೩ | ೪೨,೯೯೨ | ೩೦,೯೮೨ | ೨೯,೭೨೯ | ೬೦,೭೧೧ |
| | ನಗರ | ೭೪೩ | ೬೫೦ | ೧,೩೯೩ | ೯೦೧ | ೮೫೪ | ೧,೭೫೫ |
| | ಒಟ್ಟು | ೨೨,೪೬೨ | ೨೧,೯೨೩ | ೪೪,೩೮೫ | ೩೧,೮೮೩ | ೩೦,೫೮೩ | ೬೨,೪೬೬ |
| ಚಿತ್ತಾಪುರ | ಗ್ರಾಮ | ೨೪,೦೬೩ | ೨೩,೭೮೬ | ೪೭,೮೪೯ | ೩೧,೭೯೬ | ೩೦,೨೭೨ | ೬೨,೦೬೮ |
| | ನಗರ | ೧೨,೭೮೦ | ೧೨,೩೨೩ | ೨೫,೧೦೩ | ೧೫,೭೩೬ | ೧೪,೮೬೯ | ೩೦,೬೦೫ |
| | ಒಟ್ಟು | ೩೬,೮೪೩ | ೩೬,೩೦೯ | ೭೨,೯೫೨ | ೪೭,೫೩೨ | ೪೫,೧೪೧ | ೯೨,೬೭೩ |
| ಗುಲಬರ್ಗಾ | ಗ್ರಾಮ | ೨೪,೯೬೧ | ೨೪,೧೪೧ | ೪೯,೧೦೨ | ೩೨,೫೩೪ | ೩೦,೬೯೨ | ೬೩,೨೨೬ |
| | ನಗರ | ೧೪,೬೫೨ | ೧೨,೪೯೬ | ೫೭,೧೪೮ | ೨೫,೯೨೧ | ೨೨,೮೫೯ | ೪೮,೭೮೦ |
| | ಒಟ್ಟು | ೩೯,೬೧೩ | ೩೬,೬೩೭ | ೭೬,೨೫೦ | ೫೮,೪೫೫ | ೫೩,೫೫೧ | ೧೨,೦೦೬ |

| | | | | | | | |
|---|---|---|---|---|---|---|---|
| ಜೇವರ್ಗಿ | ಗ್ರಾಮ | ೧೩,೧೯೫ | ೧೩,೦೮೯ | ೨೬,೨೮೪ | ೧೯,೧೭೬ | ೧೮,೬೬೪ | ೩೭,೮೪೦ |
| | ನಗರ | ೭೫೯ | ೬೭೯ | ೧,೪೩೮ | -- | -- | -- |
| | ಒಟ್ಟು | ೧೩,೯೫೪ | ೧೩,೭೬೮ | ೨೭,೭೨೨ | ೧೯,೧೭೬ | ೧೮,೬೬೪ | ೩೭,೮೪೦ |
| ಸೇಡಂ | ಗ್ರಾಮ | ೧೪,೭೪೫ | ೧೪,೬೫೫ | ೨೯,೪೦೦ | ೧೭,೦೧೫ | ೧೬,೬೦೫ | ೩೩,೬೨೦ |
| | ನಗರ | ೧,೪೫೫ | ೧,೩೪೫ | ೨,೮೦೦ | ೩,೩೩೭ | ೩,೧೦೦ | ೬,೪೩೭ |
| | ಒಟ್ಟು | ೧೬,೨೦೦ | ೧೬,೦೦೦ | ೩೨,೨೦೦ | ೨೦,೩೫೨ | ೧೯,೭೦೫ | ೪೦,೦೫೭ |
| ಶಹಾಪುರ | ಗ್ರಾಮ | ೨೦,೧೬೫ | ೨೦,೪೨೩ | ೪೦,೫೮೮ | ೨೫,೩೮೪ | ೨೪,೭೬೪ | ೫೦,೧೪೮ |
| | ನಗರ | ೬೫೯ | ೭೦೧ | ೧,೩೭೦ | ೨,೨೬೦ | ೨,೧೮೩ | ೪,೪೪೩ |
| | ಒಟ್ಟು | ೨೦,೮೩೪ | ೨೧,೧೨೪ | ೪೨,೯೫೮ | ೨೭,೬೪೪ | ೨೬,೯೪೭ | ೫೪,೫೯೧ |
| ಸುರಪುರ | ಗ್ರಾಮ | ೧೯,೯೦೪ | ೧೯,೪೨೬ | ೩೯,೩೩೦ | ೨೪,೭೭೭ | ೨೪,೧೩೪ | ೪೮,೯೧೧ |
| | ನಗರ | ೧,೦೦೫ | ೯೮೨ | ೧,೯೮೭ | ೨,೨೭೮ | ೨,೧೬೫ | ೪,೪೪೩ |
| | ಒಟ್ಟು | ೨೦,೯೦೯ | ೨೦,೪೦೮ | ೪೧,೩೧೭ | ೨೭,೦೫೫ | ೨೬,೨೯೯ | ೫೩,೩೫೪ |
| ಯಾದಗಿರಿ | ಗ್ರಾಮ | ೨೧,೧೦೫ | ೨೧,೦೮೩ | ೪೨,೧೮೮ | ೨೮,೯೧೨ | ೨೮,೦೮೩ | ೫೬,೯೯೫ |
| | ನಗರ | ೩,೭೦೦ | ೩,೫೧೭ | ೭,೨೧೭ | ೪,೫೧೧ | ೪,೨೩೧ | ೮,೭೪೨ |
| | ಒಟ್ಟು | ೨೪,೮೦೫ | ೨೪,೬೦೦ | ೪೯,೪೦೫ | ೩೩,೪೨೩ | ೩೨,೩೧೪ | ೬೫,೭೩೭ |
| ಜಿಲ್ಲೆಯ ಒಟ್ಟು | ಗ್ರಾಮ | ೧,೯೧,೯೯೧ | ೧,೮೯,೯೩೬ | ೩,೮೧,೯೨೭ | ೨,೫೬,೧೪೬ | ೨,೪೬,೩೦೨ | ೫,೦೨,೪೪೮ |
| | ನಗರ | ೩೮,೩೯೨ | ೩೫,೧೪೩ | ೭೩,೫೩೫ | ೫೬,೫೩೧ | ೫೧,೬೬೨ | ೧,೦೮,೧೯೩ |
| | ಒಟ್ಟು | ೨,೩೦,೩೮೩ | ೨,೨೫,೦೭೯ | ೪,೫೫,೪೬೨ | ೩,೧೨,೬೭೭ | ೨,೯೭,೯೬೪ | ೬,೧೦,೬೪೧ |

**ಪರಿಶಿಷ್ಟ ವರ್ಗ (ಬುಡಕಟ್ಟು)**

ಭಾರತದ ರಾಜ್ಯಾಂಗದ ೩೪೨ನೇ ವಿಧಿಯಲ್ಲಿ ಸೂಚಿಸಿರುವಂತೆ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿಗಳೂ, ಜಾತಿಯ ಭಾಗಗಳು, ಬುಡಕಟ್ಟುಗಳನ್ನು ಪರಿಶಿಷ್ಟ ವರ್ಗಗಳೆಂದು ಕರೆಯುತ್ತಾರೆ. ಗುಲಬರ್ಗಾ ಜಿಲ್ಲೆಯಲ್ಲಿ ೧೯೮೧ನೇ ಜನಗಣತಿಯ ಪ್ರಕಾರ ಇವರ ಸಂಖ್ಯೆ ೯೭,೬೨೭ ಮತ್ತು ೧೯೯೧ನೇ ಜನಗಣತಿಯ ಪ್ರಕಾರ ೧,೦೬,೯೩೫ ಇದ್ದು ಇದು ಕ್ರಮವಾಗಿ ಜಿಲ್ಲೆಯ ಒಟ್ಟಿನ ಜನಸಂಖ್ಯೆಯ ಶೇ. ೪.೭ ಮತ್ತು ಶೇ. ೪.೧೪ರಷ್ಟಿತ್ತು. ೧೯೮೧ನೇ ಜನಗಣತಿಯಂತೆ ಬೇರೆ ಬೇರೆ ಬುಡಕಟ್ಟಿಗೆ ಸೇರಿದ ೫೦೦ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ ಪರಿಶಿಷ್ಟ ಬುಡಕಟ್ಟುಗಳ ಜನಸಂಖ್ಯೆ ಈ ರೀತಿ ಇತ್ತು.

ಗೊಂಡ, ನಾಯಕಪೋಡ್, ರಾಜಗೊಂಡ - ೧೧,೫೧೩, ಇರುಳಿಗ - ೫೯೨, ಜೇನುಕುರುಬ - ೧೭೨೩, ಕಾಡುಕುರುಬ - ೨೫,೨೮೨, ಕೋಳಿಧೋರ್ ೮೫೦, ಕೋಯ, ಬೀನಕೋಯ, ರಾಜಕೋಯ - ೨೪,೨೦೧, ಮೇದ - ೧,೨೫೯, ನಾಯಕ್ಡ - ೩೧,೦೨೨, ಪರ್ಧಿ, ಅಡವಿ ಚಿಂಚೆರ್, ಫಾನ್ಸೆ ಪರ್ಧಿ - ೫೧೪.

ಈ ಮುಂದಿನ ಕೋಷ್ಟಕ ೩.೧೪ರಲ್ಲಿ ೧೯೮೧ ಮತ್ತು ೧೯೯೧ನೇ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿಯ ಪರಿಶಿಷ್ಟ ಬುಡಕಟ್ಟಿನ ಜನಸಂಖ್ಯೆಯನ್ನು ತಾಲೂಕುವಾರು, ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗನುಗುಣವಾಗಿ ಕೊಡಲಾಗಿದೆ.

**ಅಂಗವಿಕಲರು**

೧೯೪೧ರ ಪೂರ್ವದಲ್ಲೂ ಜನಗಣತಿಯಲ್ಲಿ ಕುರುಡರು, ಕಿವುಡರು, ಮತ್ತು ಮೂಗರನ್ನು ಗಣತಿ ಮಾಡಲಾಗುತ್ತಿತ್ತು. ೧೯೪೧ರ ನಂತರ ಅಂಗವಿಕಲರ ಜನಗಣತಿ ಮಾಡುವುದನ್ನು ನಿಲ್ಲಿಸಲಾಯಿತು. ಪುನಃ ೧೯೮೧ರ ಜನಗಣತಿಯಿಂದ ಅಂಗವಿಕಲರ ಗಣತಿಯನ್ನು ಮುಂದುವರೆಸಲಾಗಿದೆ. ವಾಸದ ಮನೆಗಳ ಜನಗಣತಿಯನ್ನು ಮಾಡುವಾಗ ಕುರುಡರು, ಕಿವುಡರು, ಹಾಗೂ ಕೈ-ಕಾಲೂ ಊನವಾದವರನ್ನು (ಹೆಳವರು) ಪ್ರತ್ಯೇಕವಾಗಿ ಜನಗಣತಿ ಮಾಡಲಾಗಿದೆ. ಆದರೂ ಇದು ನೈಜ ಚಿತ್ರವನ್ನು ಸ್ಪಷ್ಟವಾಗಿ ಕೊಡಲಾರದೆಂಬ ಭಾವನೆಯೂ ಇದೆ. ಇದಕ್ಕೆ ಕಾರಣ ಬಹು ಮಂದಿ ಅಂಗವಿಕಲರು ವಸತಿಯಲ್ಲದೆ ಬಿಕ್ಷುಕರ ಸಮುದಾಯದಲ್ಲಿದ್ದು, ಮನೆಗಳ ಜನಗಣತಿ ಸಮಯದಲ್ಲಿ ಅವರು ಗಣನೆಗೆ ಸಿಕ್ಕದೇ ಹೋಗುವ ಸಂಭವವೂ ಇದೆ. ಜಿಲ್ಲೆಯಲ್ಲಿ ೧೯೧೧ ಮತ್ತು ೧೯೨೧ರ ಜನಗಣತಿಯಂತೆ ಕ್ರಮವಾಗಿ ೪೦೨ ಮತ್ತು ೩೮೯ ಕಿವುಡರು - ಮೂಗರು ಹಾಗೂ ೧,೨೪೭ ಮತ್ತು ೧,೫೫೯ ಕುರುಡರೂಇದ್ದರು. ೧೯೮೧ರ ತತ್ಕಾಲಿಕ ಜನಗಣತಿಯಂತೆ ಗುಲಬರ್ಗಾ ಜಿಲ್ಲೆಯಲ್ಲಿ ಕಿವುಡರು - ಮೂಗರು (೮೩೬;೧೦೦) ಕುರುಡರು (೧,೨೪೧; ೧೯೦) ಮತ್ತು ಕೈಕಾಲು ಊನರು (೬೬೨ ;೧೧೬) ಇದ್ದರು. ಆವರಣದಲ್ಲಿ ಸೂಚಿಸಿರುವ ಮೊದಲನೆಯ ಸಂಖ್ಯೆಯು ಗ್ರಾಮಾಂತರ ಪ್ರದೇಶವನ್ನೂ ಮತ್ತು ಎರಡನೇ ಸಂಖ್ಯೆಯು ನಗರ ಪ್ರದೇಶವನ್ನು ಸೂಚಿಸುತ್ತದೆ.

**ಭಾಷೆಗಳು :** ಗುಲಬರ್ಗಾ ಜಿಲ್ಲೆಯಲ್ಲಿ ೧೯೮೧ರ ಜನಗಣತಿಯ ಪ್ರಕಾರ ಜಿಲ್ಲೆಯ ಜನಸಂಖ್ಯೆಯು ೨೦,೮೦,೬೪೩ ಇದ್ದು ಅವರಲ್ಲಿ ೧೩,೮೪,೮೨೬ ಅಂದರೆ ಶೇ. ೬೬.೪೭ರಷ್ಟು ಜನ ಮನೆಯಲ್ಲಿ ಕನ್ನಡ ಮಾತನಾಡುವವರಾಗಿದ್ದರು ಹಾಗೂ ೧,೩೩,೫೯೦ ಅಂದರೆ ಶೇ. ೧೬.೮೯ರಷ್ಟು ಜನ ಮನೆಯಲ್ಲಿ ಉರ್ದು ಮಾತನಾಡುವವರಾಗಿದ್ದರು. ಇದರಂತೆ ಜಿಲ್ಲೆಯಲ್ಲಿ ಕನ್ನಡ ಮತ್ತು ಉರ್ದು ಮಾತನಾಡುವವರು ಗುಲಬರ್ಗಾ ತಾಲೂಕಿನಲ್ಲ ಅತಿ ಹೆಚ್ಚಾಗಿಯೂ (ಕ್ರಮವಾಗಿ ೨,೩೫,೭೭೮ ಮತ್ತು ೧,೦೯,೫೬೨); ಹಿಂದಿ ಮಾತನಾಡುವವರು ಚಿತ್ತಾಪುರ ತಾಲೂಕಿನಲ್ಲಿ ಅತಿ ಹೆಚ್ಚಾಗಿಯೂ (೨೫,೫೮೩) ಮತ್ತು ತೆಲಗು ಮಾತನಾಡುವವರು ಸೇಡಂ ತಾಲೂಕಿನಲ್ಲಿ ಅತಿ ಹೆಚ್ಚಾಗಿಯೂ (೪೩,೫೬೯) ಕಂಡು ಬರುತ್ತಾರೆ. ಈ ಮುಂದಿನ ಕೋಷ್ಟಕದಲ್ಲಿ (ಕೋಷ್ಟಕ ೩.೧೫); ೧೯೮೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ವಿವಿಧ ಭಾಷೆಗಳನ್ನಾಡುವ ೧೦೦೦ಕ್ಕೂ ಹೆಚ್ಚು ಜನವಿರುವ ಭಾಷಾವಾರು ಜನಸಂಖ್ಯೆಯನ್ನು ಹಾಗೂ ಒಟ್ಟಿನ ಜನಸಂಖ್ಯೆಯಲ್ಲಿ ಅದರ ಶತಾಂಶವನ್ನು ಕೊಡಲಾಗಿದೆ.

## ಕೋಷ್ಟಕ : ೩.೧೪ ಪರಿಶಿಷ್ಟ ಬುಡಕಟ್ಟು

| ತಾಲೂಕುಗಳು | | ೧೯೮೧ ಪುರುಷರು | ೧೯೮೧ ಸ್ತ್ರೀಯರು | ೧೯೮೧ ಒಟ್ಟು | ೧೯೯೧ ಪುರುಷರು | ೧೯೯೧ ಸ್ತ್ರೀಯರು | ೧೯೯೧ ಒಟ್ಟು |
|---|---|---|---|---|---|---|---|
| ಅಫ್‌ಜಲ್‌ಪುರ | ಗ್ರಾಮ | ೩,೭೮೭ | ೩,೬೨೧ | ೭,೪೦೮ | ೧,೫೩೬ | ೧,೫೦೭ | ೩,೦೪೩ |
| | ನಗರ | ೨೧೫ | ೨೧೨ | ೪೨೭ | | | |
| | ಒಟ್ಟು | ೪,೦೦೨ | ೩,೮೩೩ | ೭,೮೩೫ | ೧,೫೩೬ | ೧,೫೦೭ | ೩,೦೪೩ |
| ಆಳಂದ | ಗ್ರಾಮ | ೧,೮೩೩ | ೧,೭೩೨ | ೩,೬೬೫ | ೩,೪೫೭ | ೩,೨೨೪ | ೬,೬೮೧ |
| | ನಗರ | ೭ | ೪ | ೧೧ | ೧೦೨ | ೯೭ | ೧೯೯ |
| | ಒಟ್ಟು | ೧,೮೯೦ | ೧,೭೮೬ | ೩,೬೭೬ | ೩,೫೫೯ | ೩,೩೨೧ | ೬,೮೮೦ |
| ಚಿಂಚೋಳಿ | ಗ್ರಾಮ | ೭೦೬ | ೬೪೮ | ೧,೩೫೪ | ೨,೫೫೮ | ೨,೪೩೫ | ೪,೯೯೩ |
| | ನಗರ | ೨೪ | ೨೪ | ೪೮ | ೧೪ | ೨೦ | ೩೪ |
| | ಒಟ್ಟು | ೭೩೦ | ೬೭೨ | ೧,೪೦೨ | ೨,೫೭೨ | ೨,೪೫೫ | ೫,೦೨೭ |
| ಚಿತ್ತಾಪುರ | ಗ್ರಾಮ | ೧,೫೭೩ | ೧,೫೭೯ | ೩,೧೫೨ | ೧,೯೯೩ | ೧,೮೬೫ | ೩,೮೫೮ |
| | ನಗರ | ೧೯೧ | ೧೮೦ | ೮೭೧ | ೩೨೧ | ೩೦೪ | ೬೨೫ |
| | ಒಟ್ಟು | ೧,೭೬೪ | ೧,೭೫೯ | ೩,೫೨೩ | ೨,೩೧೪ | ೨,೧೬೯ | ೪,೪೮೩ |
| ಗುಲಬರ್ಗಾ | ಗ್ರಾಮ | ೪,೦೫೭ | ೪,೦೪೭ | ೮,೧೦೪ | ೨,೯೧೮ | ೨,೭೫೨ | ೫,೬೭೦ |
| | ನಗರ | ೧,೩೯೧ | ೧,೨೮೪ | ೨,೬೭೫ | ೧,೭೫೮ | ೧,೫೯೫ | ೩,೩೫೩ |
| | ಒಟ್ಟು | ೫,೪೪೮ | ೫,೩೩೧ | ೧೦,೭೭೯ | ೪,೬೭೬ | ೪,೩೪೭ | ೯,೦೨೩ |

| | | | | | | | |
|---|---|---|---|---|---|---|---|
| ಜೇವರ್ಗಿ | ಗ್ರಾಮ | ೧,೧೪೩ | ೧೦,೦೬೦ | ೨೦,೨೦೩ | ೬,೩೧೦ | ೬,೦೬೦ | ೧೨,೩೭೦ |
| | ನಗರ | ೧೫೫ | ೧೨೨ | ೨೭೭ | — | — | — |
| | ಒಟ್ಟು | ೧೦,೨೯೮ | ೧೦,೧೮೨ | ೨೦,೪೮೦ | ೬,೩೧೦ | ೬,೦೬೦ | ೧೨,೩೭೦ |
| ಸೇಡಂ | ಗ್ರಾಮ | ೪೫೮ | ೪೪೦ | ೮೯೮ | ೫೮೦ | ೫೬೧ | ೧,೧೪೧ |
| | ನಗರ | ೩೧ | ೨೮ | ೫೯ | ೧೬೫ | ೧೨೮ | ೨೯೩ |
| | ಒಟ್ಟು | ೪೮೯ | ೪೬೮ | ೯೫೭ | ೭೪೫ | ೬೮೯ | ೧,೪೩೪ |
| ಶಹಾಪುರ | ಗ್ರಾಮ | ೬,೨೭೦ | ೬,೧೮೨ | ೧೨,೪೫೨ | ೭,೪೯೪ | ೭,೦೯೭ | ೧೪,೫೯೧ |
| | ನಗರ | ೯೮ | ೯೭ | ೧೯೫ | ೭೪೦ | ೬೦೭ | ೧,೩೪೭ |
| | ಒಟ್ಟು | ೬,೩೬೮ | ೬,೨೭೯ | ೧೨,೬೪೭ | ೮,೨೩೪ | ೭,೭೦೪ | ೧೫,೯೩೮ |
| ಸುರಪುರ | ಗ್ರಾಮ | ೧೫,೦೯೦ | ೧೫,೦೫೦ | ೩೦,೧೪೦ | ೧೨,೯೬೦ | ೧೨,೨೧೪ | ೨೫,೪೭೪ |
| | ನಗರ | ೧,೪೪೬ | ೧,೫೧೫ | ೨,೯೬೧ | ೧,೮೮೯ | ೧,೭೯೬ | ೩,೬೮೫ |
| | ಒಟ್ಟು | ೧೬,೫೩೬ | ೧೬,೫೬೫ | ೩೩,೧೦೧ | ೧೪,೮೪೯ | ೧೪,೩೧೦ | ೨೯,೧೫೯ |
| ಯಾದಗಿರಿ | ಗ್ರಾಮ | ೧,೧೯೭ | ೧,೧೯೨ | ೨,೩೮೯ | ೮,೭೩೯ | ೮,೩೬೪ | ೧೭,೧೦೩ |
| | ನಗರ | ೪೨೦ | ೪೧೮ | ೮೩೮ | ೧,೨೪೦ | ೧,೨೩೫ | ೨,೪೭೫ |
| | ಒಟ್ಟು | ೧,೬೧೭ | ೧,೬೧೦ | ೩,೨೨೭ | ೯,೯೭೯ | ೯,೫೯೯ | ೯೪,೯೨೪ |
| ಜಿಲ್ಲೆಯ ಒಟ್ಟು | ಗ್ರಾಮ | ೪೫,೬೦೧ | ೪೪,೬೦೧ | ೮೯,೭೬೫ | ೪೮,೫೪೫ | ೪೬,೩೭೯ | ೯೪,೯೨೪ |
| | ನಗರ | ೩,೯೭೮ | ೩,೮೮೪ | ೭,೮೬೨ | ೬,೨೨೯ | ೫,೭೮೨ | ೧೨,೦೧೧ |
| | ಒಟ್ಟು | ೪೯,೧೪೨ | ೪೮,೪೮೫ | ೯೭,೬೨೭ | ೫೪,೭೭೪ | ೫೨,೧೬೧ | ೧,೦೬,೯೩೫ |

**ಸಾಕ್ಷರತೆ** : ಯಾವುದೆ ಭಾಷೆಯಲ್ಲಿ ಅರ್ಥ ಮಾಡಿಕೊಂಡು ಓದಲು ಮತ್ತು ಬರೆಯಲು ಬರುವ ವ್ಯಕ್ತಿಯನ್ನು ಅಕ್ಷರಸ್ಥರೆಂದು ಕರೆಯಲಾಗಿದೆ. ಇದಕ್ಕೆ ಯಾವುದೇ ಕನಿಷ್ಠ ಶೈಕ್ಷಣಿಕ ಅರ್ಹತೆ ಅಥವ ಸಾಂಪ್ರದಾಯಿಕ ಶಿಕ್ಷಣವಾಗಲೀ ಬೇಕಿಲ್ಲ.ವಯೋಮಿತಿ ೦-೪ ವರ್ಗಕ್ಕೆ ಸೇರಿದ ಎಲ್ಲಾ ಮಕ್ಕಳನ್ನೂ ಅನಕ್ಷರಸ್ಥರೆಂದು ಪರಿಗಣಿಸಲಾಗಿದೆ.

೧೯೮೧ ಹಾಗೂ ೧೯೯೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಶೇಕಡಾವಾರು ಸಾಕ್ಷರತೆಯು ಕ್ರಮವಾಗಿ ಪುರುಷರಲ್ಲಿ ೩೬.೩೭ ಮತ್ತು ೪೧.೭೫ ಹಾಗೂ ಸ್ತ್ರೀಯರಲ್ಲಿ ೧೩.೩೦ ಮತ್ತು ೧೯.೮೭ ಆಗಿದ್ದಿತು. ಈ ಎರಡು ದಶಕಗಳಲ್ಲೂ ಸಹ ಗುಲಬರ್ಗಾ ತಾಲೂಕಿನಲ್ಲಿ ಅತ್ಯಂತ ಹೆಚ್ಚಿನ ಸಾಕ್ಷರತಾದವರನ್ನು ಕಾಣಬಹುದಾಗಿದೆ. ಇದು ಕ್ರಮವಾಗಿ ಪುರುಷರಲ್ಲಿ (೫೦.೮೮ : ೫೭.೬೯) ಹಾಗೂ ಸ್ತ್ರೀಯರಲ್ಲಿ (೨೫,೫೭, ೩೫.೬೮) ಆಗಿರುತ್ತದೆ. ಹೆಚ್ಚಿನ ವಿವರಗಳಿಗೆ ಅಧ್ಯಾಯ ೧೫ ಶಿಕ್ಷಣ ಮತ್ತು ಕ್ರೀಡೆ ನೋಡಿರಿ).

**ಕೋಷ್ಟಕ ೩.೧೫**

| ಕ್ರಮ ಸಂಖ್ಯೆ | ಭಾಷೆ | ಜನಸಂಖ್ಯೆ | ಒಟ್ಟಿನ ಜನ ಸಂಖ್ಯೆಯ ಶತಾಂಶ |
|---|---|---|---|
| ೧. | ಗುಜರಾತಿ | ೧,೮೮೮ | ೦.೦೯ |
| ೨. | ಹಿಂದಿ | ೧,೨೮,೫೭೭ | ೬.೧೭ |
| ೩. | ಕನ್ನಡ | ೧೩,೮೪,೮೨೬ | ೬೬.೪೭ |
| ೪. | ಮಲೆಯಾಳಂ | ೧೧೧೬೨ | ೦.೦೬ |
| ೫. | ಮರಾಠಿ | ೬೦,೮೩೭ | ೨.೯೨ |
| ೬. | ತಮಿಳು | ೩,೧೫೫ | ೦.೧೫ |
| ೭. | ತೆಲುಗು | ೧,೩೩,೫೯೦ | ೬.೪೧ |
| ೮. | ಉರ್ದು | ೩,೫೧,೯೫೧ | ೧೬.೮೯ |

## ಧರ್ಮಗಳು

ಇತರೆ ಕಡೆಗಳಲ್ಲಿ ಕಂಡುಬರುವಂತೆ ಗುಲಬರ್ಗಾ ಜಿಲ್ಲೆಯಲ್ಲೂ ಸಹ ಹಿಂದೂ, ಇಸ್ಲಾಂ, ಜೈನ ಹಾಗೂ ಕ್ರೈಸ್ತ ಧರ್ಮಗಳು ಪ್ರಮುಖವಾಗಿ ಕಂಡು ಬರುತ್ತದೆ. ೧೯೯೧ನೇ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ೨೧,೧೧,೦೧೨ (೮೧.೭೫) ಹಿಂದೂಗಳೂ, ೪,೪೪,೬೪೪ (೧೭.೨೧) ಮುಸಾಲ್ಮಾನರೂ, ೧೪,೧೮೯ (೦.೫೪) ಕ್ರೈಸ್ತರೂ, ೪,೯೬೦ (೦.೧೯) ಜೈನರೂ, ೨,೯೧೪ (೦.೧೧) ಬೌದ್ಧರೂ ಹಾಗೂ ೨೬೯ (೦.೦೧) ಶೀಖರೂ ಇದ್ದರು. ಉಳಿದವರಲ್ಲಿ ೪೬೦ ಇತರ ಧರ್ಮಗಳಿಗೆ ಸೇರಿದವರಾಗಿದ್ದು ೩,೭೨೧ ಜನರು ಯಾವ ಧರ್ಮವನ್ನು ಅವಲಂಬಿಸಿದ್ದಾರೆಂಬುದನ್ನು ಸೂಚಿಸಿರಲಿಲ್ಲ. ಆವರಣದಲ್ಲಿರುವ ಸಂಖ್ಯೆಗಳು ಜಿಲ್ಲಾ ಒಟ್ಟು ಜನಸಂಖ್ಯೆಯ ಶತಾಂಶವನ್ನು ಸೂಚಿಸುತ್ತದೆ. ಈ ಮುಂದಿನ ಕೋಷ್ಟಕದಲ್ಲಿ (ಕೋಷ್ಟಕ ೩.೧೬) ೧೯೯೧ರ ಜನಗಣತಿಯಂತೆ ವಿವಿಧ ಧರ್ಮೀಯರ ನಗರ ಮತ್ತು ಗ್ರಾಮಾಂತರದಲ್ಲಿನ ಜನರ ಸಂಖ್ಯೆಯನ್ನು ತಾಲೂಕುವಾರು ನೀಡಲಾಗಿದೆ.

## ಹಿಂದೂಗಳು

ಹಿಂದೂಗಳಲ್ಲಿ ಅನೇಕ ಜಾತಿ, ಉಪಜಾತಿ - ಪಂಥಗಳು ಕಂಡು ಬಂದರೂ ಅವರ ಸಾಮಾಜಿಕ ಮೌಲ್ಯಗಳು, ನಂಬಿಕೆಗಳು, ಮತ್ತು ಪವಿತ್ರ ಗ್ರಂಥಗಳು ಒಂದೇ ಆಗಿದ್ದು ಇವು ಅವರ ಐಕ್ಯತಾಶಕ್ತಿಗಳಾಗಿವೆ ಎನ್ನಬಹುದು. ವೇದಗಳು, ಉಪನಿಷತ್ತುಗಳು, ಪುರಾಣಗಳು ಹಾಗೂ ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಹಿಂದೂಗಳ ಪವಿತ್ರ

ಗ್ರಂಥಗಳಾಗಿವೆ. ಬ್ರಹ್ಮ-ವಿಷ್ಣು-ಮಹೇಶ್ವರರನ್ನು ಅವರ ಅವತಾರಗಳನ್ನೂ ಪರಿವಾರ ದೇವ-ದೇವತೆಗಳನ್ನು ಹಿಂದೂಗಳು ಪೂಜಿಸುತ್ತಾರೆ. ಹಿಂದೂ ದೇವಾಲಯಗಳಲ್ಲಿ ಸಾಂಪ್ರದಾಯಕವಾಗಿ ಪೂಜೆ ಮಾಡುವಾಗ ಅರ್ಚಕರು ಸಂಸ್ಕೃತ ಶ್ಲೋಕಗಳನ್ನು ವೇದ ಮಂತ್ರಗಳನ್ನು ಪಠಿಸುತ್ತಾರೆ. ಹಿಂದೂಗಳ ತಾತ್ವಿಕ ಚಿಂತನೆಯಲ್ಲಿ ಬಸವಣ್ಣನವರ ಶಕ್ತಿ ವಿಶಿಷ್ಟಾದ್ವೈತ, ಶಂಕರಾಚಾರ್ಯರ ಅದ್ವೈತ, ರಾಮಾನುಜರ ವಿಶಿಷ್ಟಾದ್ವೈತ, ಮಧ್ವಾಚಾರ್ಯರ ದ್ವೈತ ಸಿದ್ಧಾಂತಗಳು ಮುಖ್ಯವಾದವುಗಳು. ಬಸವಣ್ಣನವರ ಅನುಯಾಯಿಗಳು ಜಿಲ್ಲೆಯಲ್ಲಿ ಅಪಾರ ಸಂಖ್ಯೆಯಲ್ಲಿದ್ದು ಅವರ ಸಂಪ್ರದಾಯದ ಅನೇಕ ಮಠಗಳಿವೆ. ಜಿಲ್ಲೆಯ ಕೆಲವೆಡೆಗಳಲ್ಲಿ ಶಂಕರಸೇವಾ ಸಮಿತಿಗಳೂ, ಉತ್ತರಾಧಿ ಮಠದ ಪರಂಪರೆಯಲ್ಲಿ ಬರುವ ಯತಿಗಳ ವೃಂದಾವನಗಳೂ ಹಾಗೂ ರಾಘವೇಂದ್ರ ಸ್ವಾಮಿಗಳ ಮಠಗಳೂ ಇವೆ. ಮೈಲಾರ, ದತ್ತಾತ್ರೇಯ ಹಾಗೂ ಪಾಂಡುರಂಗನ ಭಕ್ತರುಗಳೂ ಮತ್ತು ನಾಥ ಪಂಥದ ಅನುಯಾಯಿಗಳು ಜಿಲ್ಲೆಯಲ್ಲಿರುತ್ತಾರೆ. ಜೇವರ್ಗಿ ತಾಲೂಕಿನ ಗಂವ್ಹಾರ ಮತ್ತು ಕೋಳಕೂರ, ಅಫ್‌ಜಲಪುರ ಹಾಗೂ ಇದೇ ತಾಲೂಕಿನ ಮಾಶಾಳ, ಸುರುಪುರ ಹಾಗೂ ಇದೇ ತಾಲೂಕಿನ ರಂಗಂಪೇಟೆ ಮೊದಲಾದ ಸ್ಥಳಗಳು ನಾಥಪಂಥದ ಚಟುವಟಿಕಾ ಕೇಂದ್ರಗಳಾಗಿವೆ.

**ಜೈನಧರ್ಮ**

ಜೈನಧರ್ಮದಲ್ಲಿ ದಿಗಂಬರ ಹಾಗೂ ಶ್ವೇತಾಂಬರಗಳೆಂಬ ಪಂಗಡಗಳಿದ್ದು ಜಿಲ್ಲೆಯಲ್ಲಿ ದಿಗಂಬರ ಪಂಗಡದವರೇ ಹೆಚ್ಚಾಗಿರುವುದಾಗಿ ತಿಳಿದು ಬರುತ್ತದೆ. ಕ್ರಿ. ಶ. ಒಂದನೇ ಶತಮಾನದಲ್ಲಿ ಪಾದಲಿಪ್ತಾಚಾರ್ಯರು ದಕ್ಷಿಣ ಭಾರತಕ್ಕೆ ಬಂದಾಗ ಮಳಖೇಡದ ಸುತ್ತಮುತ್ತ ಶ್ವೇತಾಂಬರರಿದ್ದರೆಂಬುದಾಗಿ ತಿಳಿದು ಬರುತ್ತದೆ. ಗುಲಬರ್ಗಾ ಜಿಲ್ಲೆಯ ಶಹಾಪುರ ತಾಲೂಕಿನ ಗೋಗಿ ಗ್ರಾಮದ ಸಮೀಪ ಚಾರಣಗಿರಿ ಬೆಟ್ಟದ ಬಂಡೆಯಲ್ಲಿ ಪಾರ್ಶ್ವನಾಥ ತೀರ್ಥಂಕರರ ಪ್ರತಿಮೆಯನ್ನು ಕಡೆದಿರುವುದು ಕಂಡು ಬರುವುದಾಗಿಯೂ ಮತ್ತು ಇದು ಸುಮಾರು ಕ್ರಿ. ಶ. ೫ ಅಥವ ೬ನೇ ಶತಮಾನದ್ದಾಗಿರಬಹುದೆಂದೂ ಗೋಗಿಯ ಡಿ.ಎನ್. ಅಕ್ಕಿಯವರು ಅಭಿಪ್ರಾಯ ಪಡುತ್ತಾರೆ. ಹಾಗೂ ಇಂತಹದೇ ಪ್ರತಿಮೆಯನ್ನು ಯಾದಗಿರಿಯ ಸಮೀಪದ ಬೆಟ್ಟದಲ್ಲಿ ಕಂಡುಬರುವುದಾಗಿ ಅವರು ಹೇಳಿರುತ್ತಾರೆ. ಜೈನಧರ್ಮದ ಇನ್ನೊಂದು ಶಾಖೆಯಾದ ಯಾಪನೀಯ ಪಂಗಡವು ಗುಲಬರ್ಗಾ  ಜಿಲ್ಲೆಯ ಅಡಕಿ ಹಾಗೂ ಸೇಡಂಗಳಲ್ಲಿ ಇದ್ದವೆಂದು ತಿಳಿದು ಬರುತ್ತದೆ. ಜಿಲ್ಲೆಯಿಂದ ಆಳಿದ ರಾಷ್ಟ್ರಕೂಟರು ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದರು. ನೃಪತುಂಗನು ಜೈನನಾಗಿದ್ದನೆಂದು ತಿಳಿಯಲಾಗಿದೆ. ನಾಲ್ಕನೇ ಇಂದ್ರ ಕ್ರಿ. ಶ. ೯೮೨ ರಲ್ಲಿ ಹೇಮಾವತಿಯಲ್ಲಿ ಸಮಾಧಿ ಮರಣ ಹೊಂದಿದ (ಕೆಲವರ ಅಭಿಪ್ರಾಯದಂತೆ ಶ್ರವಣ ಬೆಳಗೊಳದಲ್ಲಿ) ಮಳಖೇಡದಲ್ಲಿ ೧೪ ಬಸದಿಗಳಿದ್ದವೆಂದೂ ಅವುಗಳಲ್ಲಿ ಅನೇಕ ಧರ್ಮಗ್ರಂಥಗಳಿದ್ದವೆಂದೂ ಪಿ. ಬಿ. ದೇಸಾಯಿ ಅವರು ತಿಳಿಸಿರುತ್ತಾರೆ. ರಾಷ್ಟ್ರಕೂಟರು ಹಾಗೂ ಕಲ್ಯಾಣ ಚಾಳುಕ್ಯರ ಆಸ್ಥಾನದಲ್ಲಿದ್ದ ಜೈನ ಕವಿಗಳಾದ ಸೋಮದೇವ ಸೂರಿ, ವೀರಸೇನ, ಜಿನಸೇನ, ಮೊದಲಾದವರು ಸಂಸ್ಕೃತದಲ್ಲಿಯೂ, ಪಂಪ, ಪೊನ್ನ, ರನ್ನ, ನಾಗಚಂದ್ರ ಮೊದಲಾದವರು ಕನ್ನಡದಲ್ಲಿಯೂ ಜೈನ ಮತೀಯ ಗ್ರಂಥಗಳನ್ನು ರಚಿಸಿದ್ದಾರೆ.

ಜಿಲ್ಲೆಯ ಅಡಕಿಯಲ್ಲಿ ಪಾರ್ಶ್ವನಾಥ, ವರ್ಧಮಾನ, ಶಾಂತಿನಾಥರ ವಿಗ್ರಹಗಳೂ, ಆಳಂದದಲ್ಲಿ ಪಾರ್ಶ್ವನಾಥ, ಶಂಖ ಜಿನೇಶ್ವರರ ಮೂರ್ತಿಗಳು ಭಂಕೂರಿನಲ್ಲಿ ಬಸ್ತಿ ಗುಡಿಯಿದ್ದು ಅದರಲ್ಲಿ ಆದಿನಾಥರೇ ಮೊದಲಾದ ಅನೇಕ ಜೈನ ಪುಣ್ಯ  ಪುರಷರ ಮೂರ್ತಿಗಳೂ ಇವೆ. ಚಿಂಚೋಳಿಯಲ್ಲಿ ಜೈನ ವಸ್ತುವಿನ ಅವಶೇಷಗಳೂ ಅಲ್ಲದೆ ನಿಸದಿಕಲ್ಲು ದೊರೆತಿದೆ. ಅಲ್ಲದೆ ಹಾಗರಗಿ, ಹರಸೂರು, ಹುಣಸಿ-ಹಡಗಲಿ, ಇಂಗಳಗಿ, ಸೇಡಂ, ನಾಗಾಯಿ ಮುಂತಾದ ಅನೇಕ ಸ್ಥಳಗಳಲ್ಲಿ ಜೈನ ಬಸದಿಗಳೂ, ಜೈನ ಶಿಲ್ಪಾವಶೇಷಗಳೂ ಇವೇ ಮುಂತಾದವುಗಳು ಕಂಡು ಬರುತ್ತವೆ.

ಜಿಲ್ಲೆಯ ಮಳಖೇಡವು ಜೈನ ಯತಿಗಳಿಗೆ, ಕಾವ್ಯ ಮಿಮಾಂಸಕಾರರಿಗೆ ಹಾಗೂ ಶಿಲ್ಪಕಲೆಗೆ ನೆಲೆ ಬೀಡಾಗಿತ್ತು. ನೇಮಿನಾಥ ಜಿನಾಲಯ ಇಂದಿಗೂ ಉಳಿದು ಬಂದಿದ್ದು ಜಿನ ಸೇನ ಭಟ್ಟಾರಕರ ಕಾಲದಿಂದಲೇ ಇದನ್ನು ಗುರುತಿಸಲಾಗುತ್ತದೆ. ದಿಗಂಬರ ಮುನಿಪರಂಪರೆಯೊಂದು ಇಲ್ಲಿ ಉಳಿದು ಬಂದಿದೆ. ಜಿನಾಲಯದಲ್ಲಿ ಹಲವಾರು ತೀರ್ಥಂಕರರ ಹಾಗೂ ಯಕ್ಷಯಕ್ಷಿಣಿಯರ ಪ್ರತಿಮೆಗಳಿವೆ.

## ಭೌದ್ಧ ಧರ್ಮ

ಜಿಲ್ಲೆಯಲ್ಲಿ ಕ್ರಿಸ್ತ ಪೂರ್ವದ ಕಾಲದಲ್ಲೇ ಬೌದ್ಧಮತದ ಪ್ರಭಾವವಿತ್ತೆಂದು ಹೇಳಬಹುದು. ಪ್ರಾಚ್ಯವಸ್ತು ಇಲಾಖೆಯವರು ಕೈಗೊಂಡಿರುವ ಉತ್ಖನನದ ಫಲವಾಗಿ ಮಳಖೇಡ, ಸೇಡಂ ಮತ್ತು ಸನ್ನತಿಗಳು ಪ್ರಮುಖ ಬೌದ್ಧ ಕೇಂದ್ರಗಳಾಗಿತ್ತೆಂದು ತಿಳಿದು ಬಂದಿದೆ. ಸನ್ನತಿಯಲ್ಲಿ ದೊರಕಿರುವ ಅಶೋಕನ ಬ್ರಾಹ್ಮಿಲಿಪಿಯ ಶಾಸನಗಳು ಹಾಗೂ ಇತರ ಬೌದ್ಧ ಅವಶೇಷಗಳು ಬೌದ್ಧ ಧರ್ಮದ ಆಸ್ತಿತ್ವಕ್ಕೆ ದಾಖಲೆಗಳಾಗಿವೆ. ಮುಂದೆ ಕ್ರಿಸ್ತಶಕದ ಆರಂಭ ಕಾಲದಿಂದಲೇ ಶಾತವಾಹನರ ಕಾಲದಶಿಲ್ಪಗಳು, ಸ್ತೂಪಗಳಂತಹ ರಚನೆಗಳು ಜಿಲ್ಲೆಯಲ್ಲಿ ಭೀಮಾನದಿಯ ದಡದಲ್ಲಿ ಕಂಡುಬರುತ್ತದೆ. ಗುಲಬರ್ಗಾ ತಾಲೂಕಿನ ಹಾಗರ ಗುಂಡಗಿ, ಅಂಬಿಗಳಲ್ಲೂ, ಚಿತ್ತಾಪುರ ತಾಲೂಕಿನ ಕನಗನಹಳ್ಳಿ ಮತ್ತು ಕೊಲ್ಲೂರುಗಳಲ್ಲಿ ಸ್ತೂಪಗಳಂತಹ ರಚನೆ, ಇಟ್ಟಿಗೆ ಕಟ್ಟಡಗಳ ಅವಶೇಷ ಹಾಗೂ ನುಣುಪು ಕಲ್ಲಿನ ಭಿನ್ನವಾದ ಶಿಲ್ಪಗಳು ದೊರೆತಿದ್ದು ಇವು ಕ್ರಿಸ್ತಶಕದ ಆರಂಭಕಾಲದ್ದಾಗಿದೆ. ಸನ್ನತಿಯಿಂದ ಕನಗನ ಹಳ್ಳಿಯವರೆಗೆ ಸುಮಾರು ಮೂರು ಕಿಲೋಮೀಟರ್ ಪ್ರದೇಶದಲ್ಲಿ, ಸ್ತೂಪಗಳು, ಆರ್ಯಕ ಸ್ಥಂಭಗಳು, ಶಿಲಾಫಲಕಗಳು, ವಜ್ರಾಸನ, ಬುದ್ಧಪದ ಚಿಹ್ನೆ, ಭೋಧಿ ವೃಕ್ಷ ಕುಬ್ಜಯಕ್ಷರು ಮೊದಲಾದ ಬೌದ್ಧಾವಶೇಷಗಳು ಹಾಗೂ ಹಲವಾರು ಶಾಸನಗಳು ದೊರೆತಿವೆ. ಇವೆಲ್ಲವೂ ಕ್ರಿಸ್ತಶಕ ಒಂದರಿಂದ ಮೂರನೇ ಶತಮಾನದ ಅವಧಿಯದಾಗಿದೆಯೆಂದು ತಿಳಿದುಬರುತ್ತದೆ. ಜಿಲ್ಲೆಯಲ್ಲಿ ಒಂದೊಂದೇ ಪಂಕ್ತಿ ಇರುವ ಹಲವಾರು ಶಾಸನಗಳು ದೊರೆತಿದ್ದು ಇವು ಬೌದ್ಧ ಸ್ತೂಪ,ವಿಹಾರ, ಸಂಘಾರಾಮಗಳಿಗೆ ದತ್ತಿದಾನ ನೀಡಿದ ಪ್ರಮುಖ ಹೆಸರಿರಬಹುದೆಂದು ಹನುಮಾಕ್ಷಿಗೋಗಿ ಅವರು ಅಭಿಪ್ರಾಯ ಪಟ್ಟಿರುತ್ತಾರೆ. ಅಣಬಿ, ಅವರಾದ, ಜೇವರ್ಗಿ ಬೆಳ್ವಾಡಗಿ ಹಾಗೂ ವಜ್ಜಲಗಳಲ್ಲಿ ಶಾತವಾಹನರ ಕಾಲದ ಪ್ರಾಕೃತ ಭಾಷೆಯ ಶಾಸನಗಳು ದೊರೆಯುತ್ತದೆ. ಇವಲ್ಲದೆ ಲಿಪಿ ಇರುವ ಅಥವ ಇಲ್ಲದ ಹಲವಾರು ಸ್ಥಂಭಗಳು ಈ ಪ್ರದೇಶದಲ್ಲಿ ದೊರೆತಿವೆ. ವೀರಗಲ್ಲನ್ನು ಹೋಲುವಂತೆ ಹಲವಾರು ಹಂತಗಳಲ್ಲಿ ಉಬ್ಬು ಶಿಲ್ಪಗಳನ್ನು ಕಲ್ಲಿನ ಕಂಬ ಅಥವಾ ಹಲಗೆಯ ಮೇಲೆ ರೂಪಿಸಿದ್ದು ಸಾಮಾನ್ಯವಾಗಿ ವಿಶ್ರಮಿಸಿಕೊಳ್ಳುತ್ತಿರುವ ವೃಷಭ ಹಾಗೂ ಬಂಡಿಗಳು ಕೆಳಹಂತದಲ್ಲಿದ್ದು ಮೇಲು ಹಂತದಲ್ಲಿ ಓರ್ವ ದಂಪತಿಗಳ ಶಿಲ್ಪವಿರುತ್ತದೆ. ಇವು ನಿಧನಹೊಂದಿದ ಪ್ರಸಿದ್ಧರ ನೆನಪಿಗಾಗಿ ಹಾಕಿಸಿದ ಸ್ಮಾರಕ ಸ್ಥಂಭಗಳಾಗಿರಬಹುದು. ಪ್ರಯಾಣ ಕೊನೆಯಾಯಿತೆಂಬಂತೆ ವಿಶ್ರಮಿಸಿಕೊಳ್ಳುತ್ತಿರುವ ವೃಷಭಗಳನ್ನು ಚಿತ್ರಿಸಿದೆ. ಈ ಅಂಶವೂ ಸಹ ಬೌದ್ಧಮತದಿಂದ ಬಂದಿರಬಹುದು.

## ಇಸ್ಲಾಂ

ಹದಿಮೂರನೇ ಶತಮಾನದಲ್ಲಿ ದೆಹಲಿ ಸುಲ್ತಾನರು ಗುಲಬರ್ಗಾ ಜಿಲ್ಲಾ ಪ್ರದೇಶವನ್ನು ವಶಪಡಿಸಿಕೊಳ್ಳುವ ಯತ್ನದಿಂದಾಗಿ ಜಿಲ್ಲೆಯಲ್ಲಿ ಮಹಮ್ಮದೀಯ ಸಂಸ್ಕೃತಿ ಮತ್ತು ಭಾಷೆಗಳು ಬೆಳೆದು ಬಂದವು. ನಂತರ ೧೩೪೭ರಲ್ಲಿ ಹಸನಗಂಗು ಗುಲಬರ್ಗಾವನ್ನು ಕೇಂದ್ರವಾಗಿರಿಸಿಕೊಂಡು ಬಹಮನಿ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಮುಂದೆ ಸಾಮ್ರಾಜ್ಯದ ಕೇಂದ್ರ ಸ್ಥಾನವು ಬೀದರ್‌ಗೆ ವರ್ಗವಾದರೂ ಈ ಪ್ರದೇಶ ಅವರ ವಶದಲ್ಲಿಯೇ ಇದ್ದು ನಂತರದಲ್ಲಿ ಹೈದರಾಬಾದ್ ನಿಜಾಮರ ವಶಕ್ಕೆ ಸೇರಿತು. ಹದಿಮೂರನೇ ಶತಮಾನದ ಅಂತ್ಯದಲ್ಲಿ ಗುಲಬರ್ಗಾವಿಗೆ ಬಂದು ನೆಲೆಸಿದ ಖ್ವಾಜಾ ಬಂದೇ ನವಾಜ್ ಒಂದು ರೀತಿಯಲ್ಲಿ ವೈಚಾರಿಕ ಕ್ರಾಂತಿಯನ್ನೇ ಮಾಡಿದರು. ಇವರು ಹಲವಾರು ಗ್ರಂಥಗಳನ್ನು ರಚಿಸಿದುದೇ ಅಲ್ಲದೆ ಇವರು ನಡೆಸುತ್ತಿದ್ದ ಪ್ರಾರ್ಥನಾಸಭೆಗಳು ಹಾಗೂ ಪ್ರವಚನಗಳು ಜನಪ್ರಿಯವಾಗಿದ್ದವು. ಮುಸ್ಲಿಮರ ಅನೇಕ ಸಮಾಧಿ ಮಂದಿರಗಳು ಹಿಂದೂ-ಮುಸ್ಲಿಂ ಇಬ್ಬರಿಗೂ ಪವಿತ್ರ ಸ್ಥಳಗಳಂತಿದ್ದು ಹಲವಾರು ಧಾರ್ಮಿಕ ಕಾರ್ಯಗಳಲ್ಲಿ ಎರಡೂ ಕೋಮಿನವರೂ ಭಾಗವಹಿಸುವುದು ಕಂಡುಬರುತ್ತದೆ. ಗುಲಬರ್ಗಾವೂ ಸೇರಿದಂತೆ ತಿಂಥಿಣಿ, ಭೈರಾಮಡಗಿ, ಶಹಾಪುರ, ವಡಗೇರಿ, ಆಳಂದ, ಮಾದನಹಿಪ್ಪರಗಿ ಮುಂತಾದ ಸ್ಥಳಗಳಲ್ಲಿನ ಪೂಜಾ ಮಂದಿರಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಚೌಕಾಕಾರದ, ಬೃಹತ್ತಾದ ನಾಲ್ಕು ಮೂಲೆಗಳಿಗೂ ಮಿನಾರಗಳಿರುವ ಕೆಲವಡೆ ಚಿತ್ತಾರಗಳಿಂದ ಕೂಡಿರುವ ಮುಸ್ಲಿಂ ಶೈಲಿಯದೇ ಆದ ಮಂದಿರಗಳು ಜಿಲ್ಲೆಯಾದ್ಯಾಂತ ಕಾಣಬಹುದಾಗಿದೆ.

ನಮಾಜ್, ಬಡವರಿಗೆ ಭಿಕ್ಷೆ ನೀಡುವುದು, ರಂಜಾನ್ ತಿಂಗಳಲ್ಲಿ ಉಪವಾಸ ಮಾಡುವುದು ಹಾಗೂ ಮೆಕ್ಕಾಪಟ್ಟಣಕ್ಕೆ (ಹಜ್‌ಯಾತ್ರೆ) ಹೋಗಿಬರುವುದು ಮುಸಲ್ಮಾನರ ಧಾರ್ಮಿಕ ಕರ್ತವ್ಯವಾಗಿದೆ. ಅವರ ಪೂಜಾ ವಿಧಾನದಲ್ಲಿ ದಿನಕ್ಕೆ

ಐದು ಬಾರಿ ನಮಾಜ್ (ಪ್ರಾರ್ಥನೆಯೊಂದಿಗೆ ಬಾಗುವುದು) ಮಾಡುವುದು ಕಂಡುಬರುತ್ತದೆ. ಮುಸಲ್ಮಾನರು ಒಬ್ಬ ದೇವನಲ್ಲಿ, ಅವನ ದೂತರಲ್ಲಿ, ಪವಿತ್ರವಾದ ಕುರಾನಿನಲ್ಲಿ ಅಲ್ಲಿನ ಪ್ರವಾದಿಗಳಲ್ಲಿ, ಅವನ ನ್ಯಾಯದಲ್ಲಿ ಸ್ವರ್ಗ - ನರಕಗಳಲ್ಲಿ ಹಾಗೂ ದೈವಿಕ ವಿಧಿಗಳಲ್ಲಿ ನಂಬಿಕೆಯಿಟ್ಟಿದ್ದಾರೆ.

## ಕ್ರೈಸ್ತರು

ಜಿಲ್ಲೆಯಲ್ಲಿ ಕ್ರೈಸ್ತರ ಕ್ಯಾಥೋಲಿಕ್ ಹಾಗೂ ಪ್ರಾಟಸ್ಟೆಂಟ್ ಎರಡು ಪಂಗಡಗಳೂ ಇವೆ. ೧೮೮೮ರಲ್ಲಿ ರೆವರೆಂಡ್ ಜೇ. ಹೆಚ್. ಗಾರ್ಡನ್ ಅವರಿಂದ ಅಂದಿನ ಸುರಪುರ ಸಂಸ್ಥಾನದ ಬುಚ್ಚಣ್ಣನೆಂಬುವನು ಕ್ರೈಸ್ತ ದೀಕ್ಷೆಯನ್ನು ಪಡೆದನೆಂದು ತಿಳಿದುಬರುತ್ತದೆ. ಕ್ರೈಸ್ತಮಿಷನರಿಯಾಗಿ ಗುಲಬರ್ಗಾಕ್ಕೆ ಬಂದ ರೆವರೆಂಡ್ ಎರ್ನ್ಸ್ಟ್ ಬರ್ಜರ್ ಅವರು ೧೮೯೧ರಲ್ಲಿ ಗುಲಬರ್ಗಾದಲ್ಲಿ ವಿಜಯ ವಿದ್ಯಾಲಯವನ್ನು ಆರಂಭಿಸಿದರು. ರೆವರೆಂಡ್ ಎರ್ನ್ಸ್ಟ್ ಬರ್ಜರ್ ಅವರಿಂದ ದೀಕ್ಷೆ ಪಡೆದ ನಾನಪ್ಪ ದೇಸಾಯಿ ಅವರು ಸುರಪುರ, ಶಹಾಪುರ ಹಾಗೂ ಅದರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೈಗೊಂಡ ಕ್ರೈಸ್ತ ಧರ್ಮದ ಚಟುವಟಿಕೆಗಳಿಗಾಗಿ ಮೆಥೋಡಿಸ್ಟ್ ಮಿಶನ್ನಿನವರು ಅವರಿಗೆ ೧೮೯೩ ರಲ್ಲಿ 'ವೈದಿಕ ದೀಕ್ಷೆ' ಕೊಟ್ಟರೆಂದೂ ಅಂದಿನಿಂದ ಅವರು 'ರೆವರೆಂಡ್ ನಾನಪ್ಪ ದೇಸಾಯಿ' ಎನಿಸಿ ಕೊಂಡರೆಂಬ ಅಭಿಪ್ರಾಯವಿದೆ. ಇವರು ಸಾಮಾಜಿಕ, ಶೈಕ್ಷಣಿಕ ಹಾಗೂ ಕನ್ನಡ ಸಾಹಿತ್ಯ ಕ್ಷೇತ್ರಗಳಲ್ಲಿ ಬಹು ಮುಖ ಕಾರ್ಯ ಚಟುವಟಿಕೆಗಳನ್ನು ಕೈಗೊಂಡರು. ವಿದೇಶಿಯ ಮಹಿಳಾ ಮಿಶನರಿ ಮಿಸ್ ಮೇರೋ ಎಂಬುವರು ಇವರನ್ನು ಕುರಿತು. 'ಲೈಟ್ - ಇನ್-ಇಂಡಿಯಾ' ಎಂಬ ಚಿಕ್ಕ ಹೊತ್ತಗೆಯನ್ನು ಬರೆದಿರುವರು. ಗೋವಾದ ಪೋರ್ಚುಗಿಸರು ಚಿತ್ತಾಪುರದಲ್ಲಿ ಚರ್ಚೊಂದನ್ನು ನಿರ್ಮಿಸಿದ್ದು ೧೯೦೦ರಲ್ಲಿ ಇದನ್ನು ಪುನರ್ ನಿರ್ಮಾಣ ಮಾಡಿದರೆಂದು ಇಂಪೀರಿಯಲ್ ಗ್ಯಾಸೆಟಿಯರ್ ನಿಂದ ತಿಳಿದು ಬರುತ್ತದೆ. ಜಿಲ್ಲೆಯಲ್ಲಿ ಅನೇಕ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟಂಟ್ ಚರ್ಚ್‌ಗಳೂ ಮತ್ತು ಕ್ರೈಸ್ತಮಿಶನರಿಯಿಂದ ಆರಂಭಿಸಲ್ಪಟ್ಟ ಶಿಕ್ಷಣ ಸಂಸ್ಥೆಗಳೂ ಮತ್ತು ಆಸ್ಪತ್ರೆಗಳೂ ಇವೆ. ಗುಲಬರ್ಗಾ ದಲ್ಲಿರುವ ಮದರ್ ಆಫ್ ಡಿವೈನ್ ಗ್ರೇಸ್ ಚರ್ಚ್, ಮೆಥಾಡಿಸ್ಟ್ ಚರ್ಚ್ ಮತ್ತು ಬಾಪ್ಟಿಸ್ಟ್ ಮಿಶನ್ ಚರ್ಚ್, ವಾಡಿಯಲ್ಲಿರುವ ಸೇಂಟ್ ಅನ್ಸ್‌ಚರ್ಚ್, ಚಿತ್ತಾಪುರದಲ್ಲಿರುವ ಚರ್ಚ್ ಆಫ್ ಕ್ವೀನ್ ಆಫ್ ಹೆವನ್, ಶಹಾಬಾದ್‌ನಲ್ಲಿರುವ ಸೇಂಟ್ ಥಾಮಸ್ ಚರ್ಚ್ ಮತ್ತು ಮೆಥಾಡಿಸ್ಟ್ ಚರ್ಚ್, ಸೇಡಂ ನಲ್ಲಿರುವ ಕ್ಯಾಥೋಲಿಕ್ ಚರ್ಚ್, ಸುರಪುರದಲ್ಲಿರುವ ಕ್ಯಾಥೋಲಿಕ್ ಚರ್ಚ್ ಮತ್ತು ಮೆಥಾಡಿಸ್ಟ್ ಚರ್ಚ್ ಹಾಗೂ ಶಹಾಪುರ ಮತ್ತು ಯಾದಗಿರಿನಲ್ಲಿರುವ ಮೆಥಾಡಿಸ್ಟ್ ಚರ್ಚ್‌ಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ.

## ಧಾರ್ಮಿಕ ಸಂಸ್ಥೆಗಳು

ಧಾರ್ಮಿಕ ಸಂಸ್ಥೆಗಳು ಸಾಮಾಜಿಕ ಜೀವನಕ್ಕೆ ಪ್ರಭಾವ ಪೂರಕವಾಗಿವೆ. ಹಲವು ಧಾರ್ಮಿಕ ಸಂಸ್ಥೆಗಳು ಧಾರ್ಮಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರದೆ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕ್ರೊಂಡಿದ್ದು ಇವುಗಳ ಆಶ್ರಯದಲ್ಲಿ ಅನ್ನದಾಸೋಹ, ಪುರಾಣ, ಪ್ರವಚನಗಳು, ಉತ್ಸವಗಳು ಇವೇ ಮೊದಲಾದ ಕಾರ್ಯಕ್ರಮಗಳು ನಡೆಯುತ್ತಿವೆ.

ಆಧುನಿಕ ಧಾರ್ಮಿಕ ಸಂಸ್ಥೆಗಳಾದ ಆರ್ಯ ಸಮಾಜ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಇವೇ ಮುಂತಾದವು ಗುಲಬರ್ಗಾ ಜಿಲ್ಲೆಯಲ್ಲೂ ಸಹ ಕಾರ್ಯನಿರ್ವಹಿಸುತ್ತಿವೆ.

### ಶರಣ ಬಸವೇಶ್ವರ ಮಹಾದಾಸೋಹ ಪೀಠ

ಗುಲಬರ್ಗಾದಲ್ಲಿರುವ ಶರಣ ಬಸವೇಶ್ವರ ಮಹಾದಾಸೋಹ ಪೀಠವು ವೀರಶೈವ ಸಂಪ್ರದಾಯಕ್ಕೆ ಸೇರಿದ್ದು ಅದೊಂದು ಸ್ವತಂತ್ರ ಸಂಸ್ಥೆಯಾಗಿದೆ. ಶರಣ ಬಸವೇಶ್ವರರು ಕ್ರಿ. ಶ. ೧೮೨೨ರಲ್ಲಿ ಲಿಂಗೈಕ್ಯರಾದ ನಂತರ ಇಲ್ಲಿಯವರೆಗೆ ಏಳು ಜನ ಪೀಠಾಧಿಪತಿಗಳು ಆಗಿಹೋಗಿದ್ದು ಪೂಜ್ಯ ಶರಣ ಬಸವಪ್ಪ ಅಪ್ಪ ಅವರು ಇಂದಿನ ಪೀಠಾಧಿಪತಿಗಳಾಗಿರುತ್ತಾರೆ. ಈ ಸಂಸ್ಥೆಯು ಮಹಾ ದಾಸೋಹ ಪರಂಪರೆಯಾದ ತ್ರಿಕಾಲ ಪೂಜೆಯನ್ನು ನಡೆಸಿಕೊಂಡು ಬಂದಿರುವುದೇ ಅಲ್ಲದೆ ಹಲವಾರು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕ್ರೊಂಡಿದೆ. ಇದು ೧೯೧೮ರಲ್ಲಿ ಶರಣ ಬಸವೇಶ್ವರ ಕನ್ನಡ ವಾಚನಾಲಯವನ್ನು, ಮತ್ತು ೧೯೩೪ರಲ್ಲಿ ಹೆಣ್ಣು ಮಕ್ಕಳ ಕನ್ನಡ ಶಾಲೆಯನ್ನು ಪ್ರಾರಂಭಿಸಿತು.

**ಕೋಷ್ಟಕ : ೩.೧೬**

| ತಾಲೂಕು | | ಹಿಂದೂಗಳು | ಮುಸಲ್ಮಾನರು | ಕ್ರೈಸ್ತರು | ಜೈನರು | ಬೌದ್ಧರು | ಶೀಖರು | ಇತರ ಧರ್ಮೀಯರು | ಧರ್ಮವನ್ನು ಸೂಚಿಸಿದರು |
|---|---|---|---|---|---|---|---|---|---|
| ಅಫಜಲಪುರ | ಗ್ರಾಮಾಂತರ | ೧,೩೦,೩೨೬ | ೧೯,೭೪೭ | ೩೭ | ೨೭೦ | ೩೮ | -- | ೧೧ | ೪೩೭ |
| | ನಗರ | -- | -- | -- | -- | -- | -- | -- | -- |
| | ಒಟ್ಟು | ೧,೩೦,೩೨೬ | ೧೯,೭೪೭ | ೩೭ | ೨೭೦ | ೩೮ | - | ೧೧ | ೪೩೭ |
| ಆಳಂದ | ಗ್ರಾಮಾಂತರ | ೨,೧೧,೫೧೩ | ೨೧,೩೯೪ | ೧೯ | ೫೨೮ | ೬೧೧ | ೧೧ | ೦೨ | ೨೧೩ |
| | ನಗರ | ೧೩,೯೧೯ | ೧೧,೭೯೪ | ೧೦ | ೭೭೦ | -- | -- | -- | ೭೧ |
| | ಒಟ್ಟು | ೨,೨೫,೪೩೨ | ೩೩,೧೮೮ | ೧೯ | ೧,೨೯೮ | ೬೧೧ | ೧೧ | ೦೨ | ೨೮೪ |
| ಚಿಂಚೋಳಿ | ಗ್ರಾಮಾಂತರ | ೧,೫೧,೧೪೭ | ೨೬,೬೦೮ | ೪೮೨ | ೧೫ | ೧೪೪ | -- | ೧೧ | ೧೮೦ |
| | ನಗರ | ೬,೮೩೮ | ೩,೭೨೩ | ೦೦ | ೧೧ | ೦೩ | -- | -- | ೦೯ |
| | ಒಟ್ಟು | ೧,೫೭,೯೮೫ | ೩೦,೩೩೧ | ೪೮೨ | ೨೬ | ೧೪೭ | -- | ೧೧ | ೧೮೯ |
| ಚಿತ್ತಾಪುರ | ಗ್ರಾಮಾಂತರ | ೧,೭೫,೫೪೬ | ೩೨,೩೪೩ | ೭೭೬ | ೧೪೭ | ೦೩ | ೦೬ | ೧೧ | ೧೪೩ |
| | ನಗರ | ೬೬,೯೪೫ | ೩೦,೯೫೯ | ೧,೭೫೫ | ೮೫ | ೫೬೬ | ೬೧ | ೮೧ | ೬೪ |
| | ಒಟ್ಟು | ೨,೪೬,೪೯೧ | ೬೩,೩೦೨ | ೨,೫೩೧ | ೨೩೨ | ೫೬೯ | ೬೭ | ೮೨ | ೨೦೭ |
| ಗುಲಬರ್ಗಾ | ಗ್ರಾಮಾಂತರ | ೧,೮೬,೬೫೦ | ೨೫,೪೩೭ | ೪೭೪ | ೧೦೭ | ೭೩ | ೦೪ | ೦೨ | ೨೭೭ |
| | ನಗರ | ೧,೯೧,೮೫೭ | ೧,೧೩,೨೭೩ | ೨,೩೯೫ | ೧,೨೮೬ | ೧,೨೯೪ | ೧೭೭ | ೧೧೯ | ೫೧೯ |
| | ಒಟ್ಟು | ೩,೭೮,೫೦೭ | ೧,೩೮,೭೧೦ | ೨,೮೬೯ | ೧,೩೯೩ | ೧,೩೬೭ | ೧೮೧ | ೧೨೧ | ೭೯೬ |

| | | | | | | | | | |
|---|---|---|---|---|---|---|---|---|---|
| ಜೇವರ್ಗಿ | ಗ್ರಾಮಾಂತರ | ೧,೫೮,೬೧೬ | ೨೯,೩೬೭ | ೧೫೦ | ೨೧೨ | ೧೬೫ | -- | ೧೧ | ೧೯೬ |
| | ನಗರ | -- | -- | -- | -- | -- | -- | -- | -- |
| | ಒಟ್ಟು | ೧,೫೮,೬೧೬ | ೨೯,೩೬೭ | ೧೫೦ | ೨೧೨ | ೧೬೫ | -- | ೧೧ | ೧೯೬ |
| ಸೇಡಂ | ಗ್ರಾಮಾಂತರ | ೧,೧೫,೩೫೧ | ೧೪,೦೭೮ | ೨೫೧ | ೧೪ | -- | -- | ೧೧ | ೧೯೪ |
| | ನಗರ | ೨೪,೬೦೭ | ೮,೨೫೦ | ೨೮೭ | ೪೩ | ೦೪ | ೧೧ | ೦೮ | ೫೬ |
| | ಒಟ್ಟು | ೧,೩೯,೯೫೮ | ೨೨,೩೨೮ | ೫೩೮ | ೫೭ | ೦೪ | ೧೧ | ೦೯ | ೨೫೦ |
| ಶಹಾಪುರ | ಗ್ರಾಮಾಂತರ | ೧,೭೯,೮೭೫ | ೨೬,೬೪೨ | ೧,೩೬೦ | ೨೭ | ೦೬ | -- | ೧೧ | ೫೬ |
| | ನಗರ | ೨೧,೫೨೭ | ೯,೯೭೧ | ೬೧ | ೧೫೦ | ೦೭ | -- | -- | ೭೩ |
| | ಒಟ್ಟು | ೨,೦೧,೪೦೨ | ೩೬,೬೧೩ | ೧,೪೨೧ | ೧೭೭ | ೧೩ | -- | ೧೧ | ೧೨೯ |
| ಸುರಪುರ | ಗ್ರಾಮಾಂತರ | ೨,೨೦,೫೮೧ | ೨೧,೬೪೫ | ೧೨೮ | ೧೯೮ | -- | -- | ೦೨ | ೩೬೫ |
| | ನಗರ | ೨೫,೭೪೨ | ೧೨,೧೪೭ | ೨೪೪ | ೫೦೨ | -- | -- | ೧೭೧ | ೧೮ |
| | ಒಟ್ಟು | ೨,೪೬,೩೨೩ | ೩೩,೭೯೨ | ೩೭೨ | ೭೦೦ | -- | -- | ೧೭೩ | ೩೮೩ |
| ಯಾದಗಿರಿ | ಗ್ರಾಮಾಂತರ | ೧,೯೨,೯೨೫ | ೧೮,೧೬೫ | ೫,೨೭೪ | ೪೨ | -- | -- | ೦೨ | ೩೩೪ |
| | ನಗರ | ೩೭,೦೪೭ | ೧೯,೧೦೧ | ೪೯೬ | ೫೩೩ | ೧೧ | ೦೯ | ೬೭ | ೬೬ |
| | ಒಟ್ಟು | ೨,೨೯,೯೭೨ | ೩೭,೨೬೬ | ೫,೭೭೦ | ೫೯೫ | ೧೧ | ೦೯ | ೬೯ | ೪೦೦ |
| ಜಿಲ್ಲೆಯ ಒಟ್ಟು | ಗ್ರಾಮಾಂತರ | ೧೭,೨೨,೫೩೦ | ೨,೩೫,೪೨೬ | ೮,೯೪೧ | ೧,೫೬೦ | ೧,೦೩೯ | ೧೧ | ೧೪ | ೨,೮೪೫ |
| | ನಗರ | ೩,೮೮,೪೮೨ | ೨,೦೯,೨೧೮ | ೫,೩೪೮ | ೩,೪೦೦ | ೧,೮೭೫ | ೨೫೮ | ೪೪೬ | ೮೭೬ |
| | ಒಟ್ಟು | ೨೧,೧೧,೦೧೨ | ೪,೪೪,೬೪೪ | ೧೪,೧೮೯ | ೪,೯೬೦ | ೨,೯೧೪ | ೨೬೯ | ೪೬೦ | ೩,೭೨೧ |

ಇಂದು ಶ್ರೀ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘವು ವಿಶಾಲವಾಗಿ ಬೆಳೆದಿದ್ದು ಇದರ ಆಶ್ರಯದಲ್ಲಿ ಪ್ರಾಥಮಿಕ ಹಂತದಿಂದ ಪದವಿ ತರಗತಿಗಳವರೆಗೆ ಅನೇಕ ಶಾಲಾ ಕಾಲೇಜುಗಳು, ಗ್ರಂಥಾಲಯ, ಮುದ್ರಣಾಲಯ ಮುಂತಾದವುಗಳು ಕಾರ್ಯನಿರ್ವಹಿಸುತ್ತಿರುವುದೇ ಅಲ್ಲದೆ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ತರಗತಿಯನ್ನು ಮತ್ತು ಐ.ಎ.ಎಸ್. ಪರೀಕ್ಷೆಗೆ ತರಬೇತಿ ನೀಡುವ ಕೇಂದ್ರವನ್ನು ಪ್ರಾರಂಭಿಸಿದೆ. ಇದರ ಎಲ್ಲಾ ವಿದ್ಯಾ ಸಂಸ್ಥೆಗಳಿಗೂ ಸೋಮವಾರವು ವಾರದ ರಜೆಯಾಗಿರುವುದು ಒಂದು ವಿಶಿಷ್ಟವಾಗಿದೆ.

### ಶ್ರೀ ಸದ್ಗುರು ತ್ರಿವಿಕ್ರಮಾನಂದ ಆಶ್ರಮ

ಜೇವರ್ಗಿ ತಾಲೂಕಿನ ಗಂವ್ಹಾರದಲ್ಲಿರುವ ಈ ಅಶ್ರಮವು ನಾಥ ಸಂಪ್ರದಾಯಕ್ಕೆ ಸೇರಿದ್ದು ಅದ್ವೈತ ಸಿದ್ಧಾಂತ ಪ್ರಚಾರವುಇದರ ಪ್ರಮುಖ ಉದ್ದೇಶವಾಗಿದೆ. ಅನ್ನದಾಸೋಹ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಇದು ಕೈಗೊಂಡಿದ್ದು ಇದರ ಆಶ್ರಯಲ್ಲಿ ಒಂದು ಪ್ರೌಢಶಾಲೆಯು ಕಾರ್ಯ ನಿರ್ವಹಿಸುತ್ತಿದೆ. ಪ್ರತಿ ವರ್ಷ ತ್ರಿವಿಕ್ರಮಾನಂದರ ಹಾಗೂ ಸದ್ಗುರು ಶಂಕರಾನಂದರ ಪುಣ್ಯಾರಾಧನೆಗಳು ಇಲ್ಲಿ ನಡೆಯುವುದಲ್ಲದೇ, ನವರಾತ್ರಿ ಹಾಗೂ ಮಹಾ ಶಿವರಾತ್ರಿ ಸಮಯದಲ್ಲಿ ವಿಶೇಷ ಕಾರ್ಯಕ್ರಮಗಳು, ಪ್ರವಚನಗಳೂ ನಡೆಯುತ್ತವೆ.

### ಆರ್ಯ ಸಮಾಜ

ಗುಲಬರ್ಗಾದಲ್ಲಿ ಆರ್ಯ ಸಮಾಜವು ೧೯೨೫ರಲ್ಲಿ ವಕೀಲರಾಗಿದ್ದ ದತ್ತಾತ್ರೇಯ ಪ್ರಸಾದ್ ಅವರ ಪ್ರಯತ್ನದಿಂದ ಸ್ವಾಮಿ ದಯಾನಂದ ಸರಸ್ವತಿಯವರ ತತ್ವ ಪ್ರಚಾರವನ್ನು ಕೈಗೊಳ್ಳುವ ಮುಖ್ಯ ಉದ್ದೇಶದಿಂದ ಆರಂಭವಾಯಿತು. ಈ ಸಂಸ್ಥೆಯು ನಿಜಾಮರ ಕಾಲದಲ್ಲಿ (ಸ್ವಾತಂತ್ರ್ಯ ಪೂರ್ವದಲ್ಲಿ) ಸಾಮಾಜಿಕ ಹಾಗೂ ಧಾರ್ಮಿಕ ಹಕ್ಕಿಗಾಗಿ ಶ್ರಮಿಸಿದ್ದು ಇದಕ್ಕಾಗಿ ೧೯೩೮-೩೯ರಲ್ಲಿ ಸತ್ಯಾಗ್ರಹವನ್ನು ಕೈಗೊಂಡಿತು. ಈ ಸಮಯದಲ್ಲಿ ಭಾರತದ ಇತರ ಭಾಗಗಳಿಂದಲೂ ಆರ್ಯ ಸಮಾಜದ ಪ್ರತಿನಿಧಿಗಳು ಬಂದಿದ್ದು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಇದರ ಆಶ್ರಯದಲ್ಲಿ ಪ್ರತಿ ಭಾನುವಾರದಂದು ಸತ್ಸಂಗದ ಕಾರ್ಯಕ್ರಮವನ್ನು ಕೈಗೊಂಡಿದ್ದು ಈ ಸಂದರ್ಭದಲ್ಲಿ ಹೋಮಹವನಾದಿಗಳನ್ನು ಏರ್ಪಡಿಸುತ್ತಿರುವುದೇ ಅಲ್ಲದೆ ಆಗಾಗ್ಗೆ ಹೊರಗಿನಿಂದ ವಿದ್ವಾಂಸರನ್ನು ಆಹ್ವಾನಿಸಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ. ಅಂತರಜಾತಿಯ ವಿವಾಹವನ್ನು ಇದು ನೆರವೇರಿಸುತ್ತದೆ. ಈ ಸಮಾಜವು ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ಇದರ ಆಶ್ರಯದಲ್ಲಿ ಶಿಕ್ಷಣ ಸಂಸ್ಥೆ, ಯೋಗ ತರಗತಿ ಹಾಗೂ ಶಿಕ್ಷಣ ಶಿಬಿರಗಳು ನಡೆಯುತ್ತಿವೆ.

### ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯ

ಮಾನವನಲ್ಲಿ ನೈತಿಕ ಮೌಲ್ಯಗಳನ್ನು ಮತ್ತು ಆಧ್ಯಾತ್ಮಿಕ್ರ ಜ್ಞಾನವನ್ನು ವೃದ್ಧಿಸಿಕೊಳ್ಳಲು ಪೂರಕವಾಗುವಂತಹ ಶಿಕ್ಷಣವನ್ನು ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ. ಇದರ ಪ್ರಧಾನ ಕೇಂದ್ರವು ರಾಜಸ್ತಾನದ ಮೌಂಟ್ ಅಬುವಿನಲ್ಲಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಇದರ ಶಾಖೆಯು ೧೯೬೯ರಲ್ಲಿ ಆರಂಭವಾಗಿದ್ದು ಈಗ ಇದು ಒಂದು ವಲಯ ಕಛೇರಿಯಾಗಿದ್ದು ಇದರ ವ್ಯಾಪ್ತಿಯಲ್ಲಿ ಶಹಾಪುರ, ಸುರಪುರ, ಜೇವರ್ಗಿ, ಯಾದಗಿರಿ, ಅಫಜಲ್‌ಪುರ ಹಾಗೂ ಶಹಾಬಾದ್‌ಗಳಲ್ಲಿ ರಾಜಯೋಗ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇದರ ಬೆಳ್ಳಿ ಹಬ್ಬವನ್ನು ೧೯೯೪ರಲ್ಲಿ ಆಚರಿಸಲಾಯಿತು.

### ಮಠಗಳು

ಮಠ ಮಾನ್ಯಗಳ ಪರಿಕಲ್ಪನೆ ಮತ್ತು ಕಾರ್ಯಕ್ರಮವು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದ್ದರೂ ಈ ಸಂಸ್ಥೆಗಳು ಮೂಲತಹ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ರಂಗಗಳಲ್ಲಿ ತಮ್ಮದೇ ಆದ ಅತ್ಯಮೂಲ್ಯ ಕೊಡುಗೆಗಳನ್ನು ಜನ ಸಮುದಾಯಕ್ಕೆ ನೀಡುತ್ತಾ ಬಂದಿರುವುವು. ಜಿಲ್ಲೆಯಲ್ಲಿರುವ ಕೆಲವು ಮಠಗಳ ಬಗ್ಗೆ ಈ ಮುಂದೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

## ಗುರುಬಸವ ಬ್ರಹನ್ಮಠ

ಗುಲಬರ್ಗಾದ ಮುಕ್ತಂಪುರದಲ್ಲಿರುವ ವೀರಶೈವ ಸಂಪ್ರದಾಯದ ಗುರುಬಸವ ಬ್ರಹನ್ಮಠವು ಒಂದು ಪ್ರಾಚೀನ ಮಠವಾಗಿದೆ. ಗುರುಬಸವೇಶ್ವರರು ಇದರ ಮೂಲ ಪುರುಷರಾಗಿದ್ದು ೧೯ನೇ ಪೀಠಾಧಿಪತಿಗಳಾದ ಚನ್ನಮಲ್ಲದೇವರು ಸದ್ಯದ ಪೀಠಾಧಿಪತಿಗಳಾಗಿರುತ್ತಾರೆ. ಈ ಮಠವು ಒಂದು ಸ್ವತಂತ್ರ ಮಠವಾಗಿದ್ದು ಇದರಆಶ್ರಯದಲ್ಲಿ ಅನಾಥಾಲಯ ಹಾಗೂ ಹಲವಾರು ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿ ಪ್ರತಿನಿತ್ಯ ದಾಸೋಹ, ಯೋಗ ಶಿಬಿರಗಳು, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಕಾರ್ತೀಕಮಾಸದಲ್ಲಿ ದೀಪೋತ್ಸವ ಇವೇ ಮುಂತಾದ ಕಾರ್ಯಕ್ರಮಗಳು ಜರುಗುತ್ತವೆ. ಇದು ಜಿಲ್ಲೆಯಲ್ಲಿ ೧೬ ಶಾಖಾ ಮಠಗಳನ್ನು ಹೊಂದಿರುವುದೇ ಅಲ್ಲದೆ ಬೀದರ್ ಹಾಗೂ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯಲ್ಲಿ ಶಾಖಾಮಠಗಳನ್ನು ಹೊದಿದೆ.

## ಗದ್ದುಗೆ ಮಠ

ಗುಲಬರ್ಗಾದ ಮುಕ್ತಂಪುರದಲ್ಲಿರುವ ಗದ್ದುಗೇ ಮಠವು ವೀರಶೈವ ಸಂಪ್ರದಾಯಕ್ಕೆ ಸೇರಿದ್ದು ಸುಮಾರು ೧೬ನೇ ಶತಮಾನಕ್ಕೂ ಪೂರ್ವದ್ದು ಎಂಬ ಅಭಿಪ್ರಾಯವಿದೆ. ರೇವಣ್ಣಸಿದ್ಧ ಶಿವಯೋಗಿಗಳು ಇದರ ಸ್ಥಾಪಕರಾಗಿದ್ದು ಇಂದಿನ ಪೀಠಾಧೀಶರಾಗಿರುವ ನಿರಂಜನ ರೇವಣ್ಣ ಸಿದ್ಧಸ್ವಾಮಿಗಳೂ ೧೪ನೇ ಪೀಠಾಧೀಶರಾಗಿರುತ್ತಾರೆ. ಭಕ್ತರ ಸಹಕಾರದಿಂದ ನಡೆಯುತ್ತಿರುವ ಈ ಮಠವು ಒಂದು ವಿರಕ್ತ ಹಾಗೂ ಸ್ವತಂತ್ರ ಮಠವಾಗಿದ್ದು ಜಿಲ್ಲೆಯಲ್ಲಿ ಐದು ಶಾಖಾ ಮಠಗಳನ್ನು ಹೊಂದಿದೆ. ಮಠದ ಆಶ್ರಯದಲ್ಲಿ ಒಂದು ಉಚಿತ ಪ್ರಸಾದ ನಿಲಯವು ಸದ್ಭಾವಗೋಷ್ಠಿಯು ನಡೆಯುತ್ತಿದ್ದು ಆಧ್ಯಾತ್ಮಿಕ ವಿಚಾರವಾಗಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದೆ.

## ವಿಶ್ವಾರಾಧ್ಯ ಸಿದ್ಧಸಂಸ್ಥಾನ ಮಠ

ಯಾದಗಿರಿ ತಾಲ್ಲೂಕಿನ ಅಬ್ಬೆ ತುಮಕೂರಿನಲ್ಲಿರುವ ವಿಶ್ವಾರಾಧ್ಯ ಸಿದ್ಧ ಸಂಸ್ಥಾನದ ಮಠವು ೧೯೪೫ರಲ್ಲಿ ವಿಶ್ವಾರಾಧ್ಯರಿಂದ ಸ್ಥಾಪಿಸಲ್ಪಟ್ಟಿದೆ. ಗಂಗಾಧರ ಸ್ವಾಮಿಗಳು ಸಧ್ಯದ ಪೀಠಾಧಿಕಾರಿಯಾಗಿರುತ್ತಾರೆ. ಪ್ರತಿ ತಿಂಗಳು ಶಿವಾನಭವ ಗೋಷ್ಠಿಯನ್ನು ಶಿವರಾತ್ರಿ ಸಂದರ್ಭದಲ್ಲಿ ವಿಶ್ವಾರಾಧ್ಯರ ರಥೋತ್ಸವವನ್ನೂ ಹಾಗೂ ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನಗಳನ್ನು ಮಠದ ಆಶ್ರಯದಲ್ಲಿ ಏರ್ಪಡಿಸುವುದೇ ಅಲ್ಲದೆ ಕಲ್ಯಾಣಮಂಟಪ, ಶಿವಾನುಭವ ಮಂಟಪ ಹಾಗೂ ವಿಶ್ವಗಂಗಾ ವಿದ್ಯಾ ಸಂಸ್ಥೆಯು ಇದರ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲೆ ಅಲ್ಲದೆ ಇತರಕಡೆಗಳಲ್ಲೂ ಇದರ ಶಾಖಾ ಮಠಗಳಿವೆ.

## ವಿರಕ್ತ ಮಠ

ಆಳಂದ ತಾಲೂಕಿನ ಕಲ್ಲಕೌಲಗಿಯಲ್ಲಿರುವ ವಿರಕ್ತ ಮಠವು ಸುಮಾರು ಒಂದು ಪ್ರಾಚೀನ ಮಠವಾಗಿದೆ. ಈ ಮಠವು ವೀರಶೈವ ಸಂಪ್ರದಾಯಕ್ಕೆ ಸೇರಿದ್ದು ಗೌರಿಶಂಕರ ಮಹಾಸ್ವಾಮಿಗಳು ಈಗಿನ ಮಠಾಧೀಶರಾಗಿರುತ್ತಾರೆ. ಮಠವು ವಿದ್ಯಾರ್ಥಿಗಳಿಗಾಗಿ ಉಚಿತ ವಸತಿ ಸೌಲಭ್ಯವನ್ನೊದಗಿಸಿದೆ. ಆಮಾವಾಸ್ಯೆ ದಿನದಂದು ಇಲ್ಲಿ ವಿಶೇಷ ಪೂಜಾಕಾರ್ಯಕ್ರಮಗಳು ನಡೆಯುತ್ತವೆ.

## ಶಾಂತೇಶ್ವರ ಹೀರೇಮಠ

ಆಳಂದ ತಾಲೂಕಿನ ಮಾದನ ಹಿಪ್ಪರಗಿಯಲ್ಲಿರುವ ಶಾಂತೇಶ್ವರ ಹಿರೇಮಠದ ಕತೃ ಗುರು ಶಾಂತೇಶ್ವರರಾಗಿದ್ದು ಇದು ಪಂಚಾಚಾರ್ಯ ಪರಂಪರೆ ಸಂಪ್ರದಾಯಕ್ಕೆ ಸೇರಿರುತ್ತದೆ. ಈ ಮಠವು ಸಂಸ್ಕೃತ ಶಿಕ್ಷಣ, ಬಡಮಕ್ಕಳಿಗೆ ಉಚಿತ ಪ್ರಸಾದ ಇವೇ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದೆ. ಮಠದ ಆಶ್ರಯದಲ್ಲಿ ಗುರುಪರಂಪರೆಗನುಗುಣವಾಗಿ ವರ್ಷಕ್ಕೊಮ್ಮೆ ನಡೆಯುವ ಪುಣ್ಯತಿಥಿ ಸಂದರ್ಭದಲ್ಲಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ.

## ಮಹಾಂತೇಶ್ವರ ಸಂಸ್ಥಾನ ವಿರಕ್ತ ಮಠ

ಅಫಜಲ್‌ಪುರ ತಾಲೂಕಿನ ಭೈರಾಮಡಗಿಯಲ್ಲಿರುವ ಮಹಾಂತೇಶ್ವರ ಸಂಸ್ಥಾನ ವಿರಕ್ತ ಮಠವು ಒಂದು ಪ್ರಾಚೀನ ಮಠವಾಗಿದ್ದು ವೀರಶೈವ ಸಂಪ್ರದಾಯಕ್ಕೆ ಸೇರಿದೆ. ಈ ಮಠವು ಮಹಾಂತೇಶ್ವರರಿಂದ ಸ್ಥಾಪಿತವಾಗಿರಬಹುದೆಂಬ

ಅಭಿಪ್ರಾಯವಿದೆ. ಗವಿ ಮಹಾಂತಸ್ವಾಮಿಗಳು ಸಧ್ಯದ ಪೀಠಾಧಿಕಾರಿಗಳಾಗಿರುತ್ತಾರೆ. ಪ್ರತಿ ನಿತ್ಯ ದಾಸೋಹ ಕಾರ್ಯಕ್ರಮ, ಶ್ರಾವಣಮಾಸದಲ್ಲಿ ವಿಶೇಷ ಪೂಜೆ, ಭಜನೆ ಮುಂತಾದ ಕಾರ್ಯಕ್ರಮಗಳು, ಪ್ರತಿ ಅಮಾವಾಸ್ಯೆ ಹಾಗೂ ಹುಣ್ಣಿಮೆಯಲ್ಲಿ ಲಿಂಗಾರ್ಚನೆ ಮತ್ತು ಮಹಾರುದ್ರಾಭಿಷೇಕ ಮುಂತಾದವು ಮಠದ ಆಶ್ರಯದಲ್ಲಿ ನಡೆಯುತ್ತವೆ.

**ಚೌಡಾಪುರ ಹಿರೇಮಠ**

ಗುಲಬರ್ಗಾದ ಬ್ರಹ್ಮಪುರಿಯಲ್ಲಿರುವ ಈ ಮಠವು ಒಂದು ಪ್ರಾಚೀನ ಮಠವಾಗಿದ್ದು ರೇವಣ್ಣಸಿದ್ಧ ಸ್ವಾಮಿಗಳು ಈ ಮಠದ ಮೂಲ ಕರ್ತೃಗಳಾಗಿರುತ್ತಾರೆ. ಈ ಮಠದ ಪರಂಪರೆಯಲ್ಲಿ ಬಂದ ಶಾಂತವೀರ ಶಿವಾಚಾರ್ಯರು ಮಠದ ಸರ್ವತೋಮುಖ ಏಳಿಗೆಗಾಗಿ ಶ್ರಮಿಸಿದುದೇ ಅಲ್ಲದೆ ಸ್ವತಹ ಹಲವಾರು ಕೃತಿಗಳನ್ನು ರಚನೆ ಮಾಡಿದ್ದಾರೆ. ಇಂದಿನ ಪೀಠಾಧೀಶರಾಗಿರುವ ರೇವಣಸಿದ್ಧ ಸ್ವಾಮಿಗಳು ಮಠದಿಂದ ಹಲವಾರು ಶೈಕ್ಷಣಿಕ ಕಾರ್ಯಕ್ರಮವನ್ನೂ ಸಹ ಕೈಗೊಂಡಿರುವರು.

**ವಿರಕ್ತ ಮಠ**

ಸುರಪುರ ತಾಲೂಕಿನ ಬಲಶೆಟ್ಟಿ ಹಾಳದ ಈ ಮಠವು ಒಂದು ಪ್ರಾಚೀನ ಮಠವೆಂದು ತಿಳಿದು ಬರುತ್ತದೆ. ಈಚೆಗೆ ಈ ಮಠದ ಜೀರ್ಣೋದ್ಧಾರ ಕಾರ್ಯಕ್ರಮವನ್ನು ಕೈಗೊಂಡಿದ್ದು ಗುರುಪಾದಯ್ಯ ಸ್ವಾಮಿಯವರು ಸಧ್ಯದ ಮಠಾಧೀಶರಾಗಿತ್ತಾರೆ. ಪ್ರತಿನಿತ್ಯ ದಾಸೋಹ, ನಾಡ ಹಬ್ಬದ ಅಂಗವಾಗಿ 'ಬನ್ನಿ' ಮುಡಿಯುವುದು, ಶ್ರಾವಣ ಮಾಸದಲ್ಲಿ ಪುರಾಣ ಶ್ರವಣ ಹಾಗೂ ಶಿವರಾತ್ರಿ ಸಮಯದಲ್ಲಿ ಶಿವಭಜನೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕ್ರೊಳ್ಳಲಾಗುವುದು.

**ಹಿರೇಮಠ**

ಇದು ಶಹಾಪೂರ ತಾಲೂಕಿನ ದೋರನಹಳ್ಳಿಯ ಒಂದು ಪ್ರಾಚೀನ ಮಠವೆಂದು ತಿಳಿದುಬರುತ್ತದೆ. ಶಹಾಪುರ ತಾಲೂಕಿನ ಕನ್ಯಾಕೋಳೂರು, ಶಿರವಾಳ, ಇಟಗಿ, ಕುರಕುಂದಾ ಹಾಗೂ ಚಟ್ನಳ್ಳಿ ಗ್ರಾಮಗಳಲ್ಲಿ ಇದರ ಶಾಖಾ ಮಠಗಳಿವೆ. ಮಠವು ದಾಸೋಹ, ಪುರಾಣ ಪ್ರವಚನಗಳು ಇವೇ ಮುಂತಾದ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ಹಮ್ಮಿಕ್ರೊಂಡಿದೆ. ಪ್ರತೀ ಶಿವರಾತ್ರಿ ಅಮಾವಾಸ್ಯೆಯಂದು ಮಠದ ಮೂಲ ಪುರುಷರಾದ ಮಹಾಂತ ಶಿವಯೋಗಿಗಳ ರಥೋತ್ಸವವನ್ನು ಇಲ್ಲಿ ಏರ್ಪಡಿಸಲಾಗುವುದು.

**ಸಿದ್ಧಲಿಂಗೇಶ್ವರ ಸಂಸ್ಥಾನ ಮಠ**

ಚಿತ್ತಾಪುರ ತಾಲೂಕಿನ ರಾವೂರಿನಲ್ಲಿರುವ ಈ ಮಠವು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಪರಂಪರೆಗೆ ಸೇರಿದ್ದು ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕ್ರೊಂಡಿದೆ. ಈ ಮಠದ ಆಶ್ರಯದಲ್ಲಿ ಅನೇಕ ಶಾಲಾ ಕಾಲೇಜುಗಳೂ,ಸಂಗೀತ ಶಾಲೆ, ಸಂಸ್ಕೃತ ಪಾಠಶಾಲೆ ಹಾಗೂ ಪ್ರಸಾದ ನಿಲಯಗಳು ಕಾರ್ಯ ನಿರ್ವಹಿಸುತ್ತಿರುವುದೇ ಅಲ್ಲದೆ ಶ್ರಾವಣ ಮಾಸದಲ್ಲಿ ಶಿವಾನುಭವ, ದಸರಾಹಬ್ಬದ ಉತ್ಸವ, ಚಿಂತನ ಕೂಟಗಳು, ಗ್ರಂಥಗಳ ಪ್ರಕಟಣೆ ಇವೇ ಮುಂತಾದ ಕಾರ್ಯಕ್ರಮಗಳೂ ನಡೆಯುತ್ತಿವೆ. ಇದು ಚಿತ್ತಾಪುರ ತಾಲೂಕಿನಲ್ಲಿ ಆರು ಶಾಖಾ ಮಠಗಳನ್ನು ಮತ್ತು ಜೇವರ್ಗಿ ತಾಲೂಕಿನಲ್ಲಿ ಒಂದು ಶಾಖಾ ಮಠವನ್ನು ಹೊಂದಿದೆ.

**ಕೋರಿ ಸಿದ್ಧೇಶ್ವರ ಸಂಸ್ಥಾನ ಮಠ**

ಚಿತ್ತಾಪುರ ತಾಲೂಕಿನ ನಾಲವಾರದಲ್ಲಿರುವ ಈ ಮಠವು ಒಂದು ಪ್ರಾಚೀನ ಮಠವಾಗಿದ್ದು ಕೋರಿ ಸಿದ್ದೇಶ್ವರರಿಂದ ಸ್ಥಾಪನೆಯಾಗಿದೆ ಎಂದು ತಿಳಿದು ಬರುತ್ತದೆ. ಮಠವು ತನ್ನ ಹಲವಾರು ಕಾರ್ಯ ಸಾಧನೆಗಳಿಂದ ಭಕ್ತಾದಿಗಳ ಆಕರ್ಷಣೆಗೆ ಪಾತ್ರವಾಗಿದೆ. ಕೋಟೇಂದ್ರ ಮಹಾಸ್ವಾಮಿಗಳು ಇಂದಿನ ಪೀಠಾಧಿಪತಿಗಳಾಗಿರುತ್ತಾರೆ. ಸಿದ್ಧೇಶ್ವರು ಕೋರಿಯನ್ನು (ಕಂಬಳಿ) ಹಾಸಿ, ತಮ್ಮ ಪವಾಡಶಕ್ತಿಯಿಂದ ನದಿಯನ್ನು ದಾಟಿದ್ದರಿಂದ 'ಕೋರಿ ಸಿದ್ಧೇಶ್ವರ' ಎಂಬ ಹೆಸರನ್ನು ಪಡೆದರೆಂಬ ನಂಬಿಕೆಯಿದೆ.

## ಷಣ್ಮುಖ ಶಿವಯೋಗಿಗಳ ಮಠ

ಜೇವರ್ಗಿಯಲ್ಲಿರುವ ಈ ಮಠವು ವಿರಕ್ತ ಪರಂಪರೆಯ ಮಠವಾಗಿದ್ದು ಇದನ್ನು ಅಖಂಡೇಶ್ವರ ಮಠ ಎಂತಲೂ ಕರೆಯುತ್ತಾರೆ. ಇದು ಸುಮಾರು ೩೦೦ ವರ್ಷಗಳ ಹಿಂದೆ ಸ್ಥಾಪಿತವಾಗಿದ್ದಿರಬಹುದೆಂದೂ ಹಾಗೂ ಅಖಂಡೇಶ್ವರರು (೧೬೩೧-೧೬೫೯) ಮೂಲತಃ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಅರಗ ಗ್ರಾಮಕ್ಕೆ ಸೇರಿದವರೆಂದು ತಿಳಿದು ಬರುತ್ತದೆ. ಅಖಂಡೇಶ್ವರರಿಂದ ಜಂಗಮ ದೀಕ್ಷೆ ಪಡೆದ ಷಣ್ಮುಖ ಸ್ವಾಮಿಗಳು ಮಠದ ಸರ್ವತೋಮುಖ ಬೆಳವಣಿಗಾಗಿ ಶ್ರಮಿಸಿದರು. ಶಾಂತಲಿಂಗಮಹಾಸ್ವಾಮಿಗಳು (ಕನಮಡಿ, ಬಿಜಾಪುರ ತಾಲೂಕು) ಈ ಮಠದ ಸಧ್ಯದ ಪೀಠಾಧಿಕಾರಿಗಳಾಗಿದ್ದು, ಇದರ ಆಶ್ರಯದಲ್ಲಿ ಮುರುಘರಾಜೇಂದ್ರ ಪ್ರಸಾದ ನಿಲಯ ಹಾಗೂ ಹಲವಾರು ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಮಠದ ಒಂಬತ್ತು ಶಾಖೆಗಳು ಕೌಲಗಿ, ಚಿಕ್ಕಕೌಲಗಿ, ಮುದನೂರು, ಮುಂದೇವಾಲ, ಹಿಪ್ಪರಗಿ, ನೆಲೋಗಿ, ಕೊಳಕೂರು, ಸುರುಪುರ, ಹಾಗೂ ತಾಂಬಾಳ (ಮಹಾರಾಷ್ಟ್ರ) ದಲ್ಲಿವೆ. ಪ್ರತಿವರ್ಷ ವೈಶಾಖ ಬಹುಳ ಪಂಚಮಿಯ ದಿನ ಷಣ್ಮುಖ ಶಿವಯೋಗಿಗಳ ರಥೋತ್ಸವವು ಜರುಗುತ್ತದೆ. ಈ ಸಂದರ್ಭದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಶಿವಾನುಭವ ಗೋಷ್ಠಿಗಳು ನಡೆಯುತ್ತವೆ. ಈ ಮಠವನ್ನು ಸುರಪುರ ಸಂಸ್ಥಾನದಲ್ಲಿ ಮಂತ್ರಿಗಳಾಗಿದ್ದ ವೀರಭದ್ರಪ್ಪ ನಿಷ್ಠೆಯವರು ಕಟ್ಟಿಸಿದ ಬಗ್ಗೆ ಒಂದು ಶಾಸನವೂ ಇರುವುದು. ಈ ಮಠದ ಜಾತ್ರೆಯು ವೈಶಾಖ ಬಹುಳ ಪಂಚಮಿಯಂದು (ಮೇ ತಿಂಗಳು) ಐದು ದಿವಸ ನಡೆಯುವುದು.

## ಮಹಾಂತೇಶ್ವರ ಮಠ

ಅಫ್‌ಜಲಪುರ ತಾಲೂಕಿನ ಚಿನ್ಮಯಗಿರಿ (ಚಿಣಮಗೇರಿ) ಚೌಡಾಪುರ ಗ್ರಾಮಗಳ ನಡುವೆ ಒಂದು ಗುಡ್ಡದ ಮೇಲಿರುವ ಈ ಮಠವು ಬಹಳ ಪ್ರಾಚೀನವಾದುದೆಂದು ತಿಳಿದು ಬರುತ್ತದೆ. ಸಿದ್ಧರಾಮ ಶಿವಾಚಾರ್ಯರು ಸಧ್ಯದ ಪೀಠಾಧಿಕಾರಿಗಳಾಗಿದ್ದು ಮಠದ ಆಶ್ರಯದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ.

## ದ್ವೈತ ಸಂಪ್ರದಾಯದ ಮಠಗಳು

ದ್ವೈತ ಮತ ಸ್ಥಾಪಕರಾದ ಮಧ್ವಾಚಾರ್ಯರು (೧೨೩೮-೧೩೧೭) ಉಡುಪಿಯಲ್ಲಿ ಶ್ರೀ ಕೃಷ್ಣನನ್ನು ಪ್ರತಿಷ್ಠಾಪಿಸಿ ಅವನ ಪೂಜೆ ಮತ್ತು ದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಲು ಎಂಟು ಮಠಗಳನ್ನು ಸ್ಥಾಪಿಸಿದರು. ನಂತರದಲ್ಲಿ ಇವೇ ಜನಪ್ರಿಯವಾಗಿರುವ ಉಡುಪಿಯ ಅಷ್ಟ ಮಠಗಳಾದವು. ಘಟ್ಟದ ಮೇಲಿನ ಉತ್ತರ ಕರ್ನಾಟಕದಲ್ಲಿ ದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡುವುದಕ್ಕೆ ಮಧ್ವಾಚಾರ್ಯರಿಂದಲೇ ಸಂನ್ಯಾಸದೀಕ್ಷೆ ಪಡೆದಿದ್ದ ಅವರ ಜೇಷ್ಟ ಶಿಷ್ಯರೆನಿಸಿಕೊಂಡಿದ್ದ ಪದ್ಮನಾಭ ತೀರ್ಥರು ಉತ್ತರಾಧಿ ಮಠದ ಆದ್ಯ ಗುರುಗಳಾದರು. ಉಡುಪಿಯ ಉತ್ತರ ಭಾಗದಲ್ಲಿ ಈ ಜಿಲ್ಲೆಯಿರುವುದರಿಂದ ಈ ಮಠಕ್ಕೆ ಉತ್ತರಾಧಿ ಮಠವೆಂದು ಕರೆಯಲಾಯಿತೆಂದು ಪ್ರೊ. ಕೆ. ಟಿ. ಪಾಂಡುರಂಗಿ ಅವರು ಅಭಿಪ್ರಾಯ ಪಡುತ್ತಾರೆ. ಗುಲಬರ್ಗಾ ಜಿಲ್ಲೆಯಲ್ಲಿ ಉತ್ತರಾದಿಮಠದ ಪರಂಪರೆಯಲ್ಲಿ ಬರುವ ಮೂಲ ಬೃಂದಾವನಗಳೆಂದರೆ ಅಫಜಲ್‌ಪುರ ತಾಲೂಕಿನ ಮಣೂರಿನಲ್ಲಿರುವ ಮಾಧವ ತೀರ್ಥ ಹಾಗೂ ವೇದೇಶ ತೀರ್ಥರ ಮೂಲ ಬೃಂದಾವನಗಳು, ಸೇಡಂ ತಾಲೂಕಿನ ಮಳಖೇಡದಲ್ಲಿ ಅಕ್ಷೋಭ್ಯ ತೀರ್ಥರ, ಜಯತೀರ್ಥರ ಹಾಗೂ ರಘುನಾಥತೀರ್ಥರ ಮೂಲ ಬೃಂದಾವನಗಳು ಮತ್ತು ಯಾದಗಿರಿ ತಾಲೂಕಿನ ಯರಗೋಳದಲ್ಲಿರುವ ರಾಮಚಂದ್ರ ತೀರ್ಥರ ಹಾಗೂ ವಿದ್ಯಾನಿಧಿತೀರ್ಥರ ಮೂಲ ಬೃಂದಾವನಗಳು. ಮಧ್ವಾಚಾರ್ಯರ ಗ್ರಂಥಗಳಿಗೆ ಜಯತೀರ್ಥರು ಟೀಕೆ ಬರೆದುದರಿಂದ ಇವರು ಟೀಕಾಚಾರ್ಯರೆಂದು ಖ್ಯಾತಿ ಪಡೆದಿರುವರು. ಇದಲ್ಲದೆ ಮಳಖೇಡದಲ್ಲಿ ೧೮ ಮೃತ್ತಿಕಾ ಬೃಂದಾವನಗಳಿವೆ. ಮಣೂರಿನಲ್ಲಿ ಭಾದ್ರಪದ ಬಹುಳ ಅಮಾವಾಸ್ಯೆಯಂದು ಮಾಧವತೀರ್ಥರ ಆರಾಧನೆಯೂ, ಮಳಖೇಡದಲ್ಲಿ ಮಾರ್ಗಶಿರ ಬಹುಳ ಪಂಚಮಿಯಂದು ಆಕ್ಷೋಭ್ಯ ತೀರ್ಥರ ಆರಾಧನೆಯೂ ಆಷಾಡ ಬಹುಳ ಪಂಚಮಿಯಂದು ಜಯತೀರ್ಥರ ಆರಾಧನೆಯೂ ಮತ್ತು ಮಾರ್ಗಶಿರ ಬಹುಳ ಪಾಡ್ಯಮಿಯಂದು ರಘುನಾಥ ತೀರ್ಥರ ಆರಾಧನೆಯೂ ಹಾಗೂ ಯರಗೋಳದಲ್ಲಿ ವೈಶಾಖ ಶುದ್ಧ ಷಷ್ಠಿಯಂದು ರಾಮಚಂದ್ರ ತೀರ್ಥರ ಆರಾಧನೆಯೂ ಮತ್ತು ಕಾರ್ತಿಕ ಬಹುಳ ಚೌತಿಯಂದು ವಿದ್ಯಾನಿಧಿತೀರ್ಥರ ಆರಾಧನೆಯೂ ನಡೆಯುತ್ತದೆ.ಇದಲ್ಲದೆ ಮಣೂರಿನಲ್ಲಿ ವೇದೇಶ ತೀರ್ಥರ ಆರಾಧನೆ, ಮಳಖೇಡದಲ್ಲಿ ಮಧ್ವನವಮಿ ಇವೇ ಮುಂತಾದ ಕಾರ್ಯಕ್ರಮಗಳು ಪುಣ್ಯ ಕ್ಷೇತ್ರಗಳಲ್ಲಿ ನಡೆಯತ್ತವೆ. ಮಣೂರಿನಲ್ಲಿ ವೇದೇಶತೀರ್ಥ ಪಾಠ ಶಾಲೆಯು

ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲೆಯ ಅನೇಕ ಕಡೆಗಳಲ್ಲಿ ರಾಘವೇಂದ್ರ ಸ್ವಾಮಿಗಳ ಮೃತ್ತಿಕಾ ಬೃಂದಾವನಗಳಿದ್ದು ಇವರ ಆರಾಧನೆಯು ಶ್ರಾವಣ ಬಹುಳ ಬಿದಿಗೆಯಂದು ನಡೆಯುತ್ತದೆ.

ಯಾದಗಿರಿ, ಶಹಾಪುರ, ತಿಂಥಿಣಿ ಹಾಗೂ ಸುಲೇಪೇಟೆಯಲ್ಲಿ ವಿಶ್ವಕರ್ಮ ಸಮಾಜದ ಮಠಗಳಿವೆ. ಗುಲಬರ್ಗಾ ಜಿಲ್ಲೆಯ ತಾಲೂಕುಗಳಲ್ಲಿನ ಇನ್ನೂ ಕೆಲವು ಮಠಗಳ ಹೆಸರುಗಳನ್ನು ಮುಂದೆ ನೀಡಲಾಗಿದೆ : ನವಕಲ್ಯಾಣ ಮಠ, ಇಂಚಗೇರ (ಅಫ್‌ಜಲಪುರ ತಾಲೂಕು) ಗುರನಂದೇಶ್ವರ ಮಠ, ಭರತನೂರು (ಚಿಂಚೋಳಿ ತಾಲೂಕು), ಕೋಪನ ಕಟ್ಟೀ ಮನಿ ಹಿರೇಮಠ, ನಂದೂರು ಮತ್ತು ರಾಚೋಟೇಶ್ವರ ಮಠ, ಹೊನ್ನಕಿರಣಗಿ (ಗುಲಬರ್ಗಾ ತಾಲೂಕು), ಬಳಟ್ಟಿ ಮಠ, ಬಳಬಟ್ಟು, ಕಡಕುಳ್ಳ ಮಡಿವಾಳರ ಮಠ, ಕಡಕುಳ್ಳ ಮತ್ತು ಸಿದ್ದಲಿಂಗೇಶ್ವರ ಮಠ, ಸೊನ್ನ (ಜೇವರ್ಗಿ ತಾಲೂಕು) ಸಗರಮಠ, ಸಗರ (ಶಹಾಪುರ ತಾಲೂಕು), ಮತ್ತು ಕಡಲಪ್ಪನವರ ದಾಸೋಹಮಠ, ಸುರಪುರ, ಹಿರೇಮಠ (ಬಿಲ್ಲಕೊಂಡಿ ಮಠ) ಸುರಪುರ, ಹಿರೇಮಠ (ಪಂಚಾಂಗಮಠ) ಸುರಪುರ, ಸೂಗುರೇಶ್ವರ ಮಠ, ಸುರಪುರ, ರುದ್ರಸ್ವಾಮಿಮಠ, ರಂಗಂಪೇಟೆ, ಅಣ್ಣಯ್ಯನ ಮಠ, ರಂಗಂಪೇಟೆ, ಗುರುಸ್ಥಳದ ಮಠ, ಹುಣಸಗಿ, ಯಾಳಗಿಮಠ, ಯಾಳಗಿ, ಮದ್ರಿಕಿ ಮಠ ಮದ್ರಿಕಿ, ದೇವಾಪುರಮಠ, ದೇವಾಪುರ, ಖಾನಾಪುರ ಮಠ ಖಾನಾಪುರ, ಬೆಳಸಿಟ್ಟ್ಯಾಳ ಮಠ, ಬೆಳಸಿಟ್ಟ್ಯಾಳ ಹಾಗೂ ನಾಕಾಪುರ ಮಠ, ನಾಕಾಪುರ (ಸುರಪುರ ತಾಲೂಕು).

## ಜಾತಿ ಮತ್ತು ಬುಡಕಟ್ಟುಗಳು

ಜಾತಿ ಪದ್ಧತಿಯು ಹಿಂದೂ ಸಮಾಜದ ಒಂದು ವಿಶಿಷ್ಟ ಲಕ್ಷಣವಾಗಿದೆ. ಜಾತಿಯು ಬಹು ಮಟ್ಟಿಗೆ ಪಾರಂಪರ್ಯವಾಗಿ ಬಂದ ಒಂದು ವೃತ್ತಿಯನ್ನು ಅನುಸರಿಸುವುದುದಾದರೂ ಇತ್ತೀಚಿನ ದಿನಗಳಲ್ಲಿ ಕೆಲವು ಬದಲಾವಣೆಗಳು ಕಂಡು ಬರುತ್ತಿವೆ. ಉಡಿಗೆ-ತೊಡಿಗೆಗಳು, ಆಹಾರಭ್ಯಾಸಗಳು, ವಿವಾಹ, ಅಂತ್ಯಕ್ರಿಯೆ ಇವೇ ಮೊದಲಾದ ಸಾಮಾಜಿಕ ಹಾಗೂ ಧಾರ್ಮಿಕ ಆಚಾರಗಳು, ರೂಢಿ ಪದ್ಧತಿಗಳು, ಜಾತಿಯಿಂದ ಜಾತಿಗೆ ವಿಭಿನ್ನವಾಗಿದೆ. ಬುಡಕಟ್ಟು ಎಂಬುದು ಅನೇಕ ಕುಲಗಳು, ಅಲೆಮಾರಿ ತಂಡಗಳು ಅಥವ ನಿಶ್ಚಿತ ಭೌಗೋಳಿಕ ಪ್ರದೇಶಗಳೊಳಗೆ ವಾಸಿಸುವ ವಿಶಿಷ್ಟ ಸಂಸ್ಕೃತಿಯನ್ನೊಳಗೊಂಡಿರುವ ಒಂದು ಸಾಮಾಜಿಕ ಸಂಘಟನೆಯಾಗಿದೆ. ಇತರಜಿಲ್ಲೆಗಳಲ್ಲಿ ಕಂಡು ಬರುವಂತೆ ಗುಲಬರ್ಗಾ ಜಿಲ್ಲೆಯೂ ಸಹ ವಿವಿಧ ಜಾತಿ ಮತ್ತು ಬುಡಕಟ್ಟಿನ ಜನರನ್ನೊಳಗೊಂಡಿದೆ. ಜಿಲ್ಲೆಯಲ್ಲಿ ಕಂಡುಬರುವ ಪ್ರತಿಯೊಂದು ಜಾತಿ, ಉಪಜಾತಿ, ಹಾಗೂ ಬುಡಕಟ್ಟಿನ ಜನರ ಬಗ್ಗೆ ಸವಿಸ್ತಾರವಾಗಿ ಇಲ್ಲಿ ವರ್ಣಿಸಿಲ್ಲದಿದ್ದರೂ ಕೆಲವುಜಾತಿ ಮತ್ತು ಬುಡಕಟ್ಟುಗಳ ಸಾಮಾಜಿಕ ಹಾಗೂ ಧಾರ್ಮಿಕ ಲಕ್ಷಣಗಳ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

**ಅಗಸ**

ಅಗಸರನ್ನು ಮಡಿವಾಳ, ದೋಬಿ, ಪರೀಟ್ ಮೊದಲಾದ ಹೆಸರುಗಳಿಂದಲೂ ಕರೆಯುತ್ತಾರೆ. ಪರೀಟರು ಮರಾಠಿ ಮಾತನಾಡುತ್ತಾರೆ. ಇವರು ಮೂಲತಹ ಮಹಾರಾಷ್ಟ್ರದಿಂದ ವಲಸೆ ಬಂದವರೆಂಬ ಅಭಿಪ್ರಾಯವಿದೆ. ಬಟ್ಟೆ ಸ್ವಚ್ಛಮಾಡುವುದು ಇವರ ವಂಶಪಾರಂಪರ್ಯ ಉದ್ಯೋಗವಾಗಿದ್ದು, ಕೆಲವರು ಕೃಷಿ ಮತ್ತಿತರ ಉದ್ಯೋಗಗಳಲ್ಲೂ ತೊಡಗಿರುತ್ತಾರೆ. ಇವರಲ್ಲಿ ಬಂಡಾರೇ, ಭೋಸಲೆ, ಹಿಂಗಣಕರ್ ಮೊದಲಾದ ಬೆಡಗುಗಳಿದ್ದು ಒಂದೇ ಬೆಡಗುವಿನಲ್ಲಿ ವಿವಾಹವಾಗುವ ಸಂಪ್ರದಾಯವಿಲ್ಲ. ಇವರಲ್ಲಿ ಪುರೋಹಿತವರ್ಗವಿರುವುದಿಲ್ಲ. ಮದುವೆ ಮುಂತಾದ ಧಾರ್ಮಿಕ ಸಮಾರಂಭಗಳನ್ನು ಬ್ರಾಹ್ಮಣ ಪುರೋಹಿತರು ಅಥವಾ ಲಿಂಗಾಯತ ಜಂಗಮರು ನೆರವೇರಿಸಿಕೊಡುತ್ತಾರೆ. ಇವರಲ್ಲಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ರೂಢಿಯಲ್ಲಿದೆ. ಇವರು ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಇವರು ತುಳಜಾಪುರದ ಅಂಬಾಭವಾನಿ, ಸೌಂದತ್ತಿ ಎಲ್ಲಮ್ಮ, ಯಾದಗಿರಿಯ ಸಮೀಪದ ಮೈಲಾರ ಮಲ್ಲಯ್ಯ ಮೊದಲಾದ ದೇವರನ್ನು ಪೂಜಿಸುತ್ತಾರೆ. ಪರೀಟರು ಫಂಡರಾಪುರದ ಪಾಂಡುರಂಗನಿಗೆ ನಡೆದುಕೊಳ್ಳುತ್ತಾರೆ. ವೀರಶೈವ ಧರ್ಮಾಚರಣೆಗಳನ್ನು ಅನುಸರಿಸುವ ಅಗಸರು ಮಡಿವಾಳ ಮಾಚಿದೇವನನ್ನು ಪೂಜಿಸುವರು, ವೀರಶೈವರಲ್ಲದ ಅಗಸರಲ್ಲಿ ಮಾಸಂಸಹಾರಿಗಳಿದ್ದಾರೆ.

**ಈಡಿಗ**

ಇವರನ್ನು ಈಳಿಗೇರ ಎಂದೂ ಕರೆಯುತ್ತಾರೆ. ಇವರು ಅಫಜಲ್‌ಪುರ, ಚಿಂಚೋಳಿ, ಚಿತ್ತಾಪುರ, ಸೇಡಂ, ಸುರಪುರ ಹಾಗೂ ಯಾದಗಿರಿ ತಾಲೂಕುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಸೇಂದಿ ಇಳಿಸುವುದು ಇವರ ಸಾಂಪ್ರದಾಯಿಕ

ಉದ್ಯೋಗವಾಗಿದ್ದು ಈಚೆಗೆ ಹಲವರು ಕೂಲಿ, ಕೃಷಿ ಮತ್ತಿತರ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಇವರು ಕನ್ನಡ ಹಾಗೂ ತೆಲುಗು ಭಾಷೆಗಳನ್ನಾಡುವರು. ಇವರಲ್ಲಿ ಪುರೋಹಿತ ವರ್ಗವಿಲ್ಲ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಅಥವಾ ಜಂಗಮ ಪುರೋಹಿತರು ನೆರವೇರಿಸಿ ಕೊಡುತ್ತಾರೆ. ಇವರಲ್ಲಿ ಸಾಮಾನ್ಯವಾಗಿ ವಿವಾಹವು ವರನ ಮನೆಯಲ್ಲಾಗುತ್ತದೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ರೂಡಿಯಲ್ಲಿದೆ. ಯುಗಾದಿ, ಕಾರುಹುಣ್ಣಿಮೆ, ನಾಗಪಂಚಮಿ, ದಸರಾ, ದೀಪಾವಳಿ,ಸಂಕ್ರಾಂತಿ, ಎಳ್ಳಮಾವಾಸ್ಯೆ, ಹಾಗೂ ಶಿವರಾತ್ರಿ ಇವರು ಆಚರಿಸುವ ಕೆಲವು ಪ್ರಮುಖ ಹಬ್ಬಗಳಾಗಿವೆ. ಸಾಮಾನ್ಯವಾಗಿ ಇವರಲ್ಲಿ ಶವವನ್ನು ಹೂಳುತ್ತಾರೆ. ಮಾಂಸಾಹಾರಿಗಳಾದ ಇವರು ವೆಂಕಟರಮಣ ಮೈಲಾರ ಮೊದಲಾದ ದೇವ ದೇವತೆಗಳನ್ನು ಪೂಜಿಸುತ್ತಾರೆ.

**ಉಪ್ಪಾರ**

ಮೊದಲಿಗೆ ಇವರ ಸಾಂಪ್ರದಾಯಿಕ ಉದ್ಯೋಗ ಉಪ್ಪು ತಯಾರಿಸುವುದಾಗಿತ್ತು. ಕಟ್ಟಡದ ಕೆಲಸ ಮಾಡುವುದು, ಕೂಲಿ ಮಾಡುವುದು, ಒಕ್ಕಲುತನ ಮೊದಲಾದುವು ಇವರ ಈಚಿನ ಉದ್ಯೋಗಗಳಾಗಿವೆ. ಇವರು ಸುರಪುರ ಹಾಗೂ ಶಹಪುರ ತಾಲೂಕುಗಳಲ್ಲಿ ಹೆಚ್ಚಾಗಿರುವರೆಂದು ಹೇಳುತ್ತಾರೆ. ಇವರು ಮಾತನಾಡುವ ಭಾಷೆ ಕನ್ನಡ. ಇವರಲ್ಲಿ ಅನೇಕ ಬೆಡಗುಗಳಿದ್ದು ಒಂದೇ ಬೆಡುಗುವಿನಲ್ಲಿ ವಿವಾಹ ಸಂಬಂಧ ಬೆಳೆಸುವ ಸಂಪ್ರದಾಯವಿಲ್ಲ. ಇವರಲ್ಲಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಅನುಮತಿ ಇದೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರಾಗಲೀ ಅಥವಾ ಲಿಂಗಾಯುತ ಜಂಗಮರಾಗಲೀ ನಡೆಸಿಕೊಡುತ್ತಾರೆ. ಮಾಂಸಾಹಾರಿಗಳಾದ ಇವರಲ್ಲಿ ಶವವನ್ನು ಹೂಳುವ ಪದ್ಧತಿಯಿದೆ. ಇವರು ತಿರುಪತಿ ವೆಂಟಕರಮಣ, ಯಾದಗಿರಿ ಸಮೀಪದ ಮೈಲಾರ ಮಲ್ಲಯ್ಯ, ತುಳಜಾಪುರದ ಅಂಬಾಭವಾನಿ ಮೊದಲಾದ ದೇವ ದೇವತೆಗಳಿಗೆ ನಡೆದುಕೊಳ್ಳುತ್ತಾರೆ.

**ಕಬ್ಬಲಿಗ**

ಜಿಲ್ಲೆಯಲ್ಲಿ ಈ ಜನಾಂಗದವರು ಶಹಾಪುರ, ಸುರಪುರ, ಯಾದಗಿರಿ, ಜೇವರ್ಗಿ ಹಾಗೂ ಚಿತ್ತಾಪುರ ತಾಲೂಕುಗಳಲ್ಲಿ ಹೆಚ್ಚಾಗಿ ಇರುವರು. ಸಾಂಪ್ರದಾಯಿಕವಾಗಿ ಮೀನು ಹಿಡಿಯುವುದು ಹಾಗೂ ದೋಣಿ ನಡೆಸುವುದು ಇವರ ಉದ್ಯೋಗವಾಗಿದ್ದರೂ, ಈ ಉದ್ಯೋಗಗಳಿಗೆ ಈ ಜಿಲ್ಲೆಯಲ್ಲಿ ವಿಶೇಷ ಅವಕಾಶಗಳು ಇಲ್ಲದೇ ಇರುವುದರಿಂದ ಕೂಲಿ ಮಾಡುವುದು, ಒಕ್ಕಲುತನ ಮುಂತಾದ ಉದ್ಯೋಗಗಳಲ್ಲಿ ಇವರು ತೊಡಗಿರುತ್ತಾರೆ. ಇವರು ಸಾಮಾನ್ಯವಾಗಿ ಕನ್ನಡ ಮಾತನಾಡುತ್ತಾರೆ ಮತ್ತೆ ಕೆಲವರು ತೆಲಗು, ಹಾಗೂ ಮರಾಠಿ ಮಾತನಾಡುವುದುಂಟು.ಇವರಲ್ಲಿ ಅನೇಕ ಬೆಡಗುಗಳಿದ್ದು ಒಂದೇ ಬೆಡಗುವಿನಲ್ಲಿ ವಿವಾಹ ಸಂಬಂಧ ಮಾಡುವ ಸಂಪ್ರದಾಯವಿಲ್ಲ. ಇವರಲ್ಲಿ ಪುರೋಹಿತ ವರ್ಗವಿಲ್ಲ. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತರಾಗಲೀ ಅಥವಾ ಲಿಂಗಾಯುತ ಜಂಗಮರಾಗಲೀ ನೆರವೇರಿಸಿಕೊಡುತ್ತಾರೆ. ವಿಧವಾ ವಿವಾಹಕ್ಕೆ ಹಾಗೂ ವಿವಾಹ ವಿಚ್ಛೇದನಕ್ಕೆ ಇವರಲ್ಲಿ ಅನುಮತಿಯಿದೆ. ಹುಟ್ಟು ಸಾವುಗಳ ಸಂದರ್ಭದಲ್ಲಿ ಇವರು ಮೈಲಿಗೆಯನ್ನು ಆಚರಿಸುವುದುಂಟು. ಇವರಲ್ಲಿ ಜಾತಿ ಪಂಚಾಯತಿಯಿದೆ. ಮಾಂಸಾಹಾರಿಗಳಾದ ಇವರಲ್ಲಿ ಶವವನ್ನು ಹೂಳುವ ಪದ್ಧತಿಯಿದೆ. ಯುಗಾದಿ ಕಾರು ಹುಣ್ಣಿಮೆ, ನಾಗರ ಪಂಚಮಿ, ದೀಪಾವಳಿ, ಸಂಕ್ರಾಂತಿ, ಎಳ್ಳಮಾವಾಸ್ಯೆ ಹಾಗೂ ಶಿವರಾತ್ರಿ ಇವರು ಆಚರಿಸುವ ಕೆಲವು ಪ್ರಮುಖ ಹಬ್ಬಗಳಾಗಿವೆ. ಮೈಲಾರ, ವೆಂಕಟರಮಣ, ದುರ್ಗಮ್ಮ ಎಲ್ಲಮ್ಮ ಮೊದಲಾದ ದೇವ ದೇವತೆಗಳನ್ನು ಪೂಜಿಸುತ್ತಾರೆ ಹಾಗೂ ಶ್ರೀಶೈಲ, ತಿರುಪತಿ, ಮಂತ್ರಾಲಯ, ತುಳಜಾಪುರ ಮೊದಲಾದ ಯಾತ್ರಾಸ್ಥಳಗಳಿಗೆ ಹೋಗುತ್ತಾರೆ.

**ಕಾಟಿಕ**

ಇವರನ್ನು ಕಲಾಲ್ ಎಂದೂ ಕರೆಯುತ್ತಾರೆ. ಶಹಾಪುರ, ಸುರಪುರ, ಜೇವರ್ಗಿ ಹಾಗೂ ಯಾದಗಿರಿ ತಾಲೂಕುಗಳಲ್ಲಿ ಇವರು ಹೆಚ್ಚಾಗಿ ಕಂಡುಬರುತ್ತಾರೆ. ಮಾಂಸ ಮಾರುವುದು ಇವರ ಸಾಂಪ್ರದಾಯಿಕ ಉದ್ಯೋಗ. ಶರಾಬನ್ನು ತಯಾರಿಸಿ ಮಾರಾಟ ಮಾಡುವುದರಲ್ಲೂ ಇವರಲ್ಲಿ ಕೆಲವರು ತೊಡಗಿರುತ್ತಾರೆ. ಅವರನ್ನು ಶೇರೆಗಾರರೆಂತಲೂ ಕರೆಯುತ್ತಾರೆ.

ಇವರು ಸೂರ್ಯನು ತಮ್ಮ ಮೂಲ ಪುರುಷನೆಂದು ಹೇಳಿಕೊಂಡು ಸೂರ್ಯನನ್ನು ಆರಾಧಿಸುತ್ತಾರೆ. ಸಾಂಪ್ರದಾಯಿಕವಾಗಿ ಇವರಲ್ಲಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ರೂಢಿಯಲ್ಲಿಲ್ಲ. ಇವರು ಮಾಂಸಾಹಾರಿಗಳು. ದಸರಾ, ದೀಪಾವಳಿ ಹಾಗೂ ಹೋಳಿ ಇವರು ಆಚರಿಸುವ ಕೆಲವು ಪ್ರಮುಖ ಹಬ್ಬಗಳಾಗಿವೆ. ಹುಟ್ಟು ಸಾವುಗಳ ಸಮಯದಲ್ಲಿ ಇವರು ಸೂತಕವನ್ನು ಆಚರಿಸುತ್ತಾರೆ.

**ಕುರುಬ**

ಈ ಜನಾಂಗದವರು ಶಹಾಪುರ, ಸುರಪುರ, ಜೇವರ್ಗಿ ಮತ್ತು ಅಫಜಲ್‌ಪುರ ತಾಲೂಕುಗಳಲ್ಲಿ ಹೆಚ್ಚಾಗಿರುವರೆಂದು ತಿಳಿದು ಬರುವುದು. ಕುರಿ ಸಾಕಾಣಿಕೆ ಹಾಗೂ ಕಂಬಳಿ ನೇಯುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಬೇಸಾಯಗಾರರಾಗಿಯೂ, ಕೃಷಿ ಕಾರ್ಮಿಕರಾಗಿಯೂ ಮತ್ತಿತರ ವೃತ್ತಿಗಳಲ್ಲಿಯೂ ಹಲವರು ತೊಡಗಿರುತ್ತಾರೆ. ಇವರಲ್ಲಿ ಹತ್ತಿಕಂಕಣ ಮತ್ತು ಉಣ್ಣೆ ಕಂಕಣ ಎಂಬ ಎರಡು ಪ್ರಮುಖ ಪಂಗಡಗಳಿವೆ. ಅಲ್ಲದೇ ಬನ್ನೆಲೆ, ಮಾಮೆಲೆ, ಬ್ಯಾಲದವರು ಮೊದಲಾದ ಬೆಡಗುಗಳಿದ್ದು ಒಂದೇ ಬೆಡಗುವಿನಲ್ಲಿ ವಿವಾಹವಾಗುವ ಸಂಪ್ರದಾಯವಿಲ್ಲ. ಇವರು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಇವರಿಗೆ ತಮ್ಮವರೇ ಆದ ಧಾರ್ಮಿಕ ಗುರುಗಳಿದ್ದು. ವಿವಾಹ ಮೊದಲಾದ ಧಾರ್ಮಿಕ ಕಾರ್ಯಗಳನ್ನು ಇವರೇ ನೆರವೇರಿಸಿಕೊಡುತ್ತಾರೆ. ಧರ್ಮದ ಗುರುಗಳು ಇಲ್ಲದ ಕಡೆಗಳಲ್ಲಿ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ಅಥವಾ ಜಂಗಮರು ನಡೆಸಿಕೊಡುತ್ತಾರೆ. ವಿಧವಾ ವಿವಾಹಕ್ಕೆ ಹಾಗೂ ವಿವಾಹ ವಿಚ್ಛೇದನಕ್ಕೆ ಅನುಮತಿ ಉಂಟು. ಗ್ರಾಮೀಣ ಪ್ರದೇಶದ ಕುರುಬರ ಸಾಂಪ್ರದಾಯಿಕ ಉಡುಗೆ ಎಂದರೆ ಗಂಡಸರು ಹೊರಗೆ ಹೋಗುವಾಗ ಸಾಮಾನ್ಯವಾಗಿ ಹೆಗಲ ಮೇಲೆ ಕಂಬಳಿ ಹಾಕಿಕೊಂಡು ತಲೆಗೆ ರುಮಾಲು ಸುತ್ತಿರುತ್ತಾರೆ. ಅವರು ದೀಪಾವಳಿಯನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಈ ಸಮಯದಲ್ಲಿ ಅವರು ಹಿರಿಯರ ಹಬ್ಬವನ್ನು ಆಚರಿಸುವುದೇ ಅಲ್ಲದೆ ತಮ್ಮ ಡೊಳ್ಳು, ಕೋಲು ಮುಂತಾದುವುಗಳನ್ನು ಪೂಜಿಸುತ್ತಾರೆ. ಇವರು ಮಾಂಸಾಹಾರಿಗಳಾಗಿರುತ್ತಾರೆ. ಆದರೆ ಇವರ ಧಾರ್ಮಿಕ ಗುರುಗಳು ಸಸ್ಯಾಹಾರಿಗಳಾಗಿರುತ್ತಾರೆ. ಡೊಳ್ಳಿನ ಕುಣಿತ ಇವರ ಪ್ರಿಯ ಜಾನಪದ ಕಲೆ. ಬೀರೇಶ್ವರ, ಮೈಲಾರ, ಮಾಳಿಂಗರಾಯ, ದ್ಯಾಮವ್ವ, ಎಲ್ಲಮ್ಮ ಹುಲಿಗಮ್ಮ ಮೊದಲಾದ ದೇವ ದೇವತೆಗಳಿಗೆ ಇವರು ನಡೆದುಕೊಳ್ಳುತ್ತಾರೆ. ಧಾರವಾಡ ಜಿಲ್ಲೆಯ ಕಾಗಿನೆಲೆಯಲ್ಲಿ ಈ ಸಮಾಜದವರು ಕನಕಗುರುಪೀಠವನ್ನು ಸ್ಥಾಪಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಮೃತರನ್ನು ಇವರು ಹೂಳುತ್ತಾರೆ. ಆದರೆ ಕೆಲವರು ಅಗ್ನಿ ಸಂಸ್ಕಾರ ಮಾಡುತ್ತಾರೆ.

**ಗಾಣಿಗ**

ಎಣ್ಣೆ ತೆಗೆಯುವುದು ಹಾಗೂ ಎಣ್ಣೆ ಮಾರಾಟ ಮಾಡುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ಇತ್ತೀಚೆಗೆ ಹಲವರು ಒಕ್ಕಲುತನ ಹಾಗೂ ಇತರ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಇವರಲ್ಲಿ ಕರಿಗಾಣಿಗ, ಬಿಳಿ ಗಾಣಿಗ, ಸಜ್ಜನಗಾಣಿಗ ಮೊದಲಾದ ಉಪ ಪಂಗಡಗಳಿವೆ. ಇವರ ಮನೆಯ ಮಾತು ಕನ್ನಡ, ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಜಂಗಮರು ನೆರವೇರಿಸಿಕೊಡುತ್ತಾರೆ. ಯುಗಾದಿ, ದಸರ, ದೀಪಾವಳಿ, ಎಳ್ಳಮಾವಾಸ್ಯೆ ಹಾಗೂ ಶಿವರಾತ್ರಿ ಇವರು ಆಚರಿಸುವ ಕೆಲವು ಪ್ರಮುಖ ಹಬ್ಬಗಳಾಗಿವೆ. ಇವರಲ್ಲಿ ವೀರಶೈವ ಮತಾವಲಂಬಿಗಳೂ ಇದ್ದಾರೆ. ಸಿದ್ಧರಾಮೇಶ್ವರ, ಶರಣ ಬಸವೇಶ್ವರ, ಭಾಗ್ಯವಂತಿ, ಮಲ್ಲಿಕಾರ್ಜುನ ಮುಂತಾದ ದೇವ ದೇವತೆಗಳಿಗೆ ಇವರು ನಡೆದುಕೊಳ್ಳುತ್ತಾರೆ. ಇವರಲ್ಲಿ ಸಾಂಪ್ರದಾಯಿಕವಾಗಿ ಮೃತರನ್ನು ಹೂಳುವ ಪದ್ಧತಿಯಿದೆ.

**ಗೊಲ್ಲ**

ಇವರನ್ನು ಯಾದವರೂ ಎಂದು ಕರೆಯುತ್ತಾರೆ. ದನಕುರಿಗಳನ್ನು ಸಾಕುವುದು, ಹಾಲು ಮತ್ತು ಹಾಲಿನ ಪದಾರ್ಥಗಳನ್ನು ಮಾರಾಟ ಮಾಡುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಕೃಷಿ, ಕೂಲಿ ಕೆಲಸ ಮಾಡುವುದು ಮೊದಲಾದ ಉದ್ಯೋಗಗಳಲ್ಲೂ ಇವರು ತೊಡಗಿರುತ್ತಾರೆ. ವಿವಾಹ ಮುಂತಾದ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪರೋಹಿತರು ನೆರವೇರಿಸಿಕೊಡುತ್ತಾರೆ. ಇವರಲ್ಲಿ ವಿವಿಧ ಬೆಡಗುಗಳಿವೆ. ಇವರಲ್ಲಿ ವಿವಾಹವು ರಾತ್ರಿಯ ವೇಳೆಯಲ್ಲಿ ಹಾಗೂ ಸಾಮಾನ್ಯವಾಗಿ ಗಂಡಿನ ಮನೆಯಲ್ಲಿ ನಡೆಯುತ್ತದೆ. ವಿಧವೆಯರು ವಿವಾಹವಾಗಲು ಇವರಲ್ಲಿ ಅನುಮತಿಯಿದೆ.

ಇವರಲ್ಲಿ ಜಾತಿ ಪಂಚಾಯಿತಿ ಇದ್ದು ಮಾಂಸಾಹಾರವನ್ನು ಸೇವಿಸುವುದುಂಟು. ಸಾಮಾನ್ಯವಾಗಿ ಶವವನ್ನು ಹೂಳುವ ಪದ್ಧತಿಯಿದೆ. ಕೃಷ್ಣ, ವೆಂಕಟರಮಣ ಮೊದಲಾದ ದೇವರುಗಳನ್ನು ಇವರು ಪೂಜಿಸುತ್ತಾರೆ. ಇವರು ಸಾಮಾನ್ಯವಾಗಿ ಶಹಾಪುರ ತಾಲೂಕಿನ ಸಗರದ ಎಲ್ಲಮ್ಮನ ಜಾತ್ರೆಗೆ ಹೋಗುತ್ತಾರೆ.

**ಚಲವಾದಿ**

ಚಲವಾದಿಗಳು ಸಾಂಪ್ರದಾಯಿಕವಾಗಿ ಕೃಷಿ ಕೂಲಿಗಾರರಾಗಿದ್ದಾರೆ. ಈಚೆಗೆ ಹಲವರು ಕೃಷಿಕರಾಗಿಯೂ ಮತ್ತಿತರ ಉದ್ಯೋಗಗಳಲ್ಲೂ ತೊಡಗಿರುತ್ತಾರೆ. ಇವರು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಇವರಲ್ಲಿ ಅವಿಭಕ್ತ ಕುಟುಂಬಗಳೂ ಇವೆ. ಸಾಮಾನ್ಯವಾಗಿ, ಇವರಲ್ಲಿ ವಿವಾಹವು ಗಂಡಿನ ಮನೆಯಲ್ಲಾಗುವುದು. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಇವರಲ್ಲಿ ಅನುಮತಿಯಿದೆ. ಇವರು ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಇವರು ಮಾಂಸಾಹಾರಿಗಳು. ಲಕ್ಷ್ಮಿ, ಎಲ್ಲಮ್ಮ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. ಇವರಲ್ಲಿ ಮೃತರನ್ನು ಹೂಳುವ ಪದ್ಧತಿಯಿದೆ.

**ಢೋರ**

ಢೋರ್ ಅಥವ ಡೋಹರರು, ಕಕ್ಕಯ್ಯ ಅಥವ ಕಂಕಯ್ಯ ಎಂದೂ ಪರಿಚಿತರಾಗಿದ್ದಾರೆ. ಇವರು ಮಹಾರಾಷ್ಟ್ರದಿಂದ ವಲಸೆ ಬಂದವರಾಗಿರಬಹುದು. ಚರ್ಮ ಹದ ಮಾಡುವುದು ಹಾಗೂ ಚರ್ಮದ ವಸ್ತುಗಳನ್ನು ತಯಾರಿಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ಇತ್ತೀಚೆಗೆ ಇವರು ಕೃಷಿ, ಕೂಲಿ ಮಾಡುವುದು ಮೊದಲಾದ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಇವರಲ್ಲಿ ಸದಾಪುಲೆ, ಹೊಟಕರ್, ನಾರಾಯಣಕರ್ ಮೊದಲಾದ ಬೆಡಗುಗಳಿದ್ದು ಪರೋಹಿತ ವರ್ಗವಿಲ್ಲ. ಇವರ ಧಾರ್ಮಿಕ ವಿಧಿ ವಿಧಾನಗಳನ್ನು ಸಾಮಾನ್ಯವಾಗಿ ಜಂಗಮರು ನೆರವೇರಿಸಿ ಕೊಡುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನವು ಇವರಲ್ಲಿ ಪ್ರಚಲಿತವಿದೆ. ಮಾಂಸಾಹಾರ ಸೇವನೆ ಇವರಲ್ಲಿ ರೂಢಿಯಲ್ಲಿದೆ. ಇವರು ತುಳಜಾ ಭವಾನಿ, ವೆಂಕಟರಮಣ, ಹನುಮಂತ, ಮೈಲಾರ ದೇವರು, ಮರಗಮ್ಮ , ಲಕ್ಕಮ್ಮ ಮುಂತಾದ ದೇವ ದೇವತೆಗಳನ್ನು ಪೂಜಿಸುತ್ತಾರೆ. ಹಾಗೂ ತುಳಜಾಪುರ, ಸವದತ್ತಿ, ಎಲ್ಲಮ್ಮ ಮೊದಲಾದ ಯಾತ್ರಾಸ್ಥಳಗಳಿಗೆ ಹೋಗುತ್ತಾರೆ. ಶಿವಶರಣ ಡೋಹರ ಕಕ್ಕಯ್ಯ ಈ ಪಂಗಡಕ್ಕೆ ಸೇರಿದವನು.

**ದರ್ಜಿ**

ಬಟ್ಟೆ ಹೊಲೆಯುವುದು ಇವರ ಸಾಂಪ್ರದಾಯಿಕ ಕಸಬು. ಈಚೆಗೆ ಕೆಲವರು ಬಟ್ಟೆ ವ್ಯಾಪಾರ ಮಾಡುವುದೂ ಉಂಟು. ಇವರು ತಮ್ಮನ್ನು ಸಿಂಪಿ, ನಾಮದೇವ ಸಿಂಪಿ, ಭಾವಸಾರ ಕ್ಷತ್ರಿಯ ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುತ್ತಾರೆ. ಇವರಲ್ಲಿ ಕನ್ನಡ ಹಾಗೂ ಮರಾಠಿ ಭಾಷಿಕರು ಇದ್ದಾರೆ. ಇವರು ಯಜ್ಞೋಪವೀತವನ್ನು ಧರಿಸುತ್ತಾರೆ ಹಾಗೂ ತಮ್ಮ ಧಾರ್ಮಿಕ ಕಾರ್ಯಗಳಿಗೆ ಬ್ರಾಹ್ಮಣ ಪುರೋಹಿತರನ್ನು ಕರೆಯುತ್ತಾರೆ. ನಾಮ ದೇವ ಸಿಂಪಿಗಳು ಮರಾಠಿ ಸಂತ ನಾಮ ದೇವನ ಮೂಲದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಚಂದ್ರಿಕಾ ಇವರ ವಿಶೇಷ ದೇವತೆ. ಆ ದೇವಿಗೆ ಗಣೇಶ ಚತುರ್ಥಿಯ ದಿನ ಪೂಜೆಸಲ್ಲುತ್ತದೆ. ಸೌಂದತ್ತಿ ಎಲ್ಲಮ್ಮ , ತುಳಜಾಪುರದ ಅಂಬಾಭವಾನಿ, ಪಂಢರಾಪುರದ ಪಾಂಡುರಂಗ ಮೊದಲಾದ ದೇವ ದೇವತೆಗಳಿಗೆ ಇವರು ನಡೆದುಕೊಳ್ಳುತ್ತಾರೆ. ಇವರಲ್ಲಿ ಶವವನ್ನು ಸುಡುವ ಪದ್ಧತಿಯಿದೆ.

ಜಿಲ್ಲೆಯಲ್ಲಿ ವೀರಶೈವ ಮತಾಚರಣೆಗಳನ್ನು ಅನುಸರಿಸುವ ಸಿಂಪಿ ಕಾಯಕದವರೂ ಇರುವರು. ಧಾರ್ಮಿಕ ಕಾರ್ಯಗಳನ್ನು ಇವರಲ್ಲಿ ಜಂಗಮರು ನೆರವೇರಿಸುತ್ತಾರೆ. ಇವರನ್ನು ಶಿವಸಿಂಪಿಗಳೂ ಎಂದು ಕರೆಯುವರು.

**ದಾಸರು**

ದಾಸರು ಓಣಿ ಓಣಿಗಳಲ್ಲಿ ಸಂಚರಿಸಿ ದಾಸರ ಪದಗಳನ್ನು ಹೇಳಿಕೊಂಡು ಭಿಕ್ಷೆಯನ್ನು ಪಡೆದು ಜೀವನವನ್ನು ನಡೆಸುವ ಒಂದು ವರ್ಗದವರಾಗಿರುತ್ತಾರೆ. ಯಾವುದೇ ವ್ಯಕ್ತಿಯು ವಂಶಪಾರಂಪರ್ಯವಾಗಿ ದಾಸನಾಗಿರಬಹುದು ಅಥವಾ ತನ್ನನ್ನು ತಾನೇ ದೇವರಿಗೆ ಅರ್ಪಿಸಿಕೊಂಡು ದಾಸನಾಗಬಹುದು. ಇವರು ಶೈವರಿರಬಹುದು ಅಥವಾ ವೈಷ್ಣವರಿರಬಹುದು. ಇವರು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ವಿವಾಹ ವಿಚ್ಛೇದನಕ್ಕೆ ಹಾಗೂ ವಿಧವಾ ವಿವಾಹಕ್ಕೆ ಇವರಲ್ಲಿ ಅನುಮತಿಯಿದೆ.

**ದೇವಾಂಗ**

ನೇಕಾರಿಕೆಯು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ಹಲವರು ಕೃಷಿ, ವ್ಯಾಪಾರ ಮತ್ತಿತರ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಇವರು ಹೆಚ್ಚಾಗಿ ಸುರಪುರ ತಾಲೂಕಿನಲ್ಲಿ ಕಂಡು ಬರುತ್ತಾರೆ. ಇವರಲ್ಲಿ ಅನೇಕರು ವೀರಶೈವ ಮತಾವಲಂಬಿಗಳಾಗಿರುತ್ತಾರೆ. ವಚನಕಾರನಾದ ಜೇಡರ ದಾಸಿಮಯ್ಯನು ಈ ಜನಾಂಗದವನಾಗಿದ್ದು ಈತನು ಸುರಪುರ ತಾಲೂಕಿನ ಮುದೇನೂರು ಗ್ರಾಮಕ್ಕೆ ಸೇರಿದವನು. ಇವರು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ವೀರಭದ್ರ, ಚೌಡೇಶ್ವರಿ, ಬನಶಂಕರಿ ಮುಂತಾದ ದೇವರುಗಳನ್ನು ಇವರು ಪೂಜಿಸುತ್ತಾರೆ. ಬಿಜಾಪುರ ಜಿಲ್ಲೆಯ ಬಾದಾಮಿ ಸಮೀಪದಲ್ಲಿರುವ ಬನಶಂಕರಿ, ಶಿರಸಂಗಿಯ ಕಾಳಮ್ಮ ಅನೇಕರ ಮನೆ ದೇವರಾಗಿರುತ್ತದೆ. ಯುಗಾದಿ, ದಸರಾ,ದೀಪಾವಳಿ, ಬನದಹುಣ್ಣಿಮೆ, ಹಾಗೂ ಶಿವರಾತ್ರಿ ಇವರು ಆಚರಿಸುವ ಕೆಲವು ಪ್ರಮುಖ ಹಬ್ಬಗಳಾಗಿವೆ.

**ನಾಯಿಂದ**

ಇವರನ್ನು ಹಡಪಿಗ, ಹಡಪದವ, ಕ್ಷೌರಿಕ, ಮೊದಲಾದ ಹೆಸರುಗಳಿಂದಲೂ ಕರೆಯುವುದುಂಟು. ಕ್ಷೌರಿಕ ವೃತ್ತಿಯು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ಈಚೆಗೆ ಹಲವರು ಕೃಷಿ ಮತ್ತಿತರ ಉದ್ಯೋಗಗಳಲ್ಲೂ ತೊಡಗಿರುತ್ತಾರೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಇವರು ಕನ್ನಡ ಹಾಗೂ ತೆಲಗು ಭಾಷೆಗಳನ್ನು ಮಾತನಾಡುತ್ತಾರೆ. ಇವರಲ್ಲಿ ಪುರೋಹಿತ ವರ್ಗವಿಲ್ಲ. ಸಾಮಾನ್ಯವಾಗಿ ಇವರ ಧಾರ್ಮಿಕ ಕಾರ್ಯಗಳನ್ನು ಪುರೋಹಿತರು ನೆರವೇರಿಸಿ ಕೊಡುತ್ತಾರೆ. ಇವರಲ್ಲಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಅನುಮತಿಯಿದೆ. ಮಾಂಸಾಹಾರಿಗಳಾದ ಇವರು ಸಾಮಾನ್ಯವಾಗಿ ಶವವನ್ನು ಹೂಳುತ್ತಾರೆ ಹಾಗೂ ವೆಂಕಟರಮಣ, ಆಂಜನೇಯ, ಮೈಲಾರ, ಎಲ್ಲಮ್ಮ ಮೊದಲಾದ ದೇವ ದೇವತೆಗಳನ್ನು ಪೂಜಿಸುತ್ತಾರೆ. ಇವರಲ್ಲಿ ವೀರಶೈವ ಮತಾವಲಂಬಿಗಳೂ ಇರುವರು. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಜಂಗಮರು ನೆರವೇರಿಸಿಕೊಡುತ್ತಾರೆ. ಇವರು ಹಡಪದ ಅಪ್ಪಣ್ಣ ಎಂಬ ವಚನಕಾರನನ್ನು ಗೌರವಿಸುತ್ತಾರೆ.

**ನೇಕಾರ**

ನೇಕಾರರನ್ನು ನೇಯ್ಗೆಯವರೆಂದೂ, ಮಗ್ಗದವರೆಂದೂ ಕರೆಯುತ್ತಾರೆ. ಇವರಲ್ಲಿ ಪದ್ಮಸಾಲಿ, ಸ್ವಕುಳಸಾಲಿ ಮೊದಲಾದ ಪಂಗಡಗಳಿವೆ. ಸಾಂಪ್ರದಾಯಿಕವಾಗಿ ಇವರು ನೇಕಾರರಾದರೂ ಹಲವರು ವ್ಯಾಪಾರ, ಕೃಷಿ ಮತ್ತಿತರ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಇವರು ಹೆಚ್ಚಾಗಿ ಶಹಾಪುರ, ಸುರಪುರ ಮತ್ತು ಗುಲಬರ್ಗಾ ತಾಲೂಕುಗಳಲ್ಲಿ ಕಂಡು ಬರುತ್ತಾರೆ. ಇವರಲ್ಲಿ ಶೈವ ಮತ್ತು ವೈಷ್ಣವ ಸಂಪ್ರದಾಯಗಳಿದ್ದು, ಅವಿಭಕ್ತ ಕುಟುಂಬಗಳು ಹೆಚ್ಚಾಗಿ ಕಂಡು ಬರುತ್ತವೆ. ಇವರಲ್ಲಿ ಪುರೋಹಿತವರ್ಗವಿಲ್ಲ. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತರು ನೆರವೇರಿಸಿಕೊಡುತ್ತಾರೆ. ಸ್ವಕುಳಸಾಲಿಗಳು ಮರಾಠಿ ಮಾತನಾಡುತ್ತಾರೆ, ಉಳಿದವರು ಸಾಮಾನ್ಯವಾಗಿ ಕನ್ನಡ ಮಾತನಾಡುತ್ತಾರೆ. ಯಾದಗಿರಿ, ಸಮೀಪದ ಮೈಲಾಪುರ, ತುಳಜಾಪುರ, ಶ್ರೀ ಶೈಲ, ತಿರುಪತಿ, ಮೊದಲಾದವು ಇವರ ಪ್ರಮುಖ ಯಾತ್ರಾಸ್ಥಳಗಳಾಗಿವೆ. ಇವರಲ್ಲಿ ಶವವನ್ನು ಸಾಮಾನ್ಯವಾಗಿ ಹೂಳುತ್ತಾರೆ.

**ಪಟ್ವೇಗಾರ**

ಇವರು ತಮ್ಮನ್ನು ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯರೆಂದೂ (ಎಸ್. ಎಸ್. ಕೆ.) ಕರೆದುಕೊಳ್ಳುತ್ತಾರೆ. ಇವರಲ್ಲಿ ವಿಭೂತಿ, ಭೋಪಳೆ, ದೇವರಮನಿ, ಜೈಕಾರ ಮೊದಲಾದ ಬೆಡಗುಗಳಿವೆ. ರೇಷ್ಮೆ ನೇಕಾರಿಕೆ ಹಾಗೂ ರೇಷ್ಮೆ ನೂಲಿಗೆ ಬಣ್ಣ ಹಾಕುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಇತ್ತೀಚಿನ ದಿನಗಳಲ್ಲಿ ವ್ಯಾಪಾರ ಮತ್ತಿತರ ಉದ್ಯೋಗಗಳಲ್ಲೂ ತೊಡಗಿರುತ್ತಾರೆ. ಇವರಲ್ಲಿ ಜನಿವಾರ ಧರಿಸುವ ಪದ್ಧತಿಯಿದೆ ಹಾಗೂ ಮಾಂಸಾಹಾರ ಸೇವಿಸುವುದು ರೂಢಿಯಲ್ಲಿದೆ. ಇವರಲ್ಲಿ ಜಾತಿ ಪಂಚಾಯಿತಿ ಉಂಟು. ಈ ಜನಾಂಗದವರು ಲಿಪಿಇಲ್ಲದ ಮರಾಠಿ-ಗುಜರಾತಿ ಮಿಶ್ರಿತ ಅಹಿರಾಣಿ ಭಾಷೆಯನ್ನು ಮಾತನಾಡುವರು.

**ಬೇಡ**

ಬೇಡರನ್ನು ವಾಲ್ಮೀಕಿ, ನಾಯಕ ಮೊದಲಾದ ಹೆಸರುಗಳಿಂದಲೂ ಕರೆಯುತ್ತಾರೆ. ಇವರು ಸುರಪುರ, ಶಹಾಪುರ,ಯಾದಗಿರಿ ಹಾಗೂ ಜೇವರ್ಗಿ ತಾಲೂಕುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದ ಹಲವಾರು ರಾಜವಂಶಗಳ ಅಧೀನದಲ್ಲಿ ಬೇಟೆಯಾಡಲು ಹಾಗೂ ಸೈನಿಕ ಸೇವೆಯಲ್ಲಿ ಹೆಚ್ಚಾಗಿ ಬೇಡರೇ ಇರುತ್ತಿದ್ದರೆಂಬ ಅಭಿಪ್ರಾಯವಿದೆ. ನಿಜಾಮರ ಕಾಲದಲ್ಲಿ ಜಹಗೀರ್ ಪದ್ಧತಿಯು ಜಾರಿಯಲ್ಲಿದ್ದ ಕಾರಣ ಇವರಿಗೆ ಗ್ರಾಮ ಕಾವಲುಗಾರರಾಗಿಯೂ ಹಾಗೂ ಓಲೆಕಾರರಾಗಿಯೂ ಕೆಲಸ ನಿರ್ವಹಿಸಲು ಅವಕಾಶ ದೊರೆಯಿತೆಂದು ಹೇಳಲಾಗಿದೆ. ಈಚೆಗೆ ಇವರು ಕೃಷಿ ಕೂಲಿಗಾರರಾಗಿಯೂ, ಬೇಸಾಯಗಾರರಾಗಿಯೂ, ಮತ್ತಿತರ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರು. ಇವರಲ್ಲಿ ಜಾತಿ ಪಂಚಾಯತಿ ಇದ್ದು ಗೋಸಲವರ್, ಗುಜ್ಜಲೂರ್, ಮಿನಗಲೂರ್, ಜಂಪಲೂರ್ ಮುಂತಾದ ಬೆಡಗುಗಳಿವೆ. ಇವರಲ್ಲಿ ಪುರೋಹಿತವರ್ಗವಿಲ್ಲ. ವಿವಾಹ ಮುಂತಾದ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತರು ನೆರವೇರಿಸಿಕೊಡುತ್ತಾರೆ. ಗಂಡಿನ ಮನೆಯಲ್ಲಿ ವಿವಾಹ ನೆರವೇರಿಸುವುದು ಇವರ ಸಂಪ್ರದಾಯವಾಗಿದೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇಧನಕ್ಕೆ ಇವರಲ್ಲಿ ಅನುಮತಿಯಿದೆ. ಇವರು ಮಾಂಸಾಹಾರವನ್ನು ಸೇವಿಸುತ್ತಾರೆ. ಇವರು ಮಾತನಾಡುವ ಭಾಷೆ ಕನ್ನಡ. ಕೆಲವರು ತೆಲಗು ಮಾತನಾಡುವುದೂ ಉಂಟು. ಯುಗಾದಿ, ನಾಗರಪಂಚಮಿ, ದಸರ, ಸಂಕ್ರಾಂತಿ, ಶಿವರಾತ್ರಿ ಇವರು ಆಚರಿಸುವ ಕೆಲವು ಪ್ರಮುಖ ಹಬ್ಬಗಳಾಗಿವೆ. ವೆಂಕಟರಮಣ, ಮಾರುತಿ, ದೇವಮ್ಮ, ಎಲ್ಲಮ್ಮ ಕಾಳಿಕಾದೇವಿ ಮುಂತಾದ ದೇವ ದೇವತೆಗಳನ್ನು ಇವರು ಪೂಜಿಸುತ್ತಾರೆ.

**ಬ್ರಾಹ್ಮಣ**

ಬ್ರಾಹ್ಮಣರು ತ್ರಿಮತಗಳಿಗೆ ಸೇರಿರುತ್ತಾರೆ. ಸ್ಮಾರ್ತರು, ಶಂಕರಾಚಾರ್ಯರ ಅನುಯಾಯಿಗಳು, ಮಾಧ್ವರು, ಮಧ್ವಾಚಾರ್ಯರ ಅನುಯಾಯಿಗಳು ಮತ್ತು ಶ್ರೀ ವೈಷ್ಣವರು ರಾಮಾನುಜಾಚಾರ್ಯರ ಅನುಯಾಯಿಗಳು. ಜಿಲ್ಲೆಯಲ್ಲಿ ಶ್ರೀ ವೈಷ್ಣವರು ಅತಿವಿರಳವಾಗಿದ್ದು ಸ್ವಲ್ಪಮಟ್ಟಿಗೆ ಅವರನ್ನು ಸುರಪುರ ತಾಲೂಕಿನಲ್ಲಿ ಕಾಣಬಹುದು. ಜಿಲ್ಲೆಯಲ್ಲಿ ಕಣ್ವ ಬ್ರಾಹ್ಮಣರು ಹೆಚ್ಚಾಗಿರುತ್ತಾರೆ. ಸುರಪುರ ತಾಲೂಕಿನ ಹುಣಸೀ ಹೊಳೆಯಲ್ಲಿ ಕಣ್ವರ ಮಠವಿದೆ. ಜಿಲ್ಲೆಯಲ್ಲಿ ಉತ್ತರಾಧಿ ಮಠದ ಪರಂಪರೆಯಲ್ಲಿ ಕಂಡು ಬರುವ ಅನೇಕ ಬೃಂದಾವನಗಳೂ ಹಾಗೂ ರಾಘವೇಂದ್ರ ಸ್ವಾಮಿಗಳ ಬೃಂದಾವನಗಳೂ ಇವೆ. ಅಫಜಲ್‌ಪುರ ತಾಲೂಕಿನ ದೇವಲ ಗಾಣಗಾಪುರದಲ್ಲಿ ನರಸಿಂಹ ಸರಸ್ವತಿ ಸ್ವಾಮಿಗಳವರ ನಿರ್ಗುಣ ಪಾದುಕೆಗಳಿದ್ದು ಇವರು ದತ್ತಾತ್ರೇಯನ ಮೂರನೇ ಅವತಾರವೆಂಬ ನಂಬಿಕೆಯಿದೆ. ಇದು ಈ ಭಾಗದ ಒಂದು ಪ್ರಮುಖ ಯಾತ್ರಾಸ್ಥಳವಾಗಿದ್ದು ದಕ್ಷಿಣ ಮಹಾರಾಷ್ಟ್ರದವರಿಗೆ ಪವಿತ್ರ ಕ್ಷೇತ್ರವಾಗಿದೆ. ಬ್ರಾಹ್ಮಣರಲ್ಲಿ ಭಾಗವತ್ ಸಂಪ್ರದಾಯದವರೂ ಜಿಲ್ಲೆಯಲ್ಲಿ ಕಂಡು ಬರುತ್ತಾರೆ. ಬ್ರಾಹ್ಮಣರಲ್ಲಿ ಪ್ರಮುಖವಾಗಿ ಕನ್ನಡ ಮಾತನಾಡುವವರೇ ಇದ್ದರೂ ಮರಾಠಿ ಮಾತನಾಡುವವರೂ ಇದ್ದಾರೆ.

ಬ್ರಾಹ್ಮಣರನ್ನು ಅನೇಕ ಗೋತ್ರ ಪ್ರವರಗಳಿಂದ ಗುರ್ತಿಸಲಾಗುತ್ತದೆ. ಕಾಶ್ಯಪ, ವಿಶ್ವಾಮಿತ್ರ, ಹರಿತಸ, ಭಾರದ್ವಾಜ ಮೊದಲಾದುವು ಗೋತ್ರಗಳ ಹೆಸರುಗಳು. ಇವರಲ್ಲಿ ೧೬ ಸಂಸ್ಕಾರಗಳಿದ್ದು ಅವುಗಳಲ್ಲಿ ಉಪನಯನವು ಅತಿಮುಖ್ಯವಾಗಿದ್ದು, ಆಗಿನಿಂದ ಜನಿವಾರ ಧರಿಸುತ್ತಾರೆ. ಬ್ರಾಹ್ಮಣರ ದಿನಚರಿಯಲ್ಲಿ ಅನೇಕ ಕಟ್ಟು ಪಾಡುಗಳಿವೆ. ಬೆಳಿಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ಸಂಧ್ಯಾವಂದನೆ ಮಾಡುವುದು ಮತ್ತು ಮಧ್ಯಾಹ್ನ ಊಟಕ್ಕೆ ಮುಂಚಿತವಾಗಿ ಮಾಧ್ಯಾಹ್ನಿಕ ಮಾಡುವುದು ಇದಕ್ಕೆ ಒಂದು ಉದಾಹರಣೆಯಾಗಿದೆ. ಸಾಂಪ್ರದಾಯಿಕವಾಗಿ ಬ್ರಾಹ್ಮಣರಲ್ಲಿ ವೈದಿಕರು ಮತ್ತು ಲೌಕಿಕರೆಂಬ ಎರಡು ರೀತಿಯ ವರ್ಗಗಳಿವೆ. ವೈದಿಕರೆಂದರೆ ಪುರೋಹಿತ್ಯ ಕೆಲಸ ಮಾಡುವವರು, ಲೌಕಿಕರೆಂದರೆ ವ್ಯಾಪಾರಿಗಳು, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ಗುತ್ತಿಗೆದಾರರು, ಮೊದಲಾದವರಾಗಿರುತ್ತಾರೆ. ಹಿಂದೆ ಬ್ರಾಹ್ಮಣರಲ್ಲಿ ಜಮೀನ್ದಾರರು ಬಹಳವಾಗಿದ್ದರು. ದೇಶಮುಖ್, ದೇಶಪಾಂಡೆ, ಪಟವಾರಿ, ಕುಲಕರ್ಣಿ, ದೇಸಾಯಿ, ಜಹಗೀರ್‌ದಾರ್ ಇವೇ ಮೊದಲಾದುವು ಇದಕ್ಕೆ ಉದಾಹರಣೆಗಳಾಗಿವೆ. ಇತ್ತೀಚೆಗೆ ಇವರು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಸಾಂಪ್ರದಾಯಿಕವಾಗಿ ಇವರಲ್ಲಿ ವಧುವಿನ ಪೋಷಕರು ವರನನ್ನು ಹುಡುಕುತ್ತಾರೆ. ಹಾಗೂ ವಿವಾಹವು ವಧುವಿನ ಮನೆಯಲ್ಲಿ ನಡೆಯುತ್ತದೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ಸಾಂಪ್ರದಾಯಿಕವಾಗಿ ರೂಢಿಯಲಿಲ್ಲ. ಇವರು ಶಾಖಾಹಾರಿಗಳು, ಹುಟ್ಟು-ಸಾವುಗಳ ಸಂದರ್ಭಗಳಲ್ಲಿ ೧೦ ದಿನಗಳ ಮೈಲಿಗೆಯನ್ನು ಆಚರಿಸುತ್ತಾರೆ. ಇವರಲ್ಲಿ

ಮೃತರಿಗೆ ಅಗ್ನಿ ಸಂಸ್ಕಾರ ಮಾಡುತ್ತಾರೆ. ಮಕ್ಕಳು, ಸಾಧು, ಸಂನ್ಯಾಸಿಗಳು ಸತ್ತಾಗ ಶವವನ್ನು ಹೂಳುತ್ತಾರೆ. ಸತ್ತ ೫, ೭ ಅಥವಾ ೯ನೇ ದಿನದಿಂದ ಶ್ರಾದ್ಧವನ್ನು ಆರಂಭಿಸಿ ೧೩ನೇಯ ದಿನ ಮುಗಿಸುತ್ತಾರೆ. ಒಂದು ವರ್ಷದವರೆಗೆ ಪ್ರತಿ ತಿಂಗಳೂ ಮಾಸಿಕ ಶ್ರಾದ್ಧವನ್ನು ಮಾಡಿ ಮುಂದೆ ವಾರ್ಷಿಕ ಶ್ರಾದ್ಧವನ್ನು ಮಾಡುತ್ತಾರೆ.

### ಭೋಯಿ

ಸಾಮಾನ್ಯವಾಗಿ ಪಲ್ಲಕ್ಕಿ ಹೊರುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ಈಚೆಗೆ ಹಲವರು ಕೃಷಿ ಕಾರ್ಮಿಕರು, ಒಕ್ಕಲುತನ, ಕೂಲಿ ಮಾಡುವುದು, ಇವೇ ಮುಂತಾದ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಇವರಲ್ಲಿ ಜಾತಿ ಪಂಚಾಯಿತಿಯಿದೆ. ಪಾಸ್ಮಲ್ಕರ್, ದುದ್ದಲೇರ್, ಪೂಟಾಣಗರ್, ತಾಂಡೂರ್ಕರ್ ಇವೇ ಮುಂತಾದ ಬೆಡಗುಗಳಿವೆ. ಕನ್ನಡ ಹಾಗೂ ತೆಲಗು ಭಾಷೆಗಳನ್ನು ಮಾತನಾಡುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಇವರಲ್ಲಿ ಅನುಮತಿಯಿದೆ. ಇವರಲ್ಲಿ ಪುರೋಹಿತ ವರ್ಗವಿಲ್ಲ. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪರೋಹಿತರು ನೆರವೇರಿಸಿಕೊಡುತ್ತಾರೆ. ಇವರಲ್ಲಿ ಮಾಂಸಾಹಾರವನ್ನು ಸೇವಿಸುವುದು ರೂಡಿಯಲ್ಲಿದೆ. ಇವರು ತುಳಜಾಭವಾನಿ, ನಾಗಾಯಿಯ ಎಲ್ಲಮ್ಮ, ಯಾದಗಿರಿ ಸಮೀಪದ ಮೈಲಾರ ಮುಂತಾದ ದೇವ ದೇವತೆಗಳಿಗೆ ನಡೆದುಕೊಳ್ಳುತ್ತಾರೆ, ಹಾಗೂ ತುಳಜಾಪುರ, ಮಂತ್ರಾಲಯ, ತಿರುಪತಿ, ಮೊದಲಾದ ಯಾತ್ರಾಸ್ಥಳಗಳಿಗೆ ಹೋಗುತ್ತಾರೆ. ಇವರಲ್ಲಿ ಮೃತರನ್ನು ಹೂಳುವ ಪದ್ಧತಿಯಿದೆ. ಮಚಿಂದೆ ಭೋಯಿಗಳು ತಾವು ನಾಥ ಸಂಪ್ರದಾಯದ ಗೋರಖನಾಥನ ಪ್ರಸಿದ್ಧ ಶಿಷ್ಯನಾದ ಮಚ್ಚೇಂದ್ರನಾಥನ ಅನುಯಾಯಿಗಳೆಂದು ಹೇಳಿಕೊಳ್ಳುವರೆಂಬ ಅಭಿಪ್ರಾಯವಿದೆ.

### ಮರಾಠ

ಮರಾಠರನ್ನು ಅರೇರು ಎಂತಲೂ ಕರೆಯುವುದುಂಟು. ಒಕ್ಕಲುತನ ಮಾಡುವುದು, ಕೃಷಿ ಕೂಲಿ ಮಾಡುವುದು, ವ್ಯಾಪಾರ ಇವೇ ಮೊದಲಾದ ಉದ್ಯೋಗಗಳಲ್ಲಿ ಇವರು ತೊಡಗಿರುತ್ತಾರೆ. ಮಾಂಸಾಹಾರಿಗಳಾದ ಇವರಲ್ಲಿ ಜನಿವಾರ ಧರಿಸುವ ಪದ್ಧತಿ, ಹುಟ್ಟು ಸಾವುಗಳ ಸಮಯದಲ್ಲಿ ಮೈಲಿಗೆ ಆಚರಿಸುವುದು ಮತ್ತಿತರ ಬಹುತೇಕ ವೈದಿಕ ಆಚರಣೆಗಳನ್ನು ಅನುಸರಿಸುವುದುಂಟು. ಇವರು ಕನ್ನಡ ಹಾಗೂ ಮರಾಠಿ ಮಾತನಾಡುವರು. ಸಾಂಪ್ರದಾಯಿಕವಾಗಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳಿಗೆ ಇವರಲ್ಲಿ ಅನುಮತಿಯಿದೆ ಇವರು ಖಂಡೋಬ, ಆಂಜನೇಯ, ಅಂಭಾಭವನಿ ಮೊದಲಾದ ದೇವ ದೇವತೆಗಳಿಗೆ ನಡೆದುಕೊಳ್ಳುತ್ತಾರೆ. ಇವರು ಶವವನ್ನು ಸುಡುತ್ತಾರೆ. ಛತ್ರಪತಿ ಶಿವಾಜಿಯು ಇವರಿಗೆ ಅತ್ಯಂತ ಅಚ್ಚುಮೆಚ್ಚಿನ ಆದರ್ಶಪುರುಷ ಹಾಗೂ ಶಿವಾಜಿಯ ಜಯಂತಿಯನ್ನು ಭಕ್ತಿಯಿಂದ ಆಚರಿಸುವರು.

### ಮಾದಿಗ

ಒಕ್ಕಲುತನ ಪರಿಕರಗಳಾದ ಮಿಣಿ, ಬಾರುಕೋಲು, ಕಪಲಿಗಳನ್ನಲ್ಲದೆ ಹಲಗೆ, ಪಾದರಕ್ಷೆ ಮುಂತಾದ ಚರ್ಮದ ಸಾಮಗ್ರಿಗಳನ್ನು ಸಿದ್ಧಪಡಿಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ಇಚ್ಚೀಚಿನ ದಿನಗಳಲ್ಲಿ ಒಕ್ಕಲುತನ, ಹೊಲಗದ್ದೆಗಳಲ್ಲಿ ಕೂಲಿ ಮಾಡುವುದು ಮತ್ತಿತರ ಉದ್ಯೋಗಗಳಲ್ಲಿ ಇವರು ತೊಡಗಿರುತ್ತಾರೆ. ಇವರಲ್ಲಿ ಅನೇಕ ಬೆಡಗುಗಳಿವೆ. ಜಾತಿ ಪಂಚಾಯಿತಿ ಇವರಲ್ಲಿದೆ. ಇವರು ಮಾತನಾಡುವ ಭಾಷೆ ಕನ್ನಡ, ಕೆಲವರು ತೆಲಗು ಹಾಗೂ ಮರಾಠಿ ಮಾತನಾಡುವುದುಂಟು ಇವರಲ್ಲಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ಪ್ರಚಲಿತವಾಗಿದೆ. ಮಾಂಸಾಹಾರ ಸೇವಿಸುವುದು ಇವರಲ್ಲಿ ರೂಢಿಯಲ್ಲಿದೆ. ಇವರಲ್ಲಿ ಪುರೋಹಿತ ವರ್ಗವಿಲ್ಲ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರಾಗಲೀ ಅಥವಾ ಜಂಗಮರಾಗಲೀ ನೆರವೇರಿಸಿಕೊಡುತ್ತಾರೆ. ಇವರು ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ದೀಪಾವಳಿಯಲ್ಲಿ ಇವರು ತಮ್ಮ ವೃತ್ತಿ ಸಾಧನಗಳಿಗೆ ಪೂಜೆ ಸಲ್ಲಿಸುವುದುಂಟು. ಅಂಬಾ ಭವಾನಿ, ಮರಗಮ್ಮ, ದುರ್ಗಮ್ಮ, ಎಲ್ಲಮ್ಮ ಆಂಜನೇಯ ಮೊದಲಾದ ದೇವ ದೇವತೆಗಳನ್ನು ಇವರು ಪೂಜಿಸುತ್ತಾರೆ. ಸಾಂಪ್ರದಾಯಿಕವಾಗಿ ಇವರಲ್ಲಿ ಸತ್ತವರನ್ನು ಹೂಳುತ್ತಾರೆ. ಶರಣ ಮಾದಾರ ಚನ್ನಯ್ಯ ಈ ಜನಾಂಗಕ್ಕೆ ಸೇರಿದವನೆಂಬ ಹೇಳಿಕೆಯಿದೆ.

**ಮೇದರು**

ಮೇದರು ಸಾಂಪ್ರದಾಯಿಕವಾಗಿ ಬಿದಿರಿನಿಂದ ತಯಾರಾಗುವ ಮರ, ಬುಟ್ಟಿ ಬೀಸಣಿಗೆ, ಚಾಪೆ ಹೆಣೆಯುವುದು ಮುಂತಾದ ಕೈ ಕಸಬುಗಳನ್ನು ಮಾಡುವರು. ಅಲ್ಲದೆ ವ್ಯಾಪಾರ, ಕೃಷಿ, ಕೂಲಿ ಮಾಡುವುದು ಇವೇ ಮುಂತಾದುವು ಇವರ ಇತರ ಉದ್ಯೋಗಗಳಾಗಿವೆ. ಇವರಲ್ಲಿ ಗೌಡರ್, ದಾಸರ್, ಹುಲೇರ್, ಪ್ಯಾರಸಲೆ, ಸಣ್ಣಕಿ ಕುಂಕುಮ ಮೊದಲಾದ ಅನೇಕ ಬೆಡಗುಗಳಿವೆ. ಇವರು ಕನ್ನಡ ಮಾತನಾಡುತ್ತಾರೆ. ಜಿಲ್ಲೆಯ ಕೆಲವು ಭಾಗದಲ್ಲಿ ಮರಾಠಿ ಮಾತನಾಡುವವರೂ ಇದ್ದಾರೆ. ಇವರನ್ನು ಬುರುಡರು ಎಂದು ಕರೆಯುತ್ತಾರೆ. ಇವರಲ್ಲಿ ಪುರೋಹಿತ ವರ್ಗವಿರುವುದಿಲ್ಲ. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತರು ನೆರವೇರಿಸಿ ಕೊಡುತ್ತಾರೆ. ವಿವಾಹ ವಿಚ್ಛೇದನ ಹಾಗೂ ವಿಧವಾ ವಿವಾಹಗಳು ಇವರಲ್ಲಿ ಪ್ರಚಲಿತವಿದೆ. ಇವರು ಮಾಂಸಾಹಾರಿಗಳು, ಇವರಲ್ಲಿ ಶವವನ್ನು ಹೂಳುತ್ತಾರೆ. ಮರಿಯಮ್ಮ ಇವರ ಕುಲದೇವತೆ. ಇವರು ತಿರುಪತಿ ವೆಂಕಟರಮಣ ಚಿತ್ತಾಪುರದ ನಾಗಾಯಿ ಎಲ್ಲಮ್ಮ ಬೀದರ್ ಜಿಲ್ಲೆಯ ಖಾನಾಪುರದ ಮೈಲಾರ ದೇವರು, ಆಂಜನೇಯ ಮೊದಲಾದ ದೇವರುಗಳಿಗೆ ನಡೆದುಕೊಳ್ಳುತ್ತಾರೆ.

**ರಜಪೂತ**

ರಜಪೂತರು ತಾವು ಕ್ಷತ್ರಿಯರೆಂದು ಮತ್ತು ತಮ್ಮಲ್ಲಿ ಸೂರ್ಯ, ಚಂದ್ರ ಮತ್ತು ಅಗ್ನಿವಂಶಗಳಿವೆ ಎಂದು ಹೇಳಿಕೊಳ್ಳುತ್ತಾರೆ. ದಖನ್ ಪ್ರದೇಶಕ್ಕೆ ಅವರು ಸೈನಿಕರಾಗಿ ಬಂದರೆಂದು ಅವರ ಸಂಪ್ರದಾಯ ಹೇಳುತ್ತದೆ. ಕೃಷಿ, ಚಿಕ್ಕಪುಟ್ಟ ವ್ಯಾಪಾರ ಮೊದಲಾದ ಉದ್ಯೋಗಗಳಲ್ಲಿ ಇವರು ತೊಡಗಿರುತ್ತಾರೆ. ಇವರು ಹಿಂದಿ ಮತ್ತು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಇವರಲ್ಲಿ ಅನೇಕ ಗೋತ್ರಗಳಿವೆ ಹಾಗೂ ಜನಿವಾರ ಧರಿಸುವ ಪದ್ಧತಿಯಿದೆ. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತರು ನಡೆಸಿಕೊಡುತ್ತಾರೆ. ಇವರು ವೆಂಕಟರಮಣ, ತುಳಜಾ ಭವಾನಿ ಮೊದಲಾದ ದೇವ ದೇವತೆಗಳನ್ನು ಪೂಜಿಸುತ್ತಾರೆ ಹಾಗೂ ತಿರುಪತಿ, ತುಳಜಾಪುರ ಮೊದಲಾದ ಯಾತ್ರಾಸ್ಥಳಗಳಿಗೆ ಹೋಗುತ್ತಾರೆ. ಇವರು ಮೃತರಿಗೆ ಅಗ್ನಿ ಸಂಸ್ಕಾರ ಮಾಡುತ್ತಾರೆ.

**ರೆಡ್ಡಿ**

ರೆಡ್ಡಿಗಳು ಮೂಲತಹ ಒಕ್ಕಲುತನ ಮಾಡುವ ಒಂದು ಸಮುದಾಯ, ಇವರಲ್ಲಿ ಕೆಲವರು ಆಂಧ್ರ ಮೂಲದವರೂ ಇರುವರು. ಇತ್ತೀಚೆಗೆ ಇವರು ವ್ಯವಸಾಯವಲ್ಲದೇ ವ್ಯಾಪಾರ, ಉದ್ಯಮ, ಸ್ವಯಂ ಉದ್ಯಮ ಮುಂತಾದ ಚಟುವಟಿಕೆಗಳಲ್ಲಿ ತೊಡಗಿರುವರು. ಇವರು ಕನ್ನಡ ಹಾಗೂ ತೆಲಗು ಭಾಷೆಯನ್ನು ಮಾತನಾಡುತ್ತಾರೆ. ಇವರಲ್ಲಿ ಪುರೋಹಿತ ವರ್ಗವಿರುವುದಿಲ್ಲ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರಾಗಲೀ ಅಥವಾ ವೀರಶೈವ ಜಂಗಮರಾಗಲೀ ನೆರವೇರಿಸಿ ಕೊಡುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಇವರಲ್ಲಿ ಪ್ರಚಲಿತವಿದೆ. ಜಿಲ್ಲೆಯಲ್ಲಿ ವೀರಶೈವ ಮತಾವಲಂಬಿ ರೆಡ್ಡಿಗಳೂ ಇರುವರು. ವೀರಶೈವರಲ್ಲದ ರೆಡ್ಡಿಗಳಲ್ಲಿ ಮಾಂಸಾಹಾರವನ್ನು ಸೇವಿಸುವುದು ರೂಢಿಯಲ್ಲಿದೆ. ಇವರು ತಿರುಪತಿ, ಶ್ರೀಶೈಲ ಮೊದಲಾದ ಯಾತ್ರಾಸ್ಥಳಗಳಿಗೆ ಹೋಗುತ್ತಾರೆ.

**ಲಂಬಾಣಿ**

ಲಂಬಾಣಿಯವರನ್ನು ಲಮಾಣಿ, ಬಂಜಾರ, ವಂಜಾರ ಮುಂತಾದ ಹೆಸರುಗಳಿಂದಲೂ ಕರೆಯುವುದುಂಟು. ಇವರ ಪೂರ್ವಿಕರು ರಾಜಸ್ಥಾನದಿಂದ ವಲಸೆ ಬಂದವರೆಂದು ಹೇಳುತ್ತಾರೆ. ಹಿಂದಿನ ಕಾಲದಲ್ಲಿ ಇವರು ಹೇರು ಹೊರುವ ಪ್ರಾಣಿಗಳ ಮೇಲೆ ಆಹಾರ ಧಾನ್ಯಗಳನ್ನು ಹೊರಿಸಿಕೊಂಡು ಮಾರಾಟ ಮಾಡುತ್ತಿದ್ದರು. ಈಚೆಗೆ ಇವರು ಒಕಲುತನ, ಕೂಲಿ ಮಾಡುವುದು, ಕಟ್ಟಿಗೆ ಮಾರುವುದು, ಮೊದಲಾದ ಹಲವಾರು ಬಗೆಯ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಇವರು ಸಾಮಾನ್ಯವಾಗಿ ತಾಂಡಾಗಳಲ್ಲಿ ವಾಸಿಸುತ್ತಾರೆ. ಇವರಲ್ಲಿ ಜಾತ್, ಭುಕಿಯಾ ಮೊದಲಾದ ಗೋತ್ರಗಳಿವೆ. ಇವರಲ್ಲಿನ ಪುರೋಹಿತ ವರ್ಗದವರಿಗೆ ಮಹಾರಾಜ್ ಅಥವಾ ಸಂತ್ ಎಂದು ಕರೆಯುತ್ತಾರೆ. ವಿವಾಹ ಮುಂತಾದ ಧಾರ್ಮಿಕ ಕಾರ್ಯಗಳಿಗೆ ಇವರು ತಮ್ಮ ಗುರುಗಳನ್ನು ಕರೆಸುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳಿಗೆ ಇವರಲ್ಲಿ ಅನುಮತಿಯಿದೆ. ಇವರು ಲಿಪಿಯಿಲ್ಲದ ತಮ್ಮದೇ ಆದ ಭಾಷೆಯನ್ನು ಮಾತನಾಡುತ್ತಾರೆ. ಇದಕ್ಕೆ ಗೋರ್

ಬೋಲಿ ಎಂದು ಕರೆಯುತ್ತಾರೆ. ಇವರಿಗೆ ಕನ್ನಡವೂ ತಿಳಿದಿದೆ. ಇವರಲ್ಲಿ ಸ್ತ್ರೀಯರ ಉಡುಪು ಹಾಗೂ ಅಭರಣಗಳು ವಿಶಿಷ್ಟವಾದುವು. ಸ್ತ್ರೀಯರು ಗಾಜು ಮತ್ತು ಕವಡೆ ಕುಸೂರಿ ಕೆಲಸದಿಂದ ಕೂಡಿದ ಕೆಂಪು ಬಣ್ಣದ ಲಂಗವನ್ನು ಮುಕ್ಕಾಲು ತೋಳಿನ ರವಿಕೆಯನ್ನು ಹಾಕಿ ತಲೆ ಮೇಲೆ ಚುನರಿ (ದುಪ್ಪಟ್ಟ)ಯನ್ನು ಹೊದೆಯುತ್ತಾರೆ. ಮೂಗಿಗೆ ಹಾಕಿಕೊಳ್ಳುವ ಭೂರಿಯಾ, ಕಿವಿಗೆ ಹಾಕುವ ಕನಿಯಾ, ಕೊರಳಿಗೆ ಹಾಕುವ ಆಸಲಿ, ಕೈಗೆ ಹಾಕುವ ಬೋದಲು, ತೋಳಿಗೆ ಹಾಕುವ ಚೂಡಿ, ತಲೆಗೆ ಹಾಕುವ ಟೋಪಲಿ ಮತ್ತು ಗುಗ್ರಿ, ಕಾಲಿಗೆ ಹಾಕುವ ವಾಕಡಿ ಮತ್ತು ಚೈನು ಇವು ಇವರು ಪ್ರಮುಖವಾಗಿ ಧರಿಸುವ ಅಭರಣಗಳಾಗಿವೆ. ಗೌರಿ, ದಸರಾ, ದೀಪಾವಳಿ ಮತ್ತು ಹೋಳಿ ಇವರು ಆಚರಿಸುವ ಕೆಲವು ಪ್ರಮುಖ ಹಬ್ಬಗಳಾಗಿವೆ. ಹೋಳಿ ಮುಂತಾದ ಹಬ್ಬ ಹರಿದಿನಗಳಲ್ಲಿ ಹಾಡಿಕೊಂಡು ಕುಣಿಯುವುದು ಹಾಗೂ ತೀಜ್ ಹಬ್ಬದಲ್ಲಿ ಹಾಡುಗಳನ್ನು ಹೇಳುವುದು ಇವರಲ್ಲಿ ವಿಶೇಷವಾದುದು. ತೀಜ್ ಸ್ತ್ರೀ ಹಾಗೂ ಪುರುಷ ಪ್ರಧಾನ ಸಮಾನವಾಗಿರುವ ವಿಶಿಷ್ಠ ಹಬ್ಬವಾಗಿದೆ. ಈ ಹಬ್ಬದ ಆಚರಣೆಯಲ್ಲಿ ತೀಜ್ (ಗೋದಿಸಸಿ) ಹತ್ತು ದಿನಗಳವರೆಗೆ ಬೆಳೆಯಿಸಿ ನಂತರ ನೀರಿನಲ್ಲಿ ವಿಸರ್ಜಿಸುತ್ತಾರೆ. ಇವರು ಮಾಂಸಾಹಾರವನ್ನು ಸೇವಿಸುತ್ತಾರೆ. ಇವರು ಬಾಲಾಜಿ, ಆಂಜನೇಯ, ಕೃಷ್ಣ, ಜಗದಂಬೆ ಮೊದಲಾದ ದೇವ ದೇವತೆಗಳನ್ನು ಪೂಜಿಸುತ್ತಾರೆ. ಸೇವಾಲಾಲ್‌ನಲ್ಲಿ ಇವರಿಗೆ ವಿಶೇಷ ನಂಬಿಕೆಯಿದೆ. ವಿವಾಹವಾಗಿದ್ದಲ್ಲಿ ಶವವನ್ನು ದಹನ ಮಾಡುವುದೂ, ಇಲ್ಲದಿದ್ದಲ್ಲಿ ಹೂಳುವುದೂ ಇವರ ಸಂಪ್ರದಾಯವಾಗಿದೆ.

**ಲಿಂಗಾಯತ**

ಲಿಂಗಾಯತರನ್ನು ಲಿಂಗವಂತ, ವೀರಶೈವರೆಂದೂ ಕರೆಯುತ್ತಾರೆ. ಲಿಂಗಾಯತ ಎಂಬ ಪದವು ಧರ್ಮ ಸೂಚಕವೇ ಹೊರತು ಜಾತಿ ಸೂಚಕವಲ್ಲ. ವೀರಶೈವವು ಶೈವಸಂಪ್ರದಾಯದ ಪೂರ್ಣವಾಗಿ ಅರಳಿದ ರೂಪವೆಂದು ಹೇಳಲಾಗುವುದು. ಇವರಲ್ಲಿ ಕೃಷಿ, ವ್ಯಾಪಾರ, ವಾಣಿಜ್ಯ ಮೊದಲಾದ ಹತ್ತು ಹಲವಾರು ವಿವಿಧ ವೃತ್ತಿ ಕಾಯಕವನ್ನು ಅನುಸರಿಸುವ ಜನರಿದ್ದಾರೆ. ಇವರಲ್ಲಿ ಜಂಗಮರು (ಪುರೋಹಿತ ವರ್ಗದವರು) ಪಂಚಮಸಾಲಿಗಳು ಬಣಜಿಗರು (ಸಾಂಪ್ರದಾಯಿಕವಾಗಿ ವ್ಯಾಪಾರಿಗಳು) ಅಲ್ಲದೆ ಅನೇಕ ವೃತ್ತಿ ನಿರತ ಮಡಿವಾಳರು, ಜಾಡರು, ಗಾಣಿಗರು, ಹೂಗಾರರು, ಹಡಪದವರು ಮುಂತಾದವರು ಇರುತ್ತಾರೆ. ಇವರು ಜಿಲ್ಲೆಯಲ್ಲಿ ಬಹು ಸಂಖ್ಯಾತರಾಗಿದ್ದು ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಕಂಡು ಬರುತ್ತಾರೆ. ಬಸವಣ್ಣನವರ ಕಲ್ಯಾಣ ಕ್ರಾಂತಿಯ ನಂತರ ಅವರು ಸಾರಿದ ಜಾತ್ಯತೀತ ಸಮಾಜಕ್ಕೆ ಅನೇಕ ಜಾತಿಗಳ ವರ್ಗಗಳ ಜನರು ಸೇರಿಕೊಂಡರು. ಬಸವಣ್ಣನವರಿಗಿಂತ ಪೂರ್ವದಲ್ಲಿದ್ದ ಪಂಚಾಚಾರ್ಯರ ಪೀಠದ ಅನುಯಾಯಿಗಳೂ ಜಿಲ್ಲೆಯಲ್ಲಿ ಇದ್ದಾರೆ. ಬಾಳೆಹೊನ್ನೂರು, (ಚಿಕ್ಕಮಗಳೂರು ಜಿಲ್ಲೆ), ಉಜಿನಿ (ಬಳ್ಳಾರಿ ಜಿಲ್ಲೆ), ಕೇದಾರ (ಉತ್ತರ ಪ್ರದೇಶ), ಶ್ರೀಶೈಲ (ಆಂಧ್ರ ಪ್ರದೇಶ) ಮತ್ತು ಕಾಶಿ (ಉತ್ತರಪ್ರದೇಶ)ದಲ್ಲಿರುವ ವೀರಶೈವ ಗುರುಪೀಠಗಳು ಇವರ ಪಂಚಾಪೀಠಗಳಾಗಿವೆ. ವೀರಶೈವ ಸಿದ್ಧಾಂತಕ್ಕೆ ಶಕ್ತಿ ವಿಶಿಷ್ಟಾದ್ವೈತ ಸಿಧ್ಧಾಂತ ಎಂತಲೂ ಕರೆಯುತ್ತಾರೆ. ವೀರಶೈವ ಆಚರಣೆಯ ಪ್ರಮುಖ ಲಕ್ಷಣಗಳಾದ ಅಷ್ಟಾವರಣ, ಪಂಚಾಚಾರ ಮತ್ತು ಷಟ್ ಸ್ಥಳಗಳು ಈ ಧರ್ಮದ ವಿಶೇಷತೆಯನ್ನು ವೈಶಾಲ್ಯತೆಯನ್ನು ಮತ್ತು ವ್ಯಾಪಕತೆಯನ್ನು ಬಿಂಬಿಸುವವು. ಮೊದಲನೆಯದನ್ನು ಈ ಧರ್ಮದ ಶರೀರ ಭಾಗವೆಂದೂ, ಎರಡನೆಯದನ್ನು ಉಸಿರೆಂದೂ ಹಾಗೂ ಮೂರನೆಯದನ್ನು ಆತ್ಮವೆಂದು ಪರಿಗಣಿಸಲಾಗಿದೆ. ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ ಮಂತ್ರ, ಪಾದೋದಕ ಮತ್ತು ಪ್ರಸಾದಗಳನ್ನೊಳಗೊಂಡ ಅಷ್ಠಾ ವರಣವು ದೈನಂದಿನ ಜೀವನದ ಅಂಗವಾಗಿರುತ್ತವೆ. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳು ಪಂಚಾಚಾರದ ಮೂಲಭೂತ ನೈತಿಕ ತತ್ವಗಳಾಗಿರುತ್ತವೆ. ಷಟ್ ಸ್ಥಳಗಳ್ಲಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಸ್ಥಳಗಳನ್ನು ತಾರಕದಿಂದ ಪಾರಮಾರ್ಥದತ್ತ ಕೊಂಡೊಯ್ಯುವ ವಿವಿಧ ಆಧ್ಯಾತ್ಮಿಕ ಹಂತಗಳೆಂದು ಪರಿಗಣಿಸಲಾಗಿದೆ. ಈ ಧರ್ಮದ ಅನುಯಾಯಿಗಳು ದೇಹದ ಮೇಲೆ ಲಿಂಗವನ್ನು ಧರಿಸುವರು. ಇದನ್ನು ಇಷ್ಟ ಲಿಂಗವೆಂದು ಕರೆಯುತ್ತಾರೆ. ಇದೇ ರೀತಿ ಲೌಕಿಕ ದೇಹವನ್ನು ಪ್ರತಿನಿಧಿಸುವ ಪ್ರಾಣಲಿಂಗ ಹಾಗೂ ನೈಜದೇಹದ ಪ್ರತಿರೂಪವಾದ ಭಾವಲಿಂಗಗಳನ್ನು ಉಪಯೋಗಿಸುವುದು ಪವಿತ್ರ ಧಾರ್ಮಿಕ ಸಂಕೇತಗಳೆಂದು ಪರಿಗಣಿಸುತ್ತಾರೆ. ಲಿಂಗಾಯತರು ಸಸ್ಯಾಹಾರಿಗಳು. ಇವರು ಸಾಮಾನ್ಯವಾಗಿ ಏಕೋಪಾಸಕರಾಗಿದ್ದು, ಲಿಂಗವನ್ನು ಧರಿಸಿದವರು ಯಾವಾಗಲೂ ಪರಿಶುದ್ಧರೆಂದೂ, ಹುಟ್ಟು, ಸಾವು ಮತ್ತು ಸ್ತ್ರೀಯರು ಹೊರಗಾದ ಸಂದರ್ಭದಲ್ಲಿ ಮೈಲಿಗೆಯನ್ನು ಆಚರಿಸುವ ಅಗತ್ಯವಿಲ್ಲವೆಂದು ಸ್ನಾನ ಶುದ್ಧಿಯನ್ನು ಮಾಡುತ್ತಾರೆ. ಇವರಲ್ಲಿ ಹುಟ್ಟುವ ಮಗುವಿಗೆ ತಾಯಿಯು ಎಂಟನೇ ತಿಂಗಳ ಗರ್ಭದಲ್ಲಿದ್ದಾಗ ಮಗುವಿನ ಪರವಾಗಿ ತಾಯಿಗೆ ಲಿಂಗಧಾರಣೆ

ಮಾಡಿ ಮಗು ಹುಟ್ಟಿದ ನಂತರ ಅದನ್ನು ಮಗುವಿಗೆ ವರ್ಗಾಯಿಸುವರು. ವೀರಶೈವ ಜಂಗಮರಲ್ಲಿ ಮಗುವಿನ ಎಂಟನೇ ವರ್ಷದಲ್ಲಿ ದೀಕ್ಷಾಗುರುವೇ ಹಳೆಯದರ ಬದಲಾಗಿ ಹೊಸದಾಗಿ ಲಿಂಗಧಾರಣೆ ಮಾಡುವರು, ಇದಕ್ಕೆ ಅಯ್ಯಾಚಾರ ಎನ್ನುತ್ತಾರೆ. ಜಂಗಮರು ವಿರಕ್ತರಿರಬಹುದು ಅಥವಾ ಗುರುವರ್ಗ ಪ್ರಕಾರಗಳಿಗೆ ಸೇರಿರಬಹುದು. ವಿರಕ್ತರು ಸಂಸಾರವನ್ನು ತ್ಯಜಿಸಿ ಸಾಮಾನ್ಯವಾಗಿ ಮಠಗಳಲ್ಲಿ ವಾಸಿಸುತ್ತಾರೆ. ಜಿಲ್ಲೆಯಲ್ಲೂ ಸಹ ಅನೇಕ ವೀರಶೈವ ಮಠಗಳಿವೆ. ಇವರಲ್ಲಿ ಸತ್ತವರನ್ನು ಕುಳಿತ ಭಂಗಿಯಲ್ಲಿ ಹೂಳುತ್ತಾರೆ.

## ವಡ್ಡರು

ವಡ್ಡರನ್ನು ಬೋವಿಗಳೆಂದೂ ಕರೆಯುತ್ತಾರೆ. ಇವರಲ್ಲಿ ಕಲ್ಲುವಡ್ಡರು, ಮಣ್ಣುವಡ್ಡರು, ಮತ್ತು ಬಂಡಿವಡ್ಡರು ಎಂಬ ಉಪ ಪಂಗಡಗಳಿವೆ. ಕಲ್ಲು ಒಡೆಯುವುದು, ಬಂಡೆ ಕಲ್ಲು ಅಗೆಯುವುದು, ಕಟ್ಟಡಗಳಿಗೆ ಪಾಯ ತೋಡುವುದು, ಕಲ್ಲು ಮಾರಾಟ ಮಾಡುವುದು, ಗಣಿಗಾರಿಕೆ ಇವೇ ಮೊದಲಾದುವು ಇವರ ಸಾಂಪ್ರದಾಯಿಕ ಉದ್ಯೋಗವಾಗಿರುತ್ತವೆ. ಬಾವಿ ತೋಡುವುದು, ರಸ್ತೆ ನಿರ್ಮಾಣ ಮಾಡುವುದು, ಕೃಷಿ ಮೊದಲಾದ ಉದ್ಯೋಗಗಳಲ್ಲೂ ಹಲವರು ತೊಡಗಿರುತ್ತಾರೆ. ಜಾತಿ ಪಂಚಾಯಿತಿ ಇವರಲ್ಲಿದೆ. ಇವರಲ್ಲಿ ಅಲಕುಂಟಿ, ರ್‍ಯಾಪನವರು, ಕುಂಚಪೋರು, ಗುಂಜವರು, ಸೆಲ್ಲವರು ಇವೇ ಮುಂತಾದ ಬೆಡಗುಗಳಿವೆ. ಇವರಲ್ಲಿ ಕನ್ನಡ ಹಾಗೂ ತೆಲಗು ಭಾಷೆಗಳನ್ನು ಮಾತನಾಡುವುದುಂಟು. ವಿವಾಹ ವಿಚ್ಛೇದನ ಮತ್ತು ವಿಧವಾ ವಿವಾಹಗಳು ಇವರಲ್ಲಿ ಪ್ರಚಲಿತವಿದೆ. ಮಾಂಸಾಹಾರ ಸೇವಿಸುವುದು ಇವರಲ್ಲಿ ರೂಢಿಯಲ್ಲಿದೆ. ವೆಂಕಟರಮಣ, ದುರ್ಗಮ್ಮ, ಎಲ್ಲಮ್ಮ ಮುಂತಾದ ದೇವರ ದೇವತೆಗಳನ್ನು ಪೂಜಿಸುತ್ತಾರೆ. ಇವರಲ್ಲಿ ಮನೆಯಲ್ಲಿ ಹಿರಿಯರು ತೀರಿಕೊಂಡಾಗ ಅವರ ನೆನಪಿಗಾಗಿ ಬೆಳ್ಳಿಯ ಕಣ್ಣು ಬೊಟ್ಟನ್ನು ಮಾಡಿಸಿ ದೇವರ ಜಗುಲಿಯಲ್ಲಿಡುವುದು ವಾಡಿಕೆಯಿದ್ದು ಯುಗಾದಿ ಮತ್ತು ದಸರಾ ಹಬ್ಬಗಳಲ್ಲಿ ಮೃತರಿಗೆ ಪ್ರಿಯವಾದ ವಸ್ತ್ರಗಳನ್ನಿಟ್ಟು ವಿಶೇಷ ಪೂಜೆಸಲ್ಲಿಸುವುದುಂಟು. ಇವರಲ್ಲಿ ಶವವನ್ನು ಹೂಳುವ ಪದ್ಧತಿಯಿದೆ. ಶಿವಶರಣ ಸೊನ್ನಲಗೆಯ ಸಿದ್ಧರಾಮ ಈ ಜನಾಂಗಕ್ಕೆ ಸೇರಿದವನೆಂಬ ಹೇಳಿಕೆಯಿದೆ.

## ವಿಶ್ವಕರ್ಮ

ವಿಶ್ವಕರ್ಮ ಸಮುದಾಯದವರು ವಿಶೇಷವಾಗಿ ಅವರವರ ಪರಂಪರಾಗತ ಕಲಾ ಕೌಶಲ್ಯಕ್ಕೆ ಪ್ರಸಿದ್ಧರಾಗಿದ್ದಾರೆ. ಇವರನ್ನು ಪಾಂಚಾಳರೆಂದೂ ಕರೆಯುವುದುಂಟು. ಇವರಲ್ಲಿ ಚಿನ್ನ, ಬೆಳ್ಳಿ ಕೆಲಸ ಮಾಡುವ ಅಕ್ಕಸಾಲಿಗರು, ಕಂಚು, ಹಿತ್ತಾಳೆ ಕೆಲಸ ಮಾಡುವ ಕಂಚುಗಾರರೂ, ಕಬ್ಬಿಣದ ಕೆಲಸ ಮಾಡುವ ಕಮ್ಮಾರರೂ (ಲೋಹಾರ), ಮರದ ಕೆಲಸ ಮಾಡುವ ಬಡಗಿಗಳೂ ಮತ್ತು ಶಿಲ್ಪದ ಕೆಲಸ ಮಾಡುವ ಶಿಲ್ಪಿಗಳೂ ಸೇರಿದ್ದಾರೆ. ವಿಶ್ವ ಬ್ರಹ್ಮನ ಐದು ಮುಖಗಳಿಂದ ಹುಟ್ಟಿದ ಮನು, ಮಯ, ತ್ವಷ್ಟ, ಶಿಲ್ಪಿ ಮತ್ತು ವಿಶ್ವಜ್ಞ ಋಷಿಗಳ ಮಕ್ಕಳಾದ ಸನಕ, ಸನಂದನ, ಅಹಭೂವನ, ಪ್ರಾತ್ನಸ ಮತ್ತು ಸುಪರ್ಣರು ಪಾಂಚಾಳರ ಗೋತ್ರ ಕಾರರೆಂದೂ, ಇವರಿಂದ ಮುಂದೆ ೧೨೫ ಗೋತ್ರಗಳು ಹುಟ್ಟಿದವೆಂದು ಹೇಳಿಕೆ ಇರುವುದು. ಇವರಲ್ಲಿ ಪುರೋಹಿತ ವರ್ಗವಿದೆ. ಹಾಗೂ ಉಪನಯನ ಪದ್ಧತಿಯಿದೆ. ಸಾಂಪ್ರದಾಯಿಕವಾಗಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಆಚರಣೆಯಲ್ಲಿಲ್ಲ. ಇವರು ಕನ್ನಡ ಭಾಷಿಕರು ಹಾಗೂ ಸಸ್ಯಾಹಾರಿಗಳು. ಹುಟ್ಟು ಸಾವು ಮೊದಲಾದ ಸಂದರ್ಭಗಳಲ್ಲಿ ಸೂತಕ ಆಚರಿಸುತ್ತಾರೆ. ಇವರಲ್ಲಿ ಶವವನ್ನು ದಹನಮಾಡುವ ರೂಢಿ ಉಂಟು. ಸುರಪುರ ತಾಲೂಕಿನ ತಿಂಥಿಣಿ ಮೌನೇಶ್ವರ, ಶಹಾಪುರದ ಏಕದಂಡಿಗೆ ಮಠ, ಬೆಳಗಾವಿ ಜಿಲ್ಲೆಯ ಶಿರಸಂಗಿಯ ಕಾಳಿಕಾಂಬಾ, ಸಿರ್ಸಿಯ ಮಾರಿಕಾಂಬಾ, ಚಿಂಚಲಿಯ ಮಾಯಕ್ಕ, ಧಾರವಾಡ ಜಿಲ್ಲೆಯ ನವಲಗುಂದದಲ್ಲಿರುವ ಅಜಾತನಾಗಲಿಂಗ ಸ್ವಾಮಿ ಮಠ, ಮೊದಲಾದವು ಇವರ ಪ್ರಮುಖ ಯಾತ್ರಾಸ್ಥಳಗಳಾಗಿವೆ.

## ಸಮಗಾರ

ಸಮಗಾರರು ಸಾಂಪ್ರದಾಯಿಕವಾಗಿ ಚರ್ಮದ ಕೆಲಸ ಮಾಡುವರು. ಈಚೆಗೆ ಹಲವರು ಹೊಲಗದ್ದೆಗಳಲ್ಲಿ ಕೂಲಿ ಮಾಡುವುದು, ಒಕ್ಕಲುತನ, ನೌಕರಿ ಮುಂತಾದವುಗಳಲ್ಲೂ ತೊಡಗಿರುವರು. ಇವರಲ್ಲಿ ಅನೇಕ ಬೆಡಗುಗಳಿವೆ. ಇವರು ಹೆಚ್ಚಾಗಿ ಶಹಾಪುರ, ಸುರಪುರ, ಗುಲಬರ್ಗಾ ಹಾಗೂ ಚಿತ್ತಾಪುರ ತಾಲೂಕುಗಳಲ್ಲಿ ಕಂಡು ಬರುವರು. ಇವರು

ಕನ್ನಡ ಮಾತನಾಡುವರು, ಜಾತಿ ಪಂಚಾಯಿತಿಯಿದೆ. ಕೆಲವು ಅವಿಭಕ್ತ ಕುಟುಂಬಗಳೂ ಇವೆ. ಇವರಲ್ಲಿ ಪುರೋಹಿತ ವರ್ಗವಿಲ್ಲ. ಹಾಗೂ ಮದುವೆ ಮುಂತಾದ ಧಾರ್ಮಿಕ ಕಾರ್ಯಗಳಿಗೆ ಸಾಮಾನ್ಯವಾಗಿ ಜಂಗಮರನ್ನು ಕರೆಸುತ್ತಾರೆ. ಅನುಕೂಲಕ್ಕೆ ತಕ್ಕಂತೆ ಇವರಲ್ಲಿ ವಿವಾಹವು ಗಂಡಿನ ಮನೆಯಲ್ಲಾಗಲೀ ಅಥವಾ ಹೆಣ್ಣಿನ ಮನೆಯಲ್ಲಾಗಲೀ ಅಗಬಹುದು. ವಿಧವಾ ವಿವಾಹಕ್ಕೆ ಹಾಗೂ ವಿವಾಹ ವಿಚ್ಛೇದನಕ್ಕೆ ಇವರಲ್ಲಿ ಅನುಮತಿಯಿದೆ. ಇವರು ಎಲ್ಲಮ್ಮ , ಮರಗಮ್ಮ , ದುರ್ಗಮ್ಮ ಮುಂತಾದ ದೇವತೆಗಳನ್ನು ಪೂಜಿಸುತ್ತಾರೆ. ಮಹಾನವಮಿ ಹಾಗೂ ದೀಪಾವಳಿ ಇವರಿಗೆ ವಿಶೇಷವಾದ ಹಬ್ಬಗಳು. ಮಾಂಸಾಹಾರವನ್ನು ಸೇವಿಸುವುದು ಇವರಲ್ಲಿ ರೂಢಿಯಲ್ಲಿದೆ. ಶವವನ್ನು ಹೂಳುವ ಹಾಗೂ ಸುಡುವ ಎರಡು ಪದ್ಧತಿಗಳೂ ಇವರಲ್ಲಿ ಕಂಡು ಬರುವುದು.

**ಹೊಲೆಯ (ಪರಿಶಿಷ್ಟ ಜಾತಿ)**

ಇವರು ಸಾಂಪ್ರದಾಯಿಕವಾಗಿ ಗ್ರಾಮದ ಊಳಿಗದವರಾಗಿ ಗ್ರಾಮೀಣ ಸಮಾಜ ವ್ಯವಸ್ಥೆಯಲ್ಲಿ ಹೊಂದಿಕೊಂಡಿದ್ದರು. ಇತ್ತೀಚಿನ ದಿನಗಳಲ್ಲಿ ಒಕ್ಕಲುತನ ಮಾಡುವುದು, ಕೃಷಿ ಕಾರ್ಮಿಕರಾಗಿ ಕೆಲಸ ಮಾಡುವುದೂ ಅಲ್ಲದೆ ಇತರ ಉದ್ಯೋಗಗಳಲ್ಲೂ ತೊಡಗಿರುತ್ತಾರೆ. ಇವರಲ್ಲಿ ಜಾತಿ ಪಂಚಾಯಿತಿ ಹಾಗೂ ಹೊಸಮನಿ, ಹಳೆಮನಿ, ದೊಡ್ಡಮನಿ ಮುಂತಾದ ಬೆಡಗುಗಳಿವೆ. ಇವರು ಮಾತನಾಡುವ ಭಾಷೆ ಕನ್ನಡ. ಇವರಲ್ಲಿ ಪುರೋಹಿತ ವರ್ಗವಿಲ್ಲ. ವಿವಾಹ ಮುಂತಾದ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತರಾಗಲೀ ಅಥವಾ ಜಂಗಮರಾಗಲೀ ನೆರವೇರಿಸಿಕೊಡುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಇವರಲ್ಲಿ ಪ್ರಚಲಿತವಾಗಿವೆ. ಇವರು ದುರ್ಗಮ್ಮ, ಎಲ್ಲಮ್ಮ, ಮರಗಮ್ಮ, ತುಳಜಾ ಭವಾನಿ, ಲಕ್ಷ್ಮಿ, ಮೈಲಾರ ಮೊದಲಾದ ದೇವ ದೇವತೆಗಳನ್ನು ಪೂಜಿಸುತ್ತಾರೆ. ಸೌಂದತ್ತಿ ಎಲ್ಲಮ್ಮ, ಯಾದಗಿರಿ ಸಮೀಪದ ಮೈಲಾರ, ತುಳಜಾಪುರ ಮೊದಲಾದ ಯಾತ್ರಾಸ್ಥಳಗಳಿಗೆ ಹೋಗುತ್ತಾರೆ. ಮಾಂಸಾಹಾರ ಸೇವಿಸುವುದು ಇವರಲ್ಲಿ ರೂಢಿಯಲ್ಲಿದೆ. ದಸರಾ ಹಾಗೂ ದೀಪಾವಳಿ ಇವರು ಆಚರಿಸುವ ಕೆಲವು ಪ್ರಮುಖ ಹಬ್ಬಗಳಾಗಿವೆ. ಸಾಮಾನ್ಯವಾಗಿ ಇವರು ಮೃತರನ್ನು ಹೂಳುತ್ತಾರೆ.

## ಸಾಮಾಜಿಕ ಜೀವನ

**ಅವಿಭಕ್ತ ಕುಟುಂಬ ಪದ್ಧತಿ**

ಇತರೆಡೆಯಲ್ಲಿ ಕಂಡುಬರುವಂತೆ ಈ ಜಿಲ್ಲೆಯಲ್ಲೂ ಸಹ ಅವಿಭಕ್ತ ಕುಟುಂಬ ಪದ್ಧತಿಯು ಬಹಳ ಮಟ್ಟಿಗೆ ಇಳಿಮುಖವಾಗಿದೆ ಎಂದು ಹೇಳಬಹುದು. ಪ್ರಮುಖವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ತಿ ವಿಭಜನೆಯು ಇದಕ್ಕೆ ಕಾರಣವಾಗಿದೆ ಎಂದು ಹೇಳಬಹುದು. ಅಲ್ಲದೆ ಸಂಚಾರ ಮತ್ತು ಸಾರಿಗೆ ಸಂಪರ್ಕಗಳ ಬೆಳವಣಿಗೆ, ಶಿಕ್ಷಣ, ವ್ಯಾಪಾರ ಮತ್ತು ಕೈಗಾರಿಕೆಗಳ ಬೆಳವಣಿಗೆಗಳು ನಗರೀಕರಣಕ್ಕೆ ಎಡೆಮಾಡಿಕೊಟ್ಟಿದ್ದು, ಗ್ರಾಮೀಣ ಜನರು ನಗರ ಪ್ರದೇಶಗಳಿಗೆ ವಲಸೆ ಬಂದು ನೆಲೆಸಿರುವುದೂ ಸಹ ಅವಿಭಕ್ತ ಕುಟುಂಬಗಳ ವಿಭಜನೆಗೆ ಕಾರಣವಾಗಿದೆ. ಆದರೂ ಸಹ ಜಿಲ್ಲೆಯಲ್ಲಿನ ಕೆಲವು ಸಮುದಾಯಗಳಲ್ಲಿ ಇಂದಿಗೂ ಅವಿಭಕ್ತ ಕುಟುಂಬಗಳನ್ನು ಕಾಣಬಹುದಾಗಿದೆ.

**ಗರ್ಭಾವಸ್ಥೆ ಮತ್ತು ಜನನ**

ಗರ್ಭಾವಸ್ಥೆಯಲ್ಲಿದ್ದಾಗ ಹಾಗೂ ಮಗು ಜನನವಾದಾಗ ಆಚರಿಸುವ ಅನೇಕ ಧಾರ್ಮಿಕ ಸಂಪ್ರದಾಯಗಳು ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲೂ ರೂಢಿಯಲ್ಲಿವೆ. ಗ್ರಹಣ ಕಾಲದಲ್ಲಿ ಗರ್ಭಿಣಿಯರು ಹೊರಗೆ ಬರಬಾರದೆಂಬ ನಂಬಿಕೆ ಮತ್ತು ಅವರಿಗೆ ಇರಬಹುದಾದ ತಿಂಡಿ ತಿನಿಸುಗಳ ಬಯಕೆಗಳನ್ನು ಪೂರೈಸುವುದು ರೂಢಿಯಲ್ಲಿದೆ. ಹಿಂದೂಗಳಲ್ಲಿ ಮೊದಲನೇ ಸಲ ಗರ್ಭಿಣಿಯಾದಾಗ ಮೂರನೇ ತಿಂಗಳಲ್ಲಿ ಕಳ್ಳ ಕುಪ್ಪಸ ಶಾಸ್ತ್ರ, ಏಳು ಅಥವಾ ಎಂಟನೇ ತಿಂಗಳಲ್ಲಿ ಬಳೆತೊಡಿಸುವ ಹಾಗೂ ಹಸಿರು ಸೀರೆ ಉಡುಗೊರೆಯ ಶಾಸ್ತ್ರವಿದೆ (ಸೀಮಂತ). ಸಾಮಾನ್ಯವಾಗಿ ಮೊದಲನೆ ಹೆರಿಗೆಗೆ ಹೆಣ್ಣು ತವರು ಮನೆಗೆ ಹೋಗುತ್ತಾಳೆ. ಮಗು ಹುಟ್ಟಿದ ೧೦ ದಿನಗಳನ್ನು ಮೈಲಿಗೆಯಾಗಿ ಆಚರಿಸಿ ೧೧ ನೇ ದಿನ ಸ್ನಾನ ಶುದ್ಧಿ ಮಾಡಿಕೊಂಡು ಮೈಲಿಗೆಯನ್ನು ನಿವಾರಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಮಗುವಿಗೆ ಹುಟ್ಟಿದ ೧೧ನೇ ದಿನ ನಾಮಕರಣ

ಮಾಡುತ್ತಾರೆ. ಆದರೆ ಅನಿವಾರ್ಯವಾದಾಗ ಮೂರು ತಿಂಗಳೊಳಗಾಗಿ ನಾಮಕರಣ ಶಾಸ್ತ್ರ ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೆರಿಗೆಯು ಆಸ್ಪತ್ರೆಯಲ್ಲಾಗುವುದು ಹೆಚ್ಚುತ್ತಾ ಬಂದಿರುವುದರಿಂದ ಕೆಲವು ಸಂಪ್ರಾದಾಯಗಳು ಕಣ್ಮರೆಯಾಗಿವೆ. ಬ್ರಾಹ್ಮಣರು ಹಾಗೂ ವೈದಿಕ ಧರ್ಮವನ್ನಾಚರಿಸುವ ಇತರ ಜಾತಿಗಳಲ್ಲಿ ಹಾಗೂ ಜೈನರಲ್ಲಿ ಗಂಡುಮಕ್ಕಳಿಗೆ ಉಪನನಯನವನ್ನು ಮಾಡುತ್ತಾರೆ. ಜಂಗಮರಲ್ಲಿ ಅಯ್ಯಾಚಾರ ದೀಕ್ಷೇಯನ್ನು ಕೊಡಲಾಗುವುದು.

ಮುಸಲ್ಮಾನರಲ್ಲಿ ಮಗು ಹುಟ್ಟಿದ ಕೂಡಲೇ ಕಿವಿಯಲ್ಲಿ 'ಬಾಂಗ್ ನಮಾಜ್' ಮಾಡುತ್ತಾರೆ. ಆ ತಕ್ಷಣವೇ ಹೆಸರನ್ನೂ ಇಡುತ್ತಾರೆ. ಹೆಸರನ್ನು ಮುಂದೆ ಬದಲಾಯಿಸಲು ಅವಕಾಶವಿದೆ. ಮಗು ಹುಟ್ಟಿದ ಐದನೇ ದಿನ ಮಗುವಿಗೆ ಅರಿವೆಯನ್ನು ತೊಡಿಸಿ ದೃಷ್ಟಿ ಬೀಳದ ಹಾಗೆ ಮಗುವನ್ನು ಅಲಂಕರಿಸುತ್ತಾರೆ. ಇದಕ್ಕೆ 'ಛಟ್ಟಿ' ಎಂದು ಕರೆಯುತ್ತಾರೆ.

ಕ್ರೈಸ್ತರಲ್ಲೂ ಸಹ ಮಗು ಹುಟ್ಟಿದ ಒಂದು ತಿಂಗಳ ಒಳಗೆ ಹೆಸರಿಡುವ ಸಮಾರಂಭವನ್ನು ಚರ್ಚಿನಲ್ಲಿ ನಡೆಸುವುದು ರೂಢಿಯಲ್ಲಿದೆ.

ಹುಡುಗಿಯು ಮೊದಲನೆ ಸಲ ಋತುಮತಿಯಾದಾಗ (ಮೈನೆರೆದಾಗ) ಹೊಸ ಬಟ್ಟೆ ಉಡಿಸುವದು, ಆರತಿ ಬೆಳಗುವುದು, ಬಂಧು ವರ್ಗದವರಿಗೆ ಭೋಜನವನ್ನು ಏರ್ಪಡಿಸುವುದು ಇವೇ ಮುಂತಾದ ಸಂಪ್ರದಾಯಗಳು ಇಂದಿಗೂ ಹಿಂದೂಗಳಲ್ಲಿ ಕಂಡು ಬರುತ್ತವೆ.

**ವಿವಾಹ**

ಹಿಂದೂಗಳಲ್ಲಿ ಮದುಮಗಳನ್ನು ಮದುಮಗನಿಗೆ ಕನ್ಯಾದಾನದ ರೂಪದಲ್ಲಿ ಮದುವೆ ಮಾಡಿ ಕೊಡುವ ಸಂಪ್ರದಾಯವಿದೆ. ಮದುವೆಯು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ ಅಥವ ಕೆಲವು ಜಾತಿಗಳಲ್ಲಿ ಮೊದಲೇ ನಿಶ್ಚಯಿಸಿದಂತೆ ಗಂಡಿನ ಮನೆಯಲ್ಲಾಗಲೀ ನಡೆಸುವುದು ಸಾಂಪ್ರದಾಯಕವಾಗಿದ್ದು ಇತ್ತೀಚಿನ ದಿನಗಳಲ್ಲಿ ದೇವಸ್ಥಾನಗಳಲ್ಲಿ, ಮಠಗಳಲ್ಲಿ ಇಲ್ಲವೇ ಛತ್ರಗಳಲ್ಲಿ ಬಹುತೇಕವಾಗಿ ಮದುವೆಯು ನಡೆಯುತ್ತದೆ. ಒಂದೇ ಬೆಡಗು ಅಥವ ಸಗೋತ್ರಗಳಲ್ಲಿ ವಿವಾಹ ನಿಷಿದ್ಧ. ವೀಳ್ಯದಶಾಸ್ತ್ರ ಅಥವ ನಿಶ್ಚಿತಾರ್ಥಗಳಲ್ಲಿ ಮದುವೆಯ ಪ್ರಸ್ತಾಪ ನಿಶ್ಚಿತರೂಪ ತಾಳುತ್ತದೆ. ಬ್ರಾಹ್ಮಣರಲ್ಲಿ ಹಾಗೂ ವೈದಿಕ ಸಂಪ್ರದಾಯವನ್ನನುಸರಿಸುವ ಜಾತಿಗಳಲ್ಲಿ ವರಪೂಜೆ (ವರ ಮತ್ತು ವರನ ತಂದೆ ತಾಯಿಗಳನ್ನು ಗೌರವದಿಂದ ಬರಮಾಡಿಕೊಳ್ಳುವುದು), ನಾಂದಿ (ವಧೂವರರ ಪೂರ್ವಜರನ್ನು ಆಹ್ವಾನಿಸುವುದು), ಕಂಕಣ ಧಾರಣ, ವಧೂವರರಿಗೆ ಅಕ್ಷತೆ ಹಾಕುವುದು, ಗುರುಹಿರಿಯರಿಂದ ಆಶೀರ್ವದಿಸಿದ ಮಂಗಳ ಸೂತ್ರವನ್ನು ಕಟ್ಟುವುದು, ಲಾಜಹೋಮ (ಅಗ್ನಿ ಹೋಮದಲ್ಲಿ ಭತ್ತದ ಅರಳನ್ನು ಅರ್ಪಿಸುವುದು) ಮತ್ತು ಸಪ್ತಪದಿ (ವಧೂವರರು ಪವಿತ್ರ ಅಗ್ನಿಕುಂಡದ ಸುತ್ತಲೂ ಏಳು ಹೆಜ್ಜೆಗಳನ್ನು ಕ್ರಮಿಸುವುದು) ವಿವಾಹ ಧಾರ್ಮಿಕ ವಿಧಿಗಳಲ್ಲಿ ಮುಖ್ಯವಾದುವು.

ಲಿಂಗಾಯತರು ನೆರವೇರಿಸುವ ಮದುವೆಗಳಲ್ಲಿ ಹೋಮಕ್ಕೆ ಅವಕಾಶವಿರುವುದಿಲ್ಲ. ಇದಕ್ಕೆ ಬದಲಾಗಿ ಪಂಚ ಕಳಶದ ಪ್ರತಿಷ್ಠಾಪನೆ, ಸುರಿಗೆ ಸುತ್ತುವುದು, ಅರಿಶಿನ ಧಾರಣೆ ಮುಂತಾದ ಧಾರ್ಮಿಕ ವಿಧಿಗಳನ್ನು ಆಚರಿಸುತ್ತಾರೆ. ವೀರಭದ್ರ ಕುಲದೇವತೆಯನ್ನು ಆರಾಧಿಸುವ ಕುಟುಂಬಗಳು ಮದುವೆಯ ಮೊದಲು ಗುಗ್ಗುಳ ಸೇವೆಯನ್ನು ಕೈಗೊಳ್ಳುವರು. ಇದರಲ್ಲಿಯ ನಾಲ್ಕು ಕಳಶಗಳಲ್ಲಿ ಹಾಲು, ಲೋಬಾನ ಮತ್ತಿತರ ದಾಹಕ ಪದಾರ್ಥಗಳಾದ ಗುಗ್ಗಳ ಅಥವಾ ಧೂಪ ತುಂಬಿ ಕಳಶಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವರು. ಇದು ವೀರಭದ್ರ ಮತ್ತು ಶಿವನಿಗೆ ಸಲ್ಲಿಸುವ ಪೂಜೆಯಾಗಿರುತ್ತದೆ. ಪುರವಂತರು ಈ ಸೇವೆಯನ್ನು ನೆರವೇರಿಸುವರು. ಮಂಗಳಸೂತ್ರವನ್ನು ಕಟ್ಟುವುದು, ಮತ್ತಿತರ ವಿವಾಹವಿಧಿಗಳು ಬೇರೆ ಹಿಂದೂಗಳ ವಿಧಿಗಳಂತೆಯೇ ಇರುತ್ತವೆ. ಇವರ ವಿವಾಹ ವಿಧಿಯನ್ನು ಜಂಗಮರು ನಡೆಸಿಕೊಡುತ್ತಾರೆ.

ಲಿಂಗಾಯತ ಮತ್ತಿತರ ಅನೇಕ ಜಾತಿಗಳಲ್ಲಿ ಮದುವೆಯ ಮೊದಲು ಹಾಲುಗಂಬ (ಆಲದ ಮರದ) ಕೊಂಬೆಯನ್ನು ಮದುವೆ ಮಂಟಪದಲ್ಲಿ ನಿಲ್ಲಿಸುತ್ತಾರೆ. ಮಾಂಗಲ್ಯ ಧಾರಣೆಗೆ ಮೊದಲು ಹಾಲುಗಂಬಕ್ಕೆ ವಾಡಿಕೆಯಂತೆ ಪೂಜಾವಿಧಿಗಳನ್ನು ಸಲ್ಲಿಸುತ್ತಾರೆ. ಹಾಗೂ ಸಾಂಪ್ರದಾಯಿಕ ಮದುವೆ ಹಾಡುಗಳನ್ನು ಹಾಡುತ್ತಾರೆ.

ಅನೇಕ ಜಾತಿಗಳಲ್ಲಿ ಸಾಂಪ್ರದಾಯಿಕವಾಗಿರುವ ತೆರಪದ್ಧತಿ ಇಂದಿಗೂ ಕಂಡು ಬರುತ್ತದೆ. ಪಾರಂಪಾರಿಕವಾಗಿ ಕೆಲವುಜಾತಿಗಳಲ್ಲಿ ಮಾತ್ರ ವಿವಾಹ ವಿಚ್ಛೇದನಕ್ಕೆ ಮತ್ತು ಪುನರ್ವಿವಾಹವಾಗುವುದಕ್ಕೆ ಅನಮೋದನೆಯಿದೆ. ವಿಧವೆಯರು

ಪುನರ್ವಿವಾಹವಾಗುವುದಕ್ಕೆ ಉಡಿಕೆ ಎಂದು ಕರೆಯುತ್ತಾರೆ. ಇದರಲ್ಲಿ ಮುತ್ತೈದೆಯರ ಪಾತ್ರವಿರುವುದಿಲ್ಲ. ಇದು ವಿದುರ ಮತ್ತು ವಿಧವೆಯರ ಸಮ್ಮುಖದಲ್ಲಿ ನಡೆಯುತ್ತದೆ. ಹಿಂದೂ ವಿವಾಹ ಕಾಯಿದೆಯನ್ವಯ ಸರಿಯಾದ ಸಂದರ್ಭಗಳಲ್ಲಿ ನ್ಯಾಯಾಲಯದ ಮೂಲಕ ವಿವಾಹ ವಿಚ್ಛೇದನವನ್ನು ಪಡೆಯಲು ಅವಕಾಶವಿದೆ.

ಇತ್ತೀಚೆಗೆ ಕೆಲವೆಡೆ ಸಾಮೂಹಿಕ ವಿವಾಹಗಳೂ ಜನಪ್ರಿಯವಾಗುತ್ತಿವೆ.

ಬೇರೆ ಬೇರೆ ಜಾತಿಗಳ ಅಥವಾ ಬೇರೆ ಬೇರೆ ಧಾರ್ಮಿಕರ ನಡುವೆ ವಿವಾಹ ಸಂಬಂಧ ಬೆಳೆಸುವುದಕ್ಕೆ ಅಂತರ್ಜಾತಿಯ ವಿವಾಹವೆನ್ನುತ್ತಾರೆ. ಪರಿಶಿಷ್ಟ ಜಾತಿಯವರ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರವು ವಿವಾಹವಾದ ದಂಪತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ ಸಂದರ್ಭದಲ್ಲಿ ಅವರ ಸಾಮಾಜಿಕ ಭದ್ರತೆಗಾಗಿ ೫,೦೦೦ ರೂಗಳನ್ನು (೨,೦೦೦ರೂ. ಗಳ ನಗದು ಮತ್ತು ೩,೦೦೦ ರೂಗಳ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರ) ಪ್ರೋತ್ಸಾಹ ಧನವನ್ನು ನೀಡುತ್ತಿದೆ (ವಿವರಗಳಿಗೆ ೧೬ನೇ ಅಧ್ಯಾಯವನ್ನು ನೋಡಿರಿ).

ಮುಸ್ಲಿಮರಲ್ಲಿ ವಿವಾಹವು ಒಂದು ಸಾಮಾಜಿಕ ಒಪ್ಪಂದವಾಗಿದ್ದು ಕಾಯಿದೆಯಂತೆ ವಿಧಿವತ್ತಾಗಿ ನಡೆಸಲ್ಪಡುತ್ತದೆ. ಮದುವೆ ದಿನ ಮದುಮಗನಿಗೆ ವಿವಾಹದ ಬಟ್ಟೆಗಳನ್ನು ತೊಡಿಸಿ, ರುಮಾಲಿನಿಂದ ಇಳಿಬಿಟ್ಟ 'ಸೇಹರಾ' ಅಥವಾ ಹೂಮಾಲೆಗಳಿಂದ ಮುಖವನ್ನು ಮುಚ್ಚುವಂತೆ ಮಾಡುವರು. ನಂತರ ಮದುಮಗನನ್ನು ಬಂಧು ಮಿತ್ರರೊಂದಿಗೆ ಮೆರವಣಿಗೆಯಲ್ಲಿ ಮದುವೆ ಮಂಟಪಕ್ಕೆ ಕರೆತರುವರು. ಮದುವೆಯ ಮಂಟಪದಲ್ಲಿ ಹೆಣ್ಣುಗಂಡಿನ ಎರಡು ಕಡೆಯವರು ಕುಳಿತುಕೊಂಡ ಮೇಲೆ ವಿವಾಹ ವಿಧಿಗಳು ಆರಂಭವಾಗುವುವು. ವಿವಾಹನೆರವೇರಿಸಲು ಖಾಜಿಯು ಗಂಡು ಮತ್ತು ಹೆಣ್ಣಿನ ಒಪ್ಪಿಗೆ (ಕಬೂಲ್) ಪಡೆಯುವನು. ಸಾಕ್ಷಿಗಳ ಸಮ್ಮುಖದಲ್ಲಿ ನಡೆದ ಈ ಒಪ್ಪಂದ, ಇದಕ್ಕಾಗಿ ಇರುವ ಪುಸ್ತಕದಲ್ಲಿ ದಾಖಲಾಗುತ್ತದೆ. ಇದಕ್ಕೆ ದಫ್ತರ್ ಎನ್ನುತ್ತಾರೆ. ಇದರ ಮೇಲೆ ಸಾಕ್ಷಿಗಳ ಸಹಿ ಪಡೆಯುತ್ತಾರೆ. ಇವರಿಗೆ 'ಗವಾ' ಎನ್ನುತ್ತಾರೆ. ವರನು ವಧುವಿಗೆ ವಿಶಿಷ್ಟ ಉಡುಗೊರೆ ಅಥವ ಮೆಹರ್‌ರನ್ನು ಕೊಡುವನು. ಆಗ ಖಾಜಿಯು 'ನಿಕಾ' ಓದುತ್ತಾರೆ. ಹಿಂದೂಗಳ ಸಂಪ್ರದಾಯದಂತೆ ಲಚ್ಛಾ (ಕರಿಮಣಿ) ಉಪಯೋಗಿಸುತ್ತಾರೆ. ಆದರೆ ಇದನ್ನು ವರನಿಗೆ ಬದಲಾಗಿ ವಿವಾಹಿತ ಹಿರಿಯ ಮಹಿಳೆಯೊಬ್ಬಳು ವಧುವಿನ ಕುತ್ತಿಗೆಗೆ ಕಟ್ಟುವಳು. ಮುಸಲ್ಮಾನರ ಮದುವೆಗಳಲ್ಲಿ ಮೂರು ಅಂಶಗಳೆಂದರೆ, ಗಂಡು ಹೆಣ್ಣಿನ ಕಡೆಯವರ ಒಪ್ಪಿಗೆ, ಸಾಕ್ಷಾದಾರ ರುಜುವಾತು ಮತ್ತು ಮದುವೆಯ ನಿಶ್ಚಯಗಳು. ಮದುವೆಯಾದ ನಂತರ ಮೊದಲನೇ ಶುಕ್ರವಾರ ಹುಡುಗನು, ಹುಡುಗಿಯ ಮನೆಗೆ ಔತಣಕ್ಕೆ ಹೋಗುತ್ತಾನೆ. ನಂತರ ಮುಂದಿನ ಮೂರು ಶುಕ್ರವಾರಗಳು ಹತ್ತಿರದ ಸಂಬಂಧಿಕರಲ್ಲಿ ಔತಣಕ್ಕೆ ಆಮಂತ್ರಿತನಾಗುತ್ತಾನೆ. ಇದನ್ನು ಚಾರ್ ಜುಮ್ಮಾ ಎನ್ನುತ್ತಾರೆ.

ಕ್ರೈಸ್ತರಲ್ಲಿ ಮದುವೆಯಾಗುವ ಹೆಣ್ಣು ಮತ್ತು ಗಂಡಿನ ಕಡೆಯವರು ಹೆಣ್ಣಿನ ಮನೆಯಲ್ಲಿ ಸೇರಿ ಮಾತುಕತೆಯಾದ ನಂತರ ನಿಶ್ಚಿತಾರ್ಥವನ್ನು ಗಂಡಿನ ಕಡೆಯವರ ಪ್ಯಾರಿಷ್ ಚರ್ಚಿನಲ್ಲಿ ಏರ್ಪಡಿಸುತ್ತಾರೆ. ನಿಶ್ಚಿತಾರ್ಥದಲ್ಲಿ ಹೆಣ್ಣು ಗಂಡುಗಳು ಉಂಗುರಗಳನ್ನಾಗಲೀ ಅಥವಾ ಯಾವುದಾದರೂ ಅಭರಣಗಳನ್ನಾಗಲೀ ಪರಸ್ಪರ ಬದಲಾಯಿಸುತ್ತಾರೆ. ಮದುವೆಯ ವಿಷಯವನ್ನು ಮುಂದೆ ಒದಗಬಹುದಾದ ಸಮಸ್ಯೆಗಳನ್ನು ಬಗೆಹರಿಸಲು ಚರ್ಚಿನಲ್ಲಿ ಪ್ರಾರ್ಥನೆಯ ನಂತರ ಪ್ರಕಟಿಸುತ್ತಾರೆ. ಇದನ್ನು ಬಾನ್ ಎನ್ನುತ್ತಾರೆ. ಮದುವೆಯ ದಿನ ಗಂಡಿನ ಪ್ಯಾರಿಷ್ ಚರ್ಚಿನಲ್ಲಿ ಮದುವೆಯನ್ನು ಪಾದ್ರಿಗಳು ವಿಧಿವತ್ತಾಗಿ ನೆರವೇರಿಸುತ್ತಾರೆ. ಉಂಗುರಗಳನ್ನು ಪರಸ್ಪರ ಬದಲಾಯಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ತಾಳಿ ಕಟ್ಟುವ ಸಂಪ್ರದಾಯವೂ ರೂಢಿಗೆ ಬಂದಿದೆ. ಮದುವೆಯ ಪುಸ್ತಕದಲ್ಲಿ ಸಾಕ್ಷಿದಾರರೊಂದಿಗೆ ಸಹಿ ಮಾಡುತ್ತಾರೆ. ಮದುವೆ ಸಂಪ್ರದಾಯದ ನಂತರ ಊಟ ಮತ್ತು ಸಂಗೀತಗಳೊಡನೆ ಸಮಾರಂಭವು ಮುಕ್ತಾಯಗೊಳ್ಳುತ್ತದೆ.

ಭಾರತ ಸರ್ಕಾರದ ವಿವಾಹ ಕಾಯಿದೆಯನ್ವಯ ಎಲ್ಲರೂ ವಿವಾಹಗಳನ್ನು ಕಡ್ಡಾಯವಾಗಿ ನೊಂದಣಿ ಮಾಡಬೇಕು. ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ನೋಂದಣಿಯಾಗಿರುವ ದತ್ತಕ ಸ್ವೀಕಾರ ಪತ್ರಗಳು, ವಿವಾಹಗಳು ಹಾಗೂ ವಿವಾಹ ವಿಚ್ಛೇದನ ಪತ್ರಗಳ ಮಾಹಿತಿಯನ್ನು ಈ ಮುಂದಿನ ಕೋಷ್ಟಕ ೩.೧೭ರಲ್ಲಿ ಕೊಡಲಾಗಿದೆ.

**ಶವ ಸಂಸ್ಕಾರ ಪದ್ಧತಿ**

ಹಿಂದೂ ಧರ್ಮದ ಅನುಯಾಯಿಗಳಲ್ಲಿ ಆಯಾ ಜಾತಿ ಸಂಪ್ರದಾಯದ ಅನುಗುಣವಾಗಿ ಶವವನ್ನು ದಹನ ಮಾಡುವುದು ಹಾಗೂ ಹೂಳುವ ಪದ್ಧತಿಗಳೆರಡೂ ರೂಢಿಯಲ್ಲಿದೆ. ಬ್ರಾಹ್ಮಣರು ಹಾಗೂ ಇತರ ವೈದಿಕ ಪದ್ಧತಿಯ

**ಕೋಷ್ಟಕ ೩.೧೭**

**೧೯೯೦-೯೧ ರಿಂದ ೧೯೯೪-೯೫ ರವರೆಗಿನ ವಾರ್ಷಿಕ ಸಾಲುಗಳಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ದತ್ತಕ ಸ್ವೀಕಾರ ಪತ್ರಗಳು (ಎ) ವಿವಾಹಗಳು (ಬಿ) ಹಾಗೂ ವಿವಾಹ ವಿಚ್ಛೇದನ ಪತ್ರಗಳು (ಸಿ) ನೋಂದಣಿಯಾಗಿರುವ ಅಂಕಿ ಅಂಶಗಳನ್ನು ಇಲ್ಲಿ ನೀಡಲಾಗಿದೆ.**

| ತಾಲೂಕುಗಳು | ೧೯೯೦-೯೧ | | | ೧೯೯೧-೯೨ | | | ೧೯೯೨-೯೩ | | | ೧೯೯೩-೯೪ | | | ೧೯೯೪-೯೫ | | |
|---|---|---|---|---|---|---|---|---|---|---|---|---|---|---|---|
| | ಎ | ಬಿ | ಸಿ | ಎ | ಬಿ | ಸಿ | ಎ | ಬಿ | ಸಿ | ಎ | ಬಿ | ಸಿ | ಎ | ಬಿ | ಸಿ |
| ೧ ಆಳಂದ | - | ೬ | - | ೨ | ೧೦ | - | ೧ | ೧ | - | ೧ | ೪ | - | - | ೧೩ | - |
| ೨ ಅಫ್‌ಜಲ್‌ಪುರ | ೨ | - | - | ೩ | ೧ | - | ೧ | ೧ | - | ೨ | ೨ | - | ೧ | ೧ | - |
| ೩ ಚಿಂಚೋಳಿ | - | - | - | - | - | - | - | - | - | - | - | - | - | - | - |
| ೪ ಚಿತ್ತಾಪುರ | ೧ | ೧೭ | ೧ | ೧ | ೨೬ | - | ೭ | ೧೭ | - | ೨ | - | ೩ | ೨ | ೪ | - |
| ೫ ಗುಲಬರ್ಗಾ | ೬ | ೭೪ | - | ೩ | ೧೧೪ | - | ೬ | ೧೨೬ | - | ೪ | ೧೮೪ | - | ೪ | ೧೩೧ | - |
| ೬ ಜೇವರ್ಗಿ | ೩ | ೩ | - | - | ೩ | - | - | ೧ | - | - | ೪ | - | - | ೫ | - |
| ೭ ಸೇಡಂ | ೧ | ೭ | - | ೧ | ೫ | - | ೧ | ೫ | - | ೨ | ೮ | - | ೪ | ೧೦ | - |
| ೮ ಶಹಾಪುರ | ೨ | ೫ | - | ೨ | ೩೯೦ | - | ೩ | ೭ | ೧ | ೩ | ೧೫ | - | ೧ | ೧೬ | - |
| ೯ ಸುರಪುರ | ೩ | ೩೬ | - | ೪ | ೧೨೩ | - | ೪ | ೧೨ | - | ೭ | ೮ | - | ೧ | ೧೬ | - |
| ೧೦ ಯಾದಗಿರಿ | ೫ | ೩ | - | ೨ | ೪ | - | ೨ | ೧೦ | - | - | ೮ | ೧ | - | ೧೫ | - |

**ಸೂಚನೆ :** ಖಾಲಿ ಬಿಟ್ಟಿರುವ ಜಾಗಗಳು ನೋಂದಣಿಯಾಗಿಲ್ಲವೆಂದು ಸೂಚಿಸುತ್ತದೆ.

ಅನುಯಾಯಿಗಳಲ್ಲಿ ಸಾಯುವುದಕ್ಕೆ ಮುಂಚೆ ಗಂಗಾ ಜಲವನ್ನು ಬಿಡುವುದು ರೂಢಿಯಲ್ಲಿದೆ. ಸಾವು ಸಂಭವಿಸಿರುವ ಮನೆಯ ಮುಂಭಾಗದಲ್ಲಿ ಬೆಂಕಿ ಹಾಕಿರುತ್ತಾರೆ. ಶವವನ್ನು ದರ್ಬೆಹುಲ್ಲು ಹಾಸಿ ಮಲಗಿಸುತ್ತಾರೆ. ನಂತರ ಬಿಳಿ ಬಟ್ಟೆಯಿಂದ ಸುತ್ತಿ ನೀರಿನಿಂದ ತೊಳೆದು ಸ್ಮಶಾನಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ. ಸಾಂಪ್ರದಾಯಿಕವಾಗಿ ವಾಹಕರು ಹೆಗಲಮೇಲೆ ಹೊತ್ತು ಶವವನ್ನು ಸಾಗಿಸುವುದು ರೂಢಿಯಲ್ಲಿದ್ದರೂ ನಗರ ಪ್ರದೇಶಗಳಲ್ಲಿ ಹಾಗೂ ಲಭ್ಯವಿರುವ ಕಡೆ ವಾಹನಗಳಲ್ಲಿ ಸಾಗಿಸುವುದೂ ಉಂಟು. ಮೃತರ ಹಿರಿಯ ಮಗನು ಅಗ್ನಿ ಸಂಸ್ಕಾರ ಮಾಡುವುದು ರೂಢಿಯಲ್ಲಿದೆ. ಶವ ಸಂಸ್ಕಾರ ಮುಗಿದ ನಂತರ ಮನೆಗೆ ಹಿಂತಿರುಗಿದ ಶವಸಂಸ್ಕಾರ ಮಾಡಿದವರು ಶವವನ್ನು ಮಲಗಿಸಿದ್ದ ಜಾಗದಲ್ಲಿ ಹಚ್ಚಿಡಲಾದ ದೀಪವನ್ನು ನೋಡುತ್ತಾರೆ. ಉಳಿದ ಹನ್ನೆರಡು ದಿನಗಳೂ ಆ ದೀಪ ನಂದದಂತೆ ನೋಡಿಕೊಳ್ಳುತ್ತಾರೆ. ಮರಣದ ಮೂರನೆಯ ದಿನದಂದು ಶವದ ಅಸ್ಥಿ ಮತ್ತು ಬೂದಿಗಳನ್ನು ಪವಿತ್ರ ನದಿಯಲ್ಲಿ ವಿಸರ್ಜಿಸುವುದು ರೂಢಿಯಲ್ಲಿದೆ. ಸಂಸ್ಕಾರ ವಿಧಿಗಳನ್ನು ಮೂರನೇ, ಐದನೆ, ಏಳನೇ, ಅಥವ ಒಂಭತ್ತನೇ ದಿನದಿಂದ ಆರಂಭಿಸಿ ಹನ್ನೆರಡನೆಯ ದಿನದಂದು 'ಸಪಿಂಡೀಕರಣ' ವಿಧಿಯನ್ನು ಮಾಡಿ ಹದಿಮೂರನೇಯ ದಿನ ವೈಕುಂಠ ಸಮಾರಾಧನೆಯನ್ನು ಮಾಡಿ ಬಂಧು-ಮಿತ್ರರಿಗೆ ಭೋಜನ ಏರ್ಪಡಿಸುತ್ತಾರೆ. ಮೊದಲ ವರ್ಷದ ಪ್ರತಿ ಮಾಸದಲ್ಲೂ ಮಾಸಿಕಗಳನ್ನು ಆಚರಿಸಿ ವರ್ಷದ ಕೊನೆಯಲ್ಲಿ ವರ್ಷಾಬ್ದಿಕವನ್ನು ಮಾಡಿ ನಂತರದಲ್ಲಿ ಪ್ರತಿ ವರ್ಷ ಸತ್ತ ದಿನ ಶ್ರಾದ್ಧವನ್ನು ಮಾಡುವುದು ರೂಢಿಯಲ್ಲಿದೆ. ಸರ್ವಪಿತೃ ಅಮಾವಾಸ್ಯೆಯ ದಿನ ಮೃತ ಬಂಧುಗಳಿಗೆ ತರ್ಪಣ ಕೊಡುತ್ತಾರೆ. ಸಾಮಾನ್ಯವಾಗಿ ಸನ್ಯಾಸಿಗಳ ಹಾಗೂ ಮಕ್ಕಳ ಶವಗಳನ್ನು ಹೂಳುತ್ತಾರೆ.

ಹೂಳುವ ಪದ್ಧತಿಯಿರುವ ಹಿಂದೂಗಳಲ್ಲಿ ಆಯಾ ಜಾತಿಯ ಸಂಪ್ರದಾಯದಕ್ಕನುಗುಣವಾಗಿ ಕೂರಿಸಿ ಅಥವಾ ಒಂದು ನಿಶ್ಚಿತ ದಿಕ್ಕಿಗೆ ತಲೆಯನ್ನು ಮಾಡಿ ಮಲಗಿಸಿ ಹೂಳುವುದು ರೂಢಿಯಲ್ಲಿದೆ. ಮರಣದ ಮೂರನೇ ದಿನ ಹಾಲು ಮತ್ತು ಬೇಯಿಸಿ ತಯಾರಿಸಿದ ಆಹಾರವನ್ನು ಹೂಳಿದ ಜಾಗದಲ್ಲಿಡುವುದೂ ರೂಡಿಯಲ್ಲಿದೆ. ಆಯಾ ಜಾತಿಯ ಸಂಪ್ರದಾಯಕ್ಕನುಗುಣವಾಗಿ ಹನ್ನೊಂದು, ಹದಿಮೂರು ಅಥವಾ ಹದಿನಾಲ್ಕನೇ ದಿನ ಬಂಧು ಮಿತ್ರರನ್ನು ಕರೆದು ಊಟ ಹಾಕುವುದು ರೂಢಿಯಲ್ಲಿದೆ. ಮರಣ ಹೊಂದಿದ ಪೂರ್ವಜರಿಗೆ ಸರ್ವಪೀತೃ ಅಮಾವಾಸ್ಯೆಯಂದು ಎಡೆಯಿಡುವ ಪದ್ಧತಿಯೂ ಕೆಲವರಲ್ಲಿ ಇದೆ.

ಲಿಂಗಾಯತರಲ್ಲಿ ಶವಗಳನ್ನು ಹೂಳುತ್ತಾರೆ. ಸಾವು ಸಂಭವಿಸುತ್ತಿರುವ ವ್ಯಕ್ತಿಯನ್ನು ಬಿಳಿವಸ್ತ್ರದ ಮೇಲೆ ಮಲಗಿಸಿ ಪಾದೋದಕವನ್ನು ಬಾಯಿಗೆ ಹಾಕಿ ದೇಹಕ್ಕೆ ವಿಭೂತಿಯನ್ನು ಸವರುತ್ತಾರೆ. ಶವವನ್ನು ಕಾಲು ಮಡಿಸಿ, ಕೂರಿಸಿ, ಅಲಂಕರಿಸಿ ಭಜನೆ ಮಾಡುತ್ತಾ ರುದ್ರ ಭೂಮಿಗೆ ಸಿಂಗರಿಸಿದ ವಿಮಾನದಲ್ಲಿ ಕೊಂಡೊಯ್ಯುವರು. ಶವವನ್ನು ಕುಳಿತ ಭಂಗಿಯಲ್ಲಿ ಪೂರ್ವ ಅಥವ ಉತ್ತರಕ್ಕೆ ಮುಖ ಮಾಡಿ ಹೂಳುವುದು ರೂಢಿಯಲ್ಲಿದೆ. ವೀರಶೈವ ಜಂಗಮರೇ ಅಂತ್ಯಕ್ರಿಯೆಯನ್ನು ನಿರ್ವಹಿಸುತ್ತಾರೆ. ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ರುದ್ರ ಭೂಮಿಗೆ ತೆರಳಿದ್ದವರು ಮೃತರ ಮನೆಗೆ ಬಂದು ದೀಪವನ್ನು ನೋಡಿ ಹಿಂದಿರುಗುತ್ತಾರೆ. ಮರಣವಾದ ಹನ್ನೊಂದನೇಯ ದಿನ ಶಿವಗಣಾರಾಧನೆಯನ್ನು ಆಚರಿಸಿ ಬಂಧು ಮಿತ್ರರಿಗೆ ಭೋಜನವೇರ್ಪಡಿಸುವುದು ರೂಢಿಯಲ್ಲಿದೆ.

ಮುಸಲ್ಮಾನರಲ್ಲಿ ಸಾಯುವಾಗ 'ಕಲೀಮಾ' (ಕುರಾನಪಠಣ) ಪಡಿಸಿ ಬಾಯಿಗೆ ನೀರು ಹಾಕುತ್ತಾರೆ. ಸತ್ತ ನಂತರ ಶವವನ್ನು ಸ್ನಾನದಿಂದ ಶುದ್ಧೀಕರಿಸಿ ಸ್ವಚ್ಛತೆಗೆ ಹೆಚ್ಚು ಗಮನ ಕೊಟ್ಟು ಪುರಷನಾದರೆ ಬಿಳಿ ಬಟ್ಟೆಯನ್ನು ಸ್ತ್ರೀಯರಾದರೆ ಕೆಂಪು ಬಟ್ಟೆಯನ್ನು ತೊಡಿಸಿ ಸುಗಂಧವನ್ನು ಬಟ್ಟೆಗೆ ಹಚ್ಚಿ ಕಣ್ಣಿಗೆ ಸುರ್ಮ (ಕಾಡಿಗೆ) ಹಚ್ಚುತ್ತಾರೆ. ಸ್ತ್ರೀಯರಾದರೆ ಮದುವೆ ವಧುವನ್ನು ಅಲಂಕರಿಸುವಂತೆ ಅಲಂಕರಿಸುತ್ತಾರೆ. ಈ ಸಂದರ್ಭದಲ್ಲಿ ಹೊರಗಾದ ಹೆಂಗಸರು ಭಾಗವಹಿಸುವಂತಿಲ್ಲ. ಶವದ ಸುತ್ತ ಬಂಧು ಮಿತ್ರರು ಕುಳಿತು ಕುರಾನ್ ಪಠಣ ಮಾಡುತ್ತಾರೆ. ಶವವನ್ನು ಕೊಂಡೊಯ್ಯುವಾಗ ಮೊದಲು ಸಂಬಂಧಿಕರೇ ಹೆಗಲನ್ನು ಕೊಡುತ್ತಾರೆ. ನಂತರ ಇತರರು ಹೊರುತ್ತಾರೆ. ಶವವನ್ನು ಕೊಂಡೊಯ್ಯುವಾಗ ಎದುರಿಗೆ ಸ್ವಮತಸ್ಥರು ಬಂದರೆ ಸಾಮಾನ್ಯವಾಗಿ ಅಂತಸ್ತಿನ ಭೇದವಿಲ್ಲದೆ ಸ್ವಲ್ಪ ದೂರ ಹೆಗಲನ್ನು ಕೊಡುತ್ತಾರೆ. ಶವಸಂಸ್ಕಾರಕ್ಕೆ ಮೊದಲು ನಮಾಜ್ ಮಾಡುವರು. ಇದನ್ನು ನಮಾಜೀಜನಾಜ ಎಂದು ಕರೆಯುತ್ತಾರೆ. ತಲೆಯನ್ನು ಉತ್ತರ ದಿಕ್ಕಿಗೂ ಮುಖವನ್ನು ಮೆಕ್ಕಾ ಕಡೆಗೂ ಮಾಡಿ ಶವವನ್ನು ಹೂಳುತ್ತಾರೆ. ಶವಸಂಸ್ಕಾರದ ನಂತರ ಅಲ್ಲಿದ್ದವರಿಗೆ ಉತ್ತುತ್ತಿಯನ್ನು

ಹಂಚುತ್ತಾರೆ. ಸ್ಮಶಾನದಿಂದ ೪೦ ಹೆಜ್ಜೆ ಬಂದ ನಂತರ ಗೋರಿಯ ಕಡೆ ಮುಖ ಮಾಡಿಕೊಂಡು ಪ್ರಾರ್ಥನೆಯನ್ನು ಮಾಡಿ ಮೃತರಿಗೆ ಅಂತಿಮ ಗೌರವವನ್ನು ಸಲ್ಲಿಸುತ್ತಾರೆ. ಮೂರನೆಯ ದಿನ ಮುಂಜಾನೆ ಬಂಧು ಮಿತ್ರರು ಮಸೀದಿಗೆ ಹೋಗಿ ನಮಾಜ್ ಮಾಡಿ ಅನಂತರ ಫಾತೆಹಾ ಖಾನಿ (ಪ್ರಾರ್ಥನೆ)ಯನ್ನು ಸಲ್ಲಿಸಿ ಅಲ್ಲಿದ್ದವರಿಗೆ ಸಿಹಿ ಹಂಚಿ ಸ್ಮಶಾನಕ್ಕೆ ಹೋಗಿ ಸತ್ತವರ ಆತ್ಮಕ್ಕೆ ಶಾಂತಿ ಕೋರುತ್ತಾರೆ. ಹಾಗೆಯೇ ಸತ್ತ ಹತ್ತನೆಯ, ಇಪ್ಪತ್ತನೆಯ ಮತ್ತು ನಲವತ್ತನೆಯ ದಿನ ಪ್ರಾರ್ಥನೆ ಮಾಡುತ್ತಾರೆ. ನಲವತ್ತನೆಯ ದಿನ ಬಂಧು ಮಿತ್ರರಿಗೆ ಹಾಗೂ ಬಡಬಗ್ಗರಿಗೆ ಊಟ ಹಾಕಿ ದಾನ ಧರ್ಮವನ್ನು ಮಾಡುತ್ತಾರೆ. ಸತ್ತ ಮೊದಲನೇ ವರ್ಷದ ದಿನ ಬಂಧು ಮಿತ್ರರಿಗೆ ಮತ್ತು ಬಡಬಗ್ಗರಿಗೆ ಸಂತರ್ಪಣೆ ಮಾಡುತ್ತಾರೆ.

ಕ್ರೈಸ್ತರಲ್ಲಿ ಸಾಯುವ ಸಮಯಕ್ಕೆ ಪ್ಯಾರಿಷ್ ಪಾದ್ರಿಯನ್ನು ಕರೆಸುತ್ತಾರೆ. ರೋಮನ್ ಕ್ಯಾಥೋಲಿಕರಲ್ಲಿ ಪಾದ್ರಿಯು ಸಾಯುತ್ತಿರುವವರ ಶರೀರಕ್ಕೆ ಪವಿತ್ರಗೊಳಿಸಿದ ಎಣ್ಣೆಯನ್ನು ಸವರುತ್ತಾರೆ. ಸತ್ತ ನಂತರ ದೇಹವನ್ನು ತೊಳೆದು ಅಲಂಕರಿಸಿ ಒಂದು ಎತ್ತರವಾದ ಜಾಗದಲ್ಲಿಡುತ್ತಾರೆ. ಪಕ್ಕದಲ್ಲಿ ಮೇಣದ ಬತ್ತಿ ಉರಿಯುತ್ತಿರುತ್ತದೆ. ಮೇಲುಗಡೆ ಶಿಲುಬೆಯಿರುತ್ತದೆ. ಪವಿತ್ರವಾದ ನೀರನ್ನು ಕಾಲು ಬಳಿ ಇಟ್ಟಿರುತ್ತಾರೆ. ಬಂದವರೆಲ್ಲರೂ ಪವಿತ್ರ ನೀರನ್ನು ಶರೀರದ ಮೇಲೆ ಚಿಮುಕಿಸುತ್ತಾರೆ. ಅನುಕೂಲವಿರುವವರು, ಕಪ್ಪು ಬಟ್ಟೆ ತೊಟ್ಟ ಶವ ಹೊರುವವರನ್ನು (ಪಾಲ್‌ಬೇರರ್ಸ್) ಕರೆಸಿ ಶವವನ್ನು ಶವದ ಪೆಟ್ಟಿಗೆಯಲ್ಲಿರಿಸಿ ಪ್ಯಾರಿಷ್ ಚರ್ಚಿಗೆ ಕೊಂಡೊಯ್ಯುತ್ತಾರೆ. ಇಲ್ಲದವರು ಶವದ ಪೆಟ್ಟಿಗೆಯನ್ನು ಕುದುರೆ ಗಾಡಿಯಲ್ಲಿ, ಚರ್ಚಿಗೆ ಕೊಂಡೊಯ್ಯುತ್ತಾರೆ. ಅಲ್ಲಿ ಪಾದ್ರಿಯು ಮೃತದೇಹದ ಮೇಲೆ ಪವಿತ್ರ ನೀರನ್ನು ಚಿಮುಕಿಸಿ ಆಶೀರ್ವದಿಸುತ್ತಾನೆ. ನಂತರ ಶವವನ್ನು ಹೂಳುತ್ತಾರೆ. ರೋಮನ್ ಕ್ಯಾಥೋಲಿಕ್ ಜನಾಂಗದವರಲ್ಲಿ ಸತ್ತವರಿಗೆ ಸತ್ತದಿನ, ಮೂರನೇಯ ದಿನ, ಏಳನೇಯ ದಿನ ಹಾಗೂ ಮುವತ್ತನೇಯದಿನ ಚರ್ಚಿನಲ್ಲಿ ವಿಶೇಷ ಪ್ರಾರ್ಥನೆಯನ್ನು ಏರ್ಪಡಿಸುತ್ತಾರೆ. ಪ್ರಾಟೆಸ್ಟೆಂಟರಲ್ಲಿ ಹತ್ತನೇಯ ದಿನ ಸತ್ತವರಿಗೆ ವಿಶೇಷ ಪ್ರಾರ್ಥನೆಯಿರುತ್ತದೆ.

**ಮನೆಗಳು**

ಗುಲಬರ್ಗಾ ಜಿಲ್ಲೆಯಲ್ಲಿ ವಿವಿಧ ರೀತಿಯ ರಚನೆಗಳ ಮನೆಗಳನ್ನು ಕಾಣಬಹುದಾಗಿದೆ. ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗಳ ಪ್ರಭಾವದಿಂದ ಇತ್ತೀಚಿಗೆ ನಗರ ಪ್ರದೇಶಗಳಲ್ಲಿ ಮನೆಗಳ ರಚನೆಯಲ್ಲಿ ಹಲವಾರು ಬದಲಾವಣೆಗಳು ಕಂಡು ಬಂದರೂ, ಗ್ರಾಮಾಂತರ ಪ್ರದೇಶಗಳಲ್ಲಿ ಈ ಬದಲಾವಣೆಗಳು ತೀವ್ರವಾಗಿಲ್ಲದೆ ಅನೇಕ ಹಿಂದಿನ ಶೈಲಿಯ ಮನೆಗಳನ್ನು ಕಾಣಬಹುದಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸುವಾಗ ಯೋಜನೆ ಅಥವ ಶುಚಿತ್ವಕ್ಕೆ ಮಹತ್ವವನ್ನು ನೀಡುವದು ಬಹಳ ಅಪರೂಪ. ಹಿಂದಿನ ಶೈಲಿಯ ಮನೆಗಳಲ್ಲಿ ಒಂದೇ ಗೋಡೆಯಿರುವ ಜಂಟಿ ಮನೆಗಳೇ ಹೆಚ್ಚಾಗಿದ್ದು ಮನೆಯ ಮುಂಭಾಗದ ಪಾರ್ಶ್ವದಲ್ಲಿ ಕಟ್ಟೆಗಳು (ಚಾವಣಿ) ಒಳಗೆ ಜಗಲಿ (ಝುಳಜಿ) ಪಡಸಾಲೆ, ನಡುಮನೆ (ಮಝುಗರ್), ಅಡಿಗೆ ಮನೆ, ದೇವರ ಮನೆ, ಅಡಿಗೆ ಮನೆಯ ಒಂದು ಪಾರ್ಶ್ವದಲ್ಲಿ ಸ್ನಾನದ ಬಚ್ಚಲು, ದೇವರ ಮನೆಯಲ್ಲಿ ದೇವರ ಜಗಲಿ, ಅನುಕೂಲಕ್ಕೆ ತಕ್ಕಂತೆ ಮನೆಯ ಮುಂಭಾಗ ಅಥವಾ ಹಿಂಭಾಗದಲ್ಲಿ ದನದ ಕೊಟ್ಟಿಗೆ ಹಾಗೂ ಕೊಠಡಿಗಳನ್ನು ಕಾಣಬಹುದಾಗಿದೆ. ಹಲವು ಮನೆಗಳ ತಲೆ ಬಾಗಿಲುಗಳ ಎರಡು ಬದಿಯಲ್ಲಿ ಕುದುರೆಗಳ ಮುಖಗಳಿರುವುದು ಕಂಡು ಬರುತ್ತದೆ. ಜಿಲ್ಲೆಯಲ್ಲಿ ಹಲವಾರು ದೊಡ್ಡ ಮನೆಗಳಿವೆ. ಆಳಂದ ತಾಲೂಕಿನ ಚಿಂಚನಸೂರಿನಲ್ಲಿ ಸುಮಾರು ೧೦೦ ಕೊಠಡಿಗಳುಳ್ಳ ಭವ್ಯ ಮನೆಯೊಂದಿರುವುದನ್ನು ಇಲ್ಲಿ ಉದಾಹರಿಸಬಹುದಾಗಿದೆ. ಹಿಂದಿನ ಕಾಲದ ಮನೆಗಳಲ್ಲಿ ಕಲ್ಲು ಮತ್ತು ಹಾಳು ಮಣ್ಣಿನ ಗೋಡೆ, ಮರದ ಜಂತಿಗೆ ಅಡ್ಡಲಾಗಿ ಮರದ ತೊಲೆ ಮತ್ತು ಇದರ ಮೇಲೆ ಮರದ ಚಿಕ್ಕಫಳಿ (ರಿಪೀಸ್) ಹಾಗೂ ಬೇವಿನ ಸೊಪ್ಪು, ಮೇಲೆ ಮಣ್ಣಿನ ಮೇಲ್ಮುದ್ದೆಯ ಮೇಲ್ಛಾವಣಿ ಮತ್ತು ಕೆಲವು ಮನೆಗಳಲ್ಲಿ ಮೇಲ್ಛಾವಣಿಗೆ ಮೇಲ್ಮುದ್ದೆಗೆ ಬದಲಾಗಿ ಒಡೆದ ಪರಸಿಗಳನ್ನು ಕಾಣಬಹುದು. ಶಹಾಬಾದ್ ಅಥವಾ ಕಡಪ ಕಲ್ಲಿನ ನೆಲಗಳೂ ಮತ್ತು ತೇಗದ ಮರದ ಬಾಗಿಲು ಮತ್ತು ಕಿಟಕಿಗಳಿಂದ ಕೂಡಿದ ನವೀನ ಶೈಲಿಯಲ್ಲಿ ಮನೆಗಳನ್ನು ಕಟ್ಟಿಕೊಳ್ಳುತ್ತಿರುವುದೂ ಉಂಟು. ಜಿಲ್ಲೆಯ ಅನೇಕ ಕಡೆಗಳಲ್ಲಿ ಇಂದಿಗೂ ಜೋಪಡಿ ಮನೆಗಳನ್ನು ಕಾಣಬಹುದಾಗಿದೆ. ಗ್ರಾಮೀಣ ಪ್ರದೇಶದ ಹಲವು ಮನೆಗಳಲ್ಲಿ ಹಗೇವು (ಕೂಚ)ಗಳನ್ನು ಕಾಣಬಹುದು.

ಮುಸಲ್ಮಾನರ ಮನೆಯ ಹೊರಗೋಡೆಗಳು ಎತ್ತರವಾಗಿ ಹೊರಗಡೆಯಿಂದ ಮುಚ್ಚಿಕೊಂಡಿರುವಂತೆ ಕಾಣುತ್ತದೆ. ಇವರ ಮಹಿಳೆಯರ ಪರದಾ ಪದ್ಧತಿಯು ಇದಕ್ಕೆ ಕಾರಣವಾಗಿರಬಹುದು.

ಕ್ರೈಸ್ತರ ಗೃಹಗಳ ನಿರ್ಮಾಣದಲ್ಲಿ ಮರದ ಬಾಗಿಲು ಮತ್ತು ಬಾಗಿಲುವಾಡಗಳು ಮಂಕೀಟಾಪ್‌ಗಳು ಅಥವಾ ಕಮಾನುಗಳು ಕಿಟಕಿಯ ಮೇಲ್ಭಾಗದಲ್ಲಿ ಕಂಡು ಬರುತ್ತವೆ. ಮನೆಯಲ್ಲಿ ಮರ ಅಥವಾ ಸಿಮೆಂಟಿನಿಂದ ಕೃತಕ ಜಗಲಿಯನ್ನು ನಿರ್ಮಿಸಿ ಅದರ ಮೇಲೆ ಮೇರಿ ಮತ್ತು ಏಸುವಿನ ಮೂರ್ತಿಯನ್ನು ಇಡಲಾಗಿರುತ್ತದೆ. ಕೆಲವರು ಏಸುಕ್ರಿಸ್ತನ ಶಿಲುಬೆಯನ್ನಿಡುವುದೂ ಉಂಟು. ಇವರು ತಮ್ಮ ಧಾರ್ಮಿಕ ಪ್ರಾರ್ಥನೆಯನ್ನು ಮನೆಯಲ್ಲಿ ಮಾಡುವಾಗ ಇದೇ ಜಾಗದಲ್ಲಿ ಮಾಡುತ್ತಾರೆ.

೧೯೮೧ರ ಜನಗಣತಿಯಂತೆ ಗುಲಬರ್ಗಾ ಜಿಲ್ಲೆಯಲ್ಲಿ ವಿವಿಧ ಸಾಮಗ್ರಿಗಳಿಂದ ರಚಿತವಾದ ಮೇಲ್ಛಾವಣಿ, ನೆಲ ಹಾಗೂ ಗೋಡೆಗಳುಳ್ಳ ಮನೆಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆಯನ್ನು ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗನುಗುಣವಾಗಿ ಈ ಮುಂದೆ ಕೊಡಲಾಗಿದೆ. ಆವರಣದಲ್ಲಿ ಕೊಟ್ಟಿರುವ ಮೊದಲನೇ ಸಂಖ್ಯೆಯು ಗ್ರಾಮಾಂತರ ಪ್ರದೇಶದ ಅಂಕಿ ಅಂಶವನ್ನು ಎರಡನೇ ಸಂಖ್ಯೆಯು ನಗರ ಪ್ರದೇಶದ ಅಂಕಿ ಅಂಶವನ್ನು ಸೂಚಿಸುತ್ತದೆ. ವಿವಿಧ ರೀತಿಯ ಮೇಲ್ಛಾವಣಿಯಿರುವ ಮನೆಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆ: ಹುಲ್ಲು, ಗರಿ, ಎಲೆ, ಬೊಂಬು, ಸುಡದ ಇಟ್ಟಿಗೆ, ಮೊದಲಾದುವುಗಳು (೧,೭೧,೮೨೫ ; ೧೬,೩೩೫), ಹೆಂಚು, ಮರದ ಚೌಕ ಹಲಿಗೆ, ಸ್ಲೇಟ್ (೨,೨೫೦ ; ೨,೨೭೦) ಲೋಹದ ತಗಡು (೬,೯೫೦ ; ೪,೦೪೫), ಅ್ಯಸ ಬೆಸ್ಟಾಸ್ ಹಲಗೆ (೨,೩೬೦ ; ೧,೧೪೫), ಇಟ್ಟಿಗೆ, ಕಲ್ಲು ಮತ್ತು ಗಾರೆ (೪,೦೯೦ ; ೫,೬೧೫) ಕಲ್ಲು (೮೪,೯೯೦ ; ೩೧,೬೩೦), ಸಿಮೆಂಟ್ ಕಾಂಕ್ರೀಟ್ (೨,೭೯೦ ; ೧೩,೬೩೦) ಹಾಗೂ ಇತರ ವಸ್ತುಗಳ ಮೇಲ್ಛಾವಣಿ ((೧೨,೧೬೫ ; ೩,೭೬೦) ವಿವಿಧ ರೀತಿಯ ನೆಲದ ಮನೆಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆ ಮಣ್ಣು (೨,೨೪,೫೮೦ ; ೨೨,೩೭೦) ಮರದ ಹಲಿಗೆಗಳು (೮೯೫ ; ೭೩೦), ಬಿದಿರು (೨೧೦ ; ೧೬೫), ಇಟ್ಟಿಗೆ, ಗಾರೆ ಮತ್ತು ಕಲ್ಲು (೪೦,೯೫೦ ; ೩೨,೪೮೦೦, ಸಿಮೆಂಟ್ (೯೪೫ ; ೩೫೦೫) ಮೊಝಾಯಿಕ್ (೧೪,೦೮೫ ; ೧೫,೭೬೫) ಹಾಗೂ ಇತರ ವಸ್ತುಗಳು (೫.೭೫೫ ; ೩,೭೧೫) ವಿವಿದ ರೀತಿಯ ಗೋಡೆ ಮನೆಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆ : ಹುಲ್ಲು, ಗರಿ, ಜೊಂಡು, ಬಿದಿರು (೨೨,೬೫೦ ; ೩,೧೬೦), ಮಣ್ಣು (೧೪,೬೨೦ ; ೨,೯೨೦) ಸುಡದ ಇಟ್ಟಿಗೆ (೪೦೦ ; ೩೧೦) ಮರದ ಹಲಗೆ (೫೧೫ ; ೧೬೫) ಕಲ್ಲು (೨,೪೩,೦೬೦ ; ೬೦,೫೨೦), ಸಿಮೆಂಟ್ ಕಾಂಕ್ರೀಟ್ (೮೮೦ ; ೩೬೮೦) ಹಾಗೂ ಇತರ ವಸ್ತುಗಳು (೪,೫೮೫ ; ೪೯೫).

ವಿದ್ಯುಚ್ಛಕ್ತಿ ಹಾಗೂ ಶೌಚಾಲಯ ಸೌಲಭ್ಯಗಳು ಮನೆಗಳಲ್ಲಿ ದಿನೇ ದಿನೇ ಹೆಚ್ಚುತ್ತ ಬಂದಿದ್ದರೂ ಅನೇಕ ಕುಟುಂಬಗಳು ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಇದು ಇನ್ನೂ ವಿರಳವಾಗಿಯೇ ಇದೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ತಾಲೂಕುವಾರು ಪ್ರತಿ ಸಾವಿರ ಜನಸಂಖ್ಯೆಗೆ ವಿದ್ಯುಚ್ಛಕ್ತಿ ಹಾಗೂ ಸೌಲಭ್ಯ ಹೊಂದಿರುವ ಜನಸಂಖ್ಯೆ ಈ ರೀತಿ ಇದೆ. ಅಫ್‌ಜಲಪುರ (೩೫೨ ;೨೧), ಆಳಂದ (೩೫೪ ; ೮), ಚಿಂಚೋಳಿ (೩೪೦ ; ೧೯) , ಚಿತ್ತಾಪುರ (೩೦೩ ; ೨೫), ಗುಲಬರ್ಗಾ (೩೭೯ ; ೨೧), ಜೇವರ್ಗಿ (೨೭೧ ; ೧೮), ಸೇಡಂ (೩೨೫ ; ೨೬) ಶಹಾಪುರ (೨೦೧ ; ೩೧) ಸುರಪುರ (೧೮೯ ; ೨೫) ಮತ್ತು ಯಾದಗಿರಿ (೧೬೬ ; ೯). ಆವರಣದಲ್ಲಿರುವ ಮೊದಲನೆ ಸಂಖ್ಯೆಯು ವಿದ್ಯುಚ್ಛಕ್ತಿ ಸೌಲಭ್ಯ ಹೊಂದಿರುವ ಸಂಖ್ಯೆಯನ್ನೂ ಮತ್ತು ಎರಡನೆಯ ಸಂಖ್ಯೆಯು ಶೌಚಾಲಯದ ಸಂಖ್ಯೆಯನ್ನು ಸೂಚಿಸುತ್ತದೆ.

ಒಟ್ಟಾರೆ ಜಿಲ್ಲೆಯಲ್ಲಿ ಪ್ರತಿಸಾವಿರ ಜನಸಂಖ್ಯೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯ ಹೊಂದಿರುವ ಸಂಖ್ಯೆ ೨೮೩ ಮತ್ತು ಶೌಚಾಲಯ ಸೌಲಭ್ಯ ಹೊಂದಿರುವ ಸಂಖ್ಯೆ ೩೦ ಆಗಿದ್ದು ನಗರ ಪ್ರದೇಶಗಳಲ್ಲಿ ಈ ಸಂಖ್ಯೆಯು ಕ್ರಮವಾಗಿ ೭೨೭ ಮತ್ತು ೪೮೨ ಆಗಿರುತ್ತದೆ.

**ಆಹಾರಾಭ್ಯಾಸಗಳು**

ಆಹಾರಾಭ್ಯಾಸಗಳನ್ನು ಸಸ್ಯಾಹಾರಿ ಹಾಗೂ ಮಾಂಸಾಹಾರಿ ಎಂಬ ಎರಡು ಪದ್ಧತಿಗಳಾಗಿ ವಿಂಗಡಿಸಬಹುದು. ಹಿಂದೂಗಳಲ್ಲಿ ಪ್ರಧಾನವಾಗಿ ಬ್ರಾಹ್ಮಣರು, ಲಿಂಗಾಯತರು ಹಾಗೂ ವೈಶ್ಯರು ಮತ್ತು ಜೈನ ಮತಸ್ಥರು ಸಸ್ಯಾಹಾರಿಗಳಾಗಿದ್ದು ಹಿಂದೂಗಳಲ್ಲಿ ಅನೇಕ ಜಾತಿಯವರು ಮಾಂಸಾಹಾರಿಗಳೂ ಆಗಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಬೆಳಗಿನ ವೇಳೆಯಲ್ಲಿ ಚಹಾ/ಕಾಫಿ ಸೇವನೆ ಎಲ್ಲಾ ವರ್ಗಗಳಲ್ಲೂ ಸಾಮಾನ್ಯವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಹುಮಟ್ಟಿಗೆ ಬೆಳಗಿನ ಉಪಹಾರಕ್ಕೆ ರೊಟ್ಟಿಯನ್ನೇ ಬಳಸುವರು. ರೊಟ್ಟಿಯ ಜೊತೆಗೆ ಸೇಂಗಾ ಚಟ್ನಿ, ಹುರಿಗಡಲೆ ಚಟ್ನಿ, ಕೆಂಪು ಮೆಣಸಿನ

ಕಾಯಿ ಚಟ್ನಿ ಮೊದಲಾದುವುಗಳನ್ನು ಮೊಸರಿನೊಂದಿಗೆ ಉಪಯೋಗಿಸುವರು. ನಗರ ಪ್ರದೇಶಗಳಲ್ಲಿ ಅವಲಕ್ಕಿ, ಚೂಡಾ, ಚುರಮುರಿ ಅಥವಾ ಮಂಡಕ್ಕಿ ಒಗ್ಗರಣೆ (ಸೋಸಲಾ), ಶಿರಾ, ಉಪ್ಪಿಟ್ಟು ಬೆಳಗಿನ ಉಪಹಾರವಾಗಿದ್ದು ಇತ್ತೀಚಿನ ದಿನಗಳಲ್ಲಿ ಇಡ್ಲಿ, ಜೋಳದ ರೊಟ್ಟಿ (ಬಕ್ರಿ), ಅಥವಾ ಚಪಾತಿ, ಅನ್ನ, ಸಾರು, ಕಾಯಿಪಲ್ಯೆಗಳು, ಮುದ್ದೆ ಪಲ್ಯ, ಕಾಳುಗಳ ಉಸಲಿ, ಈರುಳ್ಳಿ ಚಟ್ನಿ ಹಾಗೂ ಮೊಸರನ್ನು ಬಳಸುತ್ತಾರೆ. ಅಲಸಂದೆ, ಮೂಕಣಿ, ಹೆಸರು, ಕಡಲೆ, ಹುರುಳಿ ಮೊದಲಾದ ಕಾಳುಗಳನ್ನೂ ಹಾಗೂ ಬೆಂಡೆಕಾಯಿ, ಬದನೆಕಾಯಿ, ಹಾಗಲಕಾಯಿ, ಕುಂಬಳಕಾಯಿ, ಪಡವಲಕಾಯಿ, ಚವಳಿ (ಗೋರಿಕಾಯಿ), ಅವರೆ ಕಾಯಿ, ಸೌತೆಕಾಯಿ, ತೊಂಡೆಕಾಯಿ ಮತ್ತು ನುಗ್ಗೇಕಾಯಿಗಳು ಅಲ್ಲದೇ ಗಜ್ಜರಿ, ಹೂಕೋಸು, ಎಲೆಕೋಸು, ಟೊಮೇಟೋ ಮೊದಲಾದ ಕಾಯಿಪಲ್ಯೆಗಳನ್ನು ಮತ್ತು ಮೆಂತೆ, ಪುಂಡಿ, ಗೋಳಿ, ಕಿದರಸಾಲಿ, ಸಬ್ಬಸಿಗೆ, ಹಕ್ಕರಕೆ, ರಾಜಗಿರಿ, ಪುದಿನಾ ಮುಂತಾದ ಸೊಪ್ಪುಗಳನ್ನು ಆಹಾರ ತಯಾರಿಕೆಗಳಲ್ಲಿ ಬಳಸುತ್ತಾರೆ. ಎಳ್ಳಮವಾಸ್ಯೆಯ ದಿನ ಕಾಯಿ ಪಲ್ಯೆಗಳ ಬಜ್ಜಿ, ಅಮಾವಾಸ್ಯೆಯ ದಿನ ಹೋಳಿಗೆ, ಬೇಸಿಗೆಯ ದಿನಗಳಲ್ಲಿ ಹುಳಿಬಾನ (ಜೋಳದ ನುಚ್ಚು ಹಾಗೂ ಮೊಸರಿನ ಹುಳಿ ಹಾಕಿ ತಯಾರಿಸುವುದು) ಮಾಡುವುದು ಇವರಲ್ಲಿ ವಿಶೇಷತೆಯಾಗಿದೆ. ಕಡ್ಲೆ ಬೇಳೆ ಹೋಳಿಗೆ ಹಾಗೂ ಕೆಲವರಲ್ಲಿ ತೊಗರಿಬೇಳೆ ಹೋಳಿಗೆ, ಶಾವಿಗೆ ಪಾಯಸ, ಗೋಧಿ ಕುಟ್ಟಿದ ಪಾಯಸ (ಗೋದಿಹುಗ್ಗಿ), ಅನಾರಶೆ (ಅಕ್ಕಿ ಹಿಟ್ಟು, ಬೆಲ್ಲ ಮತ್ತು ಗಸಗಸೆಯಿಂದ ತಯಾರಿಸಿದ್ದು), ಬಾಳೆಹಣ್ಣು ಅಥವಾ ಮಾವಿನ ಹಣ್ಣಿನ ಸೀಕರಣೆ, ಮೊಸರಿನ ಶ್ರೀಖಂಡ್, ಹಾಲಿನ ಬಾಸುಂದಿ, ಕಡುಬು, ಖರ್ಜಿಕಾಯಿ ಸುರಳಿ ಹೋಳಿಗೆ, ಹುರಕ್ಕಿ ಹೋಳಿಗೆ ಮೊದಲಾದವು ಇವರು ಹಬ್ಬ ಹರಿದಿನಗಳಲ್ಲಿ ಮಾಡುವ ವಿಶೇಷ ಸಿಹಿ ಪದಾರ್ಥಗಳಾಗಿವೆ. ಮದುವೆ ಸಮಾರಂಭಗಳಲ್ಲಿ ಲಾಡು, ಜಿಲೇಬಿ, ಕಡಲೇ ಹಿಟ್ಟಿನಿಂದ ತಯಾರಿಸಿದ ಬೇಸಿನ್ ಉಂಡಿ, ಬಾದುಷಾ, ಜಹಾಂಗೀರ್, ಮೊದಲಾದ ಸಿಹಿ ತಿಂಡಿಗಳನ್ನು ಹಾಗೂ ಖಾರಾ ಬೂಂದಿ, ಬೋಂಡ, ಪಕೋಡಾ ಮೊದಲಾದ ತಿನುಸುಗಳನ್ನು ಮಾಡುತ್ತಾರೆ. ಸಂಜೆ ವೇಳೆಯಲ್ಲಿ ಅವಲಕ್ಕಿ ಚೂಡಾ, ಮಂಡಾಳಾ, ಬೇಸಿನ್ ಉಂಡಿ ಮೊದಲಾದುವನ್ನು ಚಹಾ ಕಾಫಿ ಸೇವನೆಯ ಜೊತೆಗೆ ಬಳಸುತ್ತಾರೆ. ಹೋಟೆಲುಗಳಲ್ಲಿ ಶಿರಾ, ಉಪ್ಪಿಟ್ಟು, ಇಡ್ಲಿ, ಒಡೆ, ದೋಸೆ, ಪೂರಿ, ಅವಲಕ್ಕಿ, ಮಂಡಕ್ಕಿ, ಖಾರಾಸೇವು, ಮಿರ್ಚಿ, ಬಜ್ಜಿ ಮುಂತಾದ ತಿಂಡಿಗಳನ್ನು ಹಾಗೂ ಅನೇಕ ಸಿಹಿ ತಿಂಡಿಗಳನ್ನು ಮಾಡುತ್ತಾರೆ. ಬೇಸಿಗೆಯ ದಿನಗಳಲ್ಲಿ ಗುಲಬರ್ಗಾದಂತಹ ನಗರ ಪ್ರದೇಶದಲ್ಲಿ ವಿಶೇಷವಾದ ಟೆಂಟುಗಳಲ್ಲಿ ಕಬ್ಬಿನ ಹಾಲು ಮತ್ತು ಎಳೆನೀರು ಮಾರಾಟದ ಅಂಗಡಿಗಳನ್ನು ಕಾಣಬಹುದು.

ಮುಸಲ್ಮಾನರು ಮಾಂಸಾಹಾರಿಗಳಾಗಿದ್ದು ಅವರ ಸಂಪ್ರದಾಯದಂತೆ ಕಡಿದ (ಝುಭ) ಮಾಂಸವನ್ನು ಮಾತ್ರ ಬಳಸುತ್ತಾರೆ. ಆದರೆ ಇದು ಮೀನಿಗೆ ಅನ್ವಯಿಸುವುದಿಲ್ಲ. ಕೆಲವರು ದನದ ಮಾಂಸವನ್ನು ಬಳಸುವುದಿಲ್ಲ. ಹಂದಿಮಾಂಸ ಇವರಿಗೆ ನಿಷೇದ. ಮಾಂಸಾಹಾರದ ಜೊತೆಯಲ್ಲಿ ತರಕಾರಿ ಹಾಗೂ ಬೇಳೆ ಮೊದಲಾದುವುಗಳಿಗಿಂದ ತಯಾರಿಸಿದ ಆಹಾರಗಳನ್ನೂ ಬಳಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಹಾಗೂ ಮದುವೆ ಮುಂತಾದ ಸಂದರ್ಭಗಳಲ್ಲಿ ಇವರು ಬಿರಿಯಾನಿ, ಪಲಾವ್, ಕೋಳಿಖೈಮಾ, ಶಾವಿಗೆ ಪಾಯಸ, ಚೋಂಗೆ (ಒಂದು ರೀತಿಯ ಕರಿಕಡಬು) ಮತ್ತು ಸಿಹಿತಿಂಡಿಗಳನ್ನು ತಯಾರಿಸುತ್ತಾರೆ.

ಕ್ರೈಸ್ತರು ಮಂಸಾಹಾರಿಗಳು. ಇವರು ಕೋಳಿ, ಆಡು, ಹಸುವಿನ ಹಾಗೂ ಹಂದಿಮಾಂಸಗಳನ್ನೂ ತಮ್ಮ ಆಹಾರಾಭ್ಯಾಸದಲ್ಲಿ ಬಳಸುತ್ತಾರೆ. ಮಾಂಸ ಹಾಗೂ ಮೀನುಗಳನ್ನು ಆಹಾರಕ್ಕೆ ಬಳಸುವಾಗ, ಅಕ್ಕಿ, ಗೋಧಿ, ಜೋಳ, ಬೇಳೆ, ಕಾಯಿಪಲ್ಯ ಮುಂತಾದವುಗಳಿಂದ ತಯಾರಿಸಿದ ಆಹಾರವನ್ನೂ ಉಪಯೋಗಿಸುತ್ತಾರೆ. ಇವರು ತಮ್ಮ ಹಬ್ಬ ಹರಿದಿನಗಳಲ್ಲಿ ಹಾಗೂ ಮದುವೆ ಮುಂತಾದ ಸಂದರ್ಭದಲ್ಲಿ ಬಿರಿಯಾನಿ, ಪಲಾವ್, ಕೇಕ್, ಸಿಹಿತಿಂಡಿ ಮೊದಲಾದ ಆಹಾರವನ್ನು ತಯಾರಿಸುತ್ತಾರೆ.

### ಉಡುಪುಗಳು

ಸಾಂಪ್ರದಾಯಿಕವಾಗಿ ಈ ಜಿಲ್ಲೆಯಲ್ಲಿ ಹಿಂದೂ ಗಂಡಸರಲ್ಲಿ ರೂಢಿಯಲ್ಲಿರುವ ಉಡುಪುಗಳೆಂದರೆ ಧೋತರ ಅಥವಾ ಪಂಚೆಯನ್ನು ಕಚ್ಚೆಹಾಕಿ ಉಡುವುದು, ನಿಲುವಂಗಿ ಅಥವಾ ಜುಬ್ಬ ಹಾಗೂ ತಲೆಗೆ ರುಮಾಲು, ಅಥರಾ ರಟ್ಟಿನ ಇಲ್ಲವೇ ಗಾಂಧಿ ಟೋಪಿಯನ್ನು ಧರಿಸುವುದು. ಗಂಡು ಮಕ್ಕಳು ಸಾಮಾನ್ಯವಾಗಿ ನಿಕ್ಕರ್ (ಚಡ್ಡಿ) ಮತ್ತು ಷರ್ಟ್ ಹಾಗೂ ಯುವಕರು ಮತ್ತು ನೌಕರಿ ಮಾಡುವರು ಷರಾಯಿ (ಪ್ಯಾಂಟ್) ಮತ್ತು ಷರ್ಟ್‌ಗಳನ್ನು ಧರಿಸುವುದು ರೂಢಿಯಲ್ಲಿದೆ.

ಸ್ತ್ರೀಯರಲ್ಲಿ ಸಾಮಾನ್ಯವಾಗಿ ಬ್ರಾಹ್ಮಣರು ೯ ಗಜದ ಸೀರೆಯನ್ನು ಕಚ್ಚೆ ಹಾಕಿ ಉಡುವುದು ಹಾಗೂ ಇಳಕಲ್ ಕಣದ ಕುಪ್ಪಸ (ಅಂಚಿರುವ ಕುಪ್ಪಸ) ವನ್ನು ತೊಡುವುದು ರೂಢಿಯಲ್ಲಿದ್ದು ಈಚಿನ ದಿನಗಳಲ್ಲಿ ಕಚ್ಚೆ ಹಾಕದೆ ವಿವಿಧ ರೀತಿಯ ಸೀರೆ ಮತ್ತು ಕುಪ್ಪಸಗಳನ್ನು ತೊಡುವುದು ಎಲ್ಲರಲ್ಲೂ ರೂಢಿಯಲ್ಲಿದೆ. ವಿಶೇಷ ಸಂದರ್ಭಗಳಲ್ಲಿ ರೇಷ್ಮೆ ಸೀರೆಗಳನ್ನುಡುವುದು ಸಹಜವಾಗಿದೆ. ಹುಡುಗಿಯರು ಬಹುತೇಕವಾಗಿ, ಲಂಗ, ಕುಪ್ಪಸ, ಸ್ಕರ್ಟ್, ಚೂಡಿದಾರ್,ಮೊದಲಾದವುಗಳನ್ನು ಧರಿಸುತ್ತಾರೆ. ನಾಗರೀಕತೆಯ ಪ್ರಭಾವ ಹಾಗೂ ಶೈಕ್ಷಣಿಕ ಮುನ್ನಡೆಯಿಂದ ನೈಲಾನ್, ಪಾಲಿಸ್ಟರ್ ಮೊದಲಾದುವುಗಳಿಂದ ತಯಾರಿಸಿದ ಉಡುಪುಗಳನ್ನು ಧರಿಸುವುದು ಕಂಡು ಬರುವುದೇ ಅಲ್ಲದೆ ಉಡುಪಿನ ಶೈಲಿಯಲ್ಲೂ ಬಹಳಷ್ಟು ಮಾರ್ಪಾಡನ್ನು ಕಾಣಬಹುದಾಗಿದೆ.

ಮುಸಲ್ಮಾನರಲ್ಲಿ ಸಾಮಾನ್ಯವಾಗಿ ಗಂಡಸರು ಪೈಜಾಮ, ಉದ್ದನೆಯ ನಿಲುವಂಗಿ (ಜುಬ್ಬ/ಶೇರವಾನಿ) ಹಾಗೂ ಟೋಪಿಯನ್ನು ಧರಿಸುವರು. ಹಳೆಯ ಕಾಲದ ಜನರು ಧೋತರ ಉಡುತ್ತಾರೆ. ಆದರೆ ಯುವಕರು ನಿಕ್ಕರ್, ಷರಾಯಿ, ಷರ್ಟ್ ಮೊದಲಾದುವುಗನ್ನು ಧರಿಸುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಇವರಲ್ಲಿ ಸ್ತ್ರೀಯರು ಹೊರಗೆ ಹೋಗುವಾಗ ಬುರಖಾವನ್ನು ತಲೆಯಿಂದ ಪಾದದವರೆಗೂ ಮುಚ್ಚುವಂತೆ ಧರಿಸುತ್ತಾರೆ.

ಕ್ರೈಸ್ತರಲ್ಲಿ ಹಲವಾರು ವಿಶೇಷ ಸಂದರ್ಭಗಳಿಗನುಗುಣವಾಗಿ ಹೊಂದುವ ಉಡುಪು ವಿನ್ಯಾಸಗಳನ್ನು ಧರಿಸುವುದು ಕಂಡು ಬರುತ್ತದೆ. ವಿವಾಹದ ಸಂದರ್ಭದಲ್ಲಿ ಕನ್ಯೆಯನ್ನು ಬಿಳಿಯ ಉದ್ದನೆಯ ಸ್ಕರ್ಟ್ ಅಥವಾ ಸೀರೆಯಿಂದ ಶೃಂಗರಿಸುವುದು ಇವರಲ್ಲಿ ಸಾಂಪ್ರದಾಯಿಕವಾಗಿದೆ. ಚರ್ಚ್‌ನಲ್ಲಿ ಪ್ರಾರ್ಥನೆ ಮಾಡುವಾಗ ಸೆರಗನ್ನು ತಲೆಯ ಮೇಲೆ ಹೊದ್ದು ಕೊಳ್ಳುವುದು ಕ್ರೈಸ್ತ ಮಹಿಳೆಯರಲ್ಲಿ ರೂಢಿಯಲ್ಲಿದೆ.

## ಗೃಹೋಪಕರಣಗಳು

ಹಿಂದಿನ ಕಾಲದಲ್ಲಿಸಾಮಾನ್ಯವಾಗಿ ಕುಳಿತು ಕೊಳ್ಳುವುದಕ್ಕೆ ಕಡ್ಡಿ ಚಾಪೆ, ಈಚಲು ಚಾಪೆ, ಗುಡಾರ, ಜಮಖಾನ, ಕಂಬಳಿ ಮೊದಲಾದುವುಗಳನ್ನು ಬಳಸುತ್ತಿದ್ದು ಅದನ್ನು ಹಲವಾರು ಕಡೆಗಳಲ್ಲಿ ಆದರಲ್ಲೂ ಗ್ರಾಮಾಂತರ ಪ್ರದೇಶಗಲ್ಲಿ ಇಂದಿಗೂ ಕಾಣಬಹುದಾಗಿದೆ. ಕೆಲವೆಡೆಗಳಲ್ಲಿ ಮಲಗುವುದಕ್ಕೆ ಹೊರಸನ್ನು ಬಳಸುತ್ತಾರೆ. ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಅವರ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಕಬ್ಬಿಣದ ಅಥವಾ ಬೆತ್ತದ ಅಥವಾ ಮರದ ಕುರ್ಚಿ, ಮೇಜು, ಮಂಚ, ಕಾಲುಮಣೆ (ಸ್ಟೂಲು) ಮೊದಲಾದ ಪೀಠೋಪಕರಣಗಳನ್ನು ಕಾಣಬಹುದಾಗಿದೆ. ಶ್ರೀಮಂತರ ಮನೆಗಳಲ್ಲಿ ತಮ್ಮ ಅಭಿರುಚಿಗೆ ತಕ್ಕಂತೆ ಕೆಲವು ಪೀಠೋಪಕರಣಗಳು ಕೆತ್ತನೆಯ ಕೆಲಸದಿಂದಲೂ ಕೂಡಿರುವುದುಂಟು.

ನಾಗರೀಕತೆಯ ಪ್ರಭಾವದಿಂದ ನೀರು ತುಂಬಿಡಲು ಹಾಗೂ ಅಡಿಗೆ ಮಾಡಲು ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು ಹಲವಾರು ಮನೆಗಳಲ್ಲಿ ಬಳಕೆಗೆ ಬಂದಿದ್ದರೂ ಹಿತ್ತಾಳೆ, ತಾಮ್ರ ಹಾಗೂ ಅಲ್ಯೂಮಿನಿಯಂ ಪಾತ್ರೆಗಳೂ ಸಹ ಬಳಕೆಯಲ್ಲಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಆದರಲ್ಲೂ ಬಡವರ ಮನಗಳಲ್ಲಿ ಮಣ್ಣಿನ ಮಡಕೆಗಳು ಮತ್ತು ಅಲ್ಯೂಮಿನಿಯಂ ಪಾತ್ರೆಗಳೇ ಹೆಚ್ಚಾಗಿ ಕಂಡು ಬರುತ್ತದೆ. ಹಲವು ಮನೆಗಳಲ್ಲಿ ಉಪ್ಪಿನ ಕಾಯಿ ಮೊದಲಾದ ವಸ್ತುಗಳಿನ್ನಿಡಲು ಭರಣಿ(ಜಾಡಿ)ಗಳನ್ನು ಬಳಸುತ್ತಾರೆ. ಈಚೆಗೆ ಹಲವರು ಪ್ಲಾಸ್ಟಿಕ್‌ನಿಂದ ತಯಾರಿಸಿದ ಕೊಡ, ಬಕೀಟು, ಮೊದಲಾದುವುಗಳನ್ನು ಬಳಸುವುದುಂಟು. ಅಡಿಗೆ ತಯಾರಿಸಲು ಜನರು ಇತ್ತೀಚಿನ ದಿನಗಳಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಕೆಲವೆಡೆಗಳಲ್ಲಿ ಆದರಲ್ಲೂ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಕ್ಕರ್ ಪಾತ್ರೆ,ಅನಿಲದ ಒಲೆ, ವಿದ್ಯುತ್ ಒಲೆ ಮೊದಲಾದುವುಗಳನ್ನು ಬಳಸುವುದಾದರೂ ಅನೇಕ ಕಡೆಗಳಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಸೌದೆ (ಕಟ್ಟಿಗೆ) ಒಲೆ ಹಾಗೂ ಸೀಮೆಎಣ್ಣೆ ಒಲೆಗಳನ್ನು ಬಳಸುವುದನ್ನು ಕಾಣಬಹುದಾಗಿದೆ. (೧೯೬೧ರ ಗ್ರಾಮ ಸರ್ವೇಕ್ಷಣ ಪುಸ್ತಕದಲ್ಲಿ ತಿಳಿಸಿರುವಂತೆ ಕೊಡಗ್‌ನೂರ್ (ಅಫ್‌ಜಲಪುರ ತಾಲೂಕು); ಮಹಾಗಾಂವ್ (ಗುಲಬರ್ಗಾ ತಾಲೂಕು) ಹಾಗೂ ಹಂದೂರ್ (ಸುರಪುರ ತಾಲೂಕು)ಗಳಲ್ಲಿ ಗೃಹ ಬಳಕೆಯಲ್ಲಿದ್ದ ಕೆಲವು ಆಧುನಿಕ ವಸ್ತುಗಳ ಸಂಖ್ಯೆಯನ್ನು ಈ ಮುಂದೆ ನೀಡಲಾಗಿದೆ.

| ವಸ್ತುಗಳ ಬಳಕೆ | ತಾಲೂಕುಗಳು | | |
|---|---|---|---|
| | ಅಫಜಲ್‌ಪುರ (ಕೊಡಗ್‌ನೂರ್) | ಗುಲಬರ್ಗಾ (ಮಹಾಗಾಂವ್) | ಸುರಪುರ (ಹಂದೂರ್) |
| ೧ ಮಂಚ | ೬೩ | ೫೧೫ | ೧೩೩ |
| ೨ ಕುರ್ಚಿ | ೩ | ೬೪ | ೧೨ |
| ೩ ಮೇಜು | ೧ | ೪೦ | ೩ |
| ೪. ಪೆಟ್ರೋಮ್ಯಾಕ್ಸ್ | ೪ | ೩೯ | ೭ |
| ೫. ಬ್ಯಾಟರಿ ಟಾರ್ಚ್‌ದೀಪ | ೧೦ | ೨೫೫ | ೧೯ |
| ೬. ಬೈಸಿಕಲ್ | ೨ | ೩೦ | ೬ |
| ೭. ಗಡಿಯಾರ | ೬ | ೮೫ | ೧೬ |

### ಆಭರಣಗಳು

ಆಭರಣದ ಬಳಕೆಯು ಬಹಳ ಮಟ್ಟಿಗೆ ಜನರ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿದೆ. ಆಭರಣವನ್ನು ಬಳಸುವುದು ಬಹಳ ಹಿಂದಿನಿಂದಲೂ ರೂಢಿಯಲ್ಲಿದ್ದು ನಾಗರೀಕತೆಯ ಪ್ರಭಾವದಿಂದ ಅದರ ಶೈಲಿಯಲ್ಲಿ ಕೆಲವು ಮಾರ್ಪಾಡನ್ನು ಕಾಣಬಹುದಾಗಿದೆ. ಸ್ತ್ರೀಯರು ಕೈಗೆ ಬಳೆ, ಕೈಕಡಗ, ತೋಳಿಗೆ ವಂಕಿ, ಸೊಂಟಕ್ಕೆ ಡಾಬು (ನಡುಪಟ್ಟಿ), ಕಿವಿಗೆ ಓಲೆ, ಜುಮುಕಿ, ಮೂಗಿಗೆ ಮೂಗುತಿ, ಕೊರಳಿಗೆ ಭೋರ್ಮಾಳಾ (ಚಿನ್ನದ ಗುಂಡಿನಸರ) ಹಾಗೂ ವಿವಿಧ ಮಾದರಿಯ ಸರಗಳು ಮತ್ತು ಬಂಗಾರದ ಪದಕ, ಕಾಲಿಗೆ ಸರಪಳಿ (ಚೈನು), ಟೀಕೆ ಮತ್ತು ಕಾಲುಂಗುರ, ಕೈಬೆರಳುಂಗುರ ಇವೇ ಮುಂತಾದ ಆಭರಣಗಳನ್ನು ಧರಿಸುತ್ತಾರೆ. ಸ್ತ್ರೀಯರು ಧರಿಸುವ ಮಂಗಳ ಸೂತ್ರ ಹಾಗೂ ಕಾಲುಂಗುರಗಳು ವಿವಾಹದ ಸಂಕೇತವಾಗಿರುತ್ತದೆ. ಮಕ್ಕಳಿಗೆ ಹಾಕುವ ಸಾಮಾನ್ಯ ಆಭರಣಗಳೆಂದರೆ ಸರ, ಕಂಠಿಹಾರ (ಚೈನು), ಕಿವಿಯ ಓಲೆ, ಬೆರಳಿಗೆ ಉಂಗುರ, ಬೆಳ್ಳಿಯ ರುಳಿ, ಚೈನು, ಉಡದಾರ ಮುಂತಾದವುಗಳು. ಪುರುಷರಲ್ಲಿ ಆಭರಣಗಳ ಬಳಕೆ ವಿರಳವೆಂದೇ ಹೇಳಬಹುದು. ಕೈ ಬೆರಳುಂಗುರ, ಕಂಠಿಹಾರ (ಚೈನ್) ಮತ್ತು ಕೈಕಡಗ ಮೊದಲಾದವು ಪುರುಷರು ಸಾಮಾನ್ಯವಾಗಿ ಧರಿಸುವ ಆಭರಣಗಳಾಗಿವೆ.

### ಹಬ್ಬಗಳು

ಹಿಂದೂಗಳಿಗೆ ಅನೇಕ ಹಬ್ಬಗಳನ್ನಾಚರಿಸುವ ಹಾಗೂ ವ್ರತ - ಉಪವಾಸ ಕೈಗೊಳ್ಳುವ ಪವಿತ್ರ ದಿನಗಳಿವೆ. ಇದೇ ರೀತಿ ಬೇರೆ ಬೇರೆ ಧರ್ಮದವರಿಗೆ ಪ್ರತ್ಯೇಕ ಹಬ್ಬಗಳೂ ಇವೆ. ಬ್ರಾಹ್ಮಣರಲ್ಲಿ ಬೇರೆಯವರಿಗಿಂತ ಹೆಚ್ಚು ಹಬ್ಬಗಳ ಆಚರಣೆಗಳನ್ನು ಕಾಣಬಹುದಾಗಿದೆ. ಹಿಂದೂ ಪಂಚಾಂಗದಂತೆ ಇಡೀ ವರ್ಷವನ್ನು ಉತ್ತರಾಯಣ ಮತ್ತು ದಕ್ಷಿಣಾಯನ ಎಂದು ಎರಡು ಸಮಭಾಗಗಳನ್ನಾಗಿ ಮಾಡಿದ್ದಾರೆ. ಜಿಲ್ಲೆಯಲ್ಲಿ ಪ್ರಮುಖವಾಗಿ ಆಚರಿಸುವ ಕೆಲವು ಹಬ್ಬಗಳ ಬಗ್ಗೆ ಸಂಕ್ಷಿಪ್ತವಾಗಿ ಇಲ್ಲಿ ಹೇಳಲಾಗಿದೆ.

ಯುಗಾದಿ ಶಾಲಿವಾಹನ ಶಕದ ಎಣಿಕೆ ಆರಂಭವಾಗುವ ಚೈತ್ರ ತಿಂಗಳ ಪ್ರಥಮ ದಿನ. ಈ ಹಬ್ಬದ ಹಿಂದಿನ ದಿನ ನೀರು ತುಂಬುವ ಪಾತ್ರೆಗಳ ಮೇಲೆ ಸುಣ್ಣ-ಬಣ್ಣಗಳಿಂದ ಸಿಂಗಾರ ಮಾಡಿ, ನೀರು ತುಂಬಿ, ಬೇವಿನಸೊಪ್ಪನ್ನು ಹಾಕುವರು. ಬೇವಿನ ತೊಪ್ಪಲಿನ ಸತ್ವದಿಂದ ಕೂಡಿದ ನೀರು ಚರ್ಮರೋಗವನ್ನು ದೂರ ಮಾಡುವುದೆಂದು ಹೇಳುತ್ತಾರೆ. ಹಬ್ಬದ ದಿನ ಮುಂಜಾನೆ ಮನೆಯವರೆಲ್ಲರೂ ತೈಲಾಭ್ಯಂಜನ ಮಾಡುವರು. ಮನೆಯ ಬಾಗಿಲುಗಳಿಗೆ ಮಾವು-ಬೇವುಗಳ ತಳಿರುತೋರಣಗಳನ್ನು ಕಟ್ಟಿ ಮುಂಭಾಗವನ್ನು ರಂಗವಲ್ಲಿಯಿಂದ ಅಲಂಕರಿಸುತ್ತಾರೆ. ಈ ದಿನ ಕೋಲಿನ ತುದಿಗೆ ತಾಮ್ರದ ಚಂಬನ್ನು ಬೋರಲು ಹಾಕಿ, ಮಡಿ ಉಡಿಸಿ ಸಕ್ಕರೆ ಅಥವಾ ಕೊಬ್ಬರಿ ಹಾರವನ್ನು ಹಾಕಿ ನೈವೇದ್ಯ ಮಾಡಿ ಪೂಜಿಸುವ ಸಂಪ್ರದಾಯವೂ ಕೆಲವರಲ್ಲಿದೆ. ಇದಕ್ಕೆ 'ಗುಡಿಪಾಡವಾ' ಎಂದು ಹೇಳುತ್ತಾರೆ. ಇಡೀ ವರ್ಷದ ಶುಭ ದಿನಗಳಲ್ಲಿ ಇದು ಅತ್ಯುತ್ತಮ ದಿನವೆಂದು ಭಾವಿಸಿ ಭಕ್ತಿಪೂರ್ವಕವಾಗಿ ಮನೆಯಲ್ಲಿ ದೇವರಿಗೆ ಪೂಜೆ ಸಲ್ಲಿಸುವುದಲ್ಲದೆ ದೇವಸ್ಥಾನಗಳಿಗೆ

ಹೋಗಿಬರುವ ಸಂಪ್ರದಾಯವೂ ಇದೆ. ಈ ದಿನ ಬೇವುಬೆಲ್ಲವನ್ನು ಸ್ವೀಕರಿಸಿ ವಿಶೇಷ ಭಕ್ಷ್ಯ ಭೋಜ್ಯಗಳಿಂದ ಕೂಡಿದ ಭೋಜನವನ್ನು ಮಾಡುತ್ತಾರೆ. ಹೊಸ ವರುಷದ ಹಿಂದೂ ಪಂಚಾಂಗವನ್ನು ಓದುತ್ತಾರೆ.

ಚೈತ್ರಮಾಸದ ಶುಕ್ಲಪಕ್ಷದ ನವಮಿಯಂದು ರಾಮನವಮಿಯನ್ನು ಆಚರಿಸುತ್ತಾರೆ. ಅನೇಕ ಸ್ವಯಂ ಸೇವಾ ಸಂಘಗಳು ಸಾಮೂಹಿಕವಾಗಿ ಈ ಹಬ್ಬವನ್ನು ಆಚರಿಸುವುದೂ ಉಂಟು. ಸಂಗೀತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಹಬ್ಬದ ವೈಶಿಷ್ಟ್ಯವಾಗಿರುತ್ತದೆ. ಚೈತ್ರಮಾಸದ ಹುಣ್ಣಿಮೆಯ ದಿನ (ದವನದ ಹುಣ್ಣಿಮೆ) ಹನುಮ ಜಯಂತಿಯನ್ನು ಆಚರಿಸುತ್ತಾರೆ. ಚೈತ್ರ ಬಹುಳ ತದಿಗೆಯ ದಿನ ಗೌರಿಯನ್ನು ಕುಳ್ಳಿರಿಸಿ ಹಿಂಗಾರು ಸಸಿಯನ್ನು (ಗೋಧಿ, ಜೋಳ, ಮೊದಲಾದ ಪೈರುಗಳನ್ನು) ಬೆಳೆಸುತ್ತಾರೆ.

ವೈಶಾಖ ಶುದ್ಧ ತೃತೀಯವನ್ನು ಅಕ್ಷಯ ತೃತೀಯ ಎಂದು ಕರೆಯುತ್ತಾರೆ. ಈ ದಿನವನ್ನು ಸಮಸ್ತ ಸಂವತ್ಸರದ ದಿನಗಳಲ್ಲಿ ಅತೀವ ಭಾಗ್ಯದಾಯಕ ದಿನವೆಂದು ಪರಿಗಣಿಸುತ್ತಾರೆ. ಈ ದಿನವೇ ಬಸವಣ್ಣನವರ ಜನ್ಮ ದಿನ, ಇದನ್ನು ಬಸವ ಜಯಂತಿ ಎಂದು ಆಚರಿಸುತ್ತಾರೆ. ಹಾಗೂ ಈ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ವೀರಶೈವರಿಗೆ ಇದು ಬಹಳ ಪವಿತ್ರ ದಿನವಾಗಿದ್ದು ಕೆಲವರು ಅಂದು ಬಸವಕಲ್ಯಾಣ, ಕೂಡಲ ಸಂಗಮ, ಬಸವನ ಬಾಗೇವಾಡಿ ಮುಂತಾದ ಪುಣ್ಯಕ್ಷೇತ್ರಗಳಿಗೆ ಹೋಗಿಬರುವುದೂ ಉಂಟು. ಅನೇಕರು ತಮ್ಮ ನೂತನ ಕೆಲಸ ಕಾರ್ಯಗಳನ್ನು ಈ ದಿನ ಆರಂಭಿಸುವರು. ಈ ದಿನವೇ ಛತ್ರಪತಿ ಶಿವಾಜಿಯ ಜನ್ಮ ದಿನವೂ ಆಗಿದೆ. ಮರಾಠರು ಈ ದಿನವನ್ನು ಶಿವಜಯಂತಿ ಎಂದು ಆಚರಿಸುತ್ತಾರೆ. ವೈಶಾಖ ಶುದ್ಧಪಂಚಮಿಯೆಂದು ಶಂಕರಾಚಾರ್ಯರ ಅನುಯಾಯಿಗಳು ಶಂಕರ ಜಯಂತಿಯನ್ನು ಆಚರಿಸುತ್ತಾರೆ. ಜೇಷ್ಠಮಾಸದ ಹುಣ್ಣಿಮೆಯನ್ನು ಕಾರುಹುಣ್ಣಿಮೆ ಎಂದು ಆಚರಿಸುತ್ತಾರೆ. ಕೃಷಿಕರು ಇದನ್ನು ಮಳೆಗಾಲದ ಆರಂಭವೆಂದು ತಮ್ಮ ಊರುಗಳನ್ನು ಸಿಂಗರಿಸುತ್ತಾರೆ. ಎತ್ತುಗಳನ್ನು ಅಲಂಕರಿಸಿ ಮೆರವಣಿಗೆ ಹೊರಡಿಸಿ ಕರಿಹರಿಯಲು ಓಡಿಸುತ್ತಾರೆ. ಈ ದಿನದಂದೇ ವೈದಿಕರಲ್ಲಿ ಮುತ್ತೈದೆಯರು ತಮ್ಮ ಪತಿಗೆ ದೀರ್ಘ ಆಯಸ್ಸನ್ನು ಕೋರಿ ವಟಸಾವಿತ್ರಿ ವ್ರತವನ್ನು ಆಚರಿಸುವರು. ಜೇಷ್ಠಮಾಸದ ಅಮಾವಾಸ್ಯೆಯ ದಿನ ಮಣ್ಣೆತ್ತಿನ ಅಮಾವಾಸ್ಯೆ ಎಂದು ಆಚರಿಸುವರು. ಸಂಪ್ರದಾಯ ಇದ್ದವರು ಈ ದಿನ ಮಣ್ಣಿನ ಒಂದು ಜೊತೆ ಎತ್ತುಗಳನ್ನು ಇಟ್ಟು ಪೂಜಿಸುವರು. ಆಷಾಢದ ಶುಕ್ಲಪಕ್ಷದ ಹನ್ನೊಂದನೇಯ ದಿನ ಆಷಾಡ ಏಕಾದಶಿ ವ್ರತವನ್ನು ಹಿಂದೂಗಳಲ್ಲಿ ಕೆಲವರು ಉಪಾವಸ ಮಾಡಿ ಮತ್ತೆ ಕೆಲವರು ಸಿಹಿಯೂಟ ಮಾಡಿ ಆಚರಿಸುವುದು ರೂಢಿಯಲ್ಲಿದೆ.

ಶ್ರಾವಣಮಾಸದಲ್ಲಿ ಪ್ರತಿಸೋಮವಾರ ಎಲ್ಲಾ ದೇವಾಲಯಗಳಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲುವುದಲ್ಲದೆ ಅನೇಕ ಧಾರ್ಮಿಕ ಸಂಸ್ಥೆಗಳಲ್ಲಿ ಪುರಾಣ ಪ್ರವಚನಗಳೂ ನಡೆಯುವುದುಂಟು. ಶ್ರಾವಣಮಾಸದಲ್ಲಿ ಪ್ರತಿ ಮಂಗಳವಾರ ಹೊಸದಾಗಿ ಲಗ್ನವಾದ ಹೆಣ್ಣು ಮಕ್ಕಳು ತಮ್ಮ ಪಾತಿವ್ರತ್ಯ ಹಾಗೂ ಸುಮಂಗಲ ಸೌಭಾಗ್ಯಕ್ಕಾಗಿ ಮಂಗಳಗೌರಿ ವ್ರತವನ್ನು ಐದು ವರ್ಷಗಳು ಆಚರಿಸುತ್ತಾರೆ. ಶ್ರಾವಣಮಾಸದ ಶುದ್ಧಪಂಚಮಿಯ ದಿನ ನಾಗರಪಂಚಮಿಯನ್ನು ಎಲ್ಲಾ ಹಿಂದೂಗಳೂ ಆಚರಿಸುತ್ತಾರೆ. ಈ ದಿನದಂದು ಮಣ್ಣಿನಿಂದ ನಾಗಪ್ರತಿಮೆಯನ್ನು ಮಾಡಿ ಗಂಧಪುಷ್ಪಾದಿಗಳಿಂದ ಪೂಜಿಸಿ, ಹಾಲೆರೆದು, ಅರಳಿಟ್ಟು, ತಂಬಿಟ್ಟು, ವಿವಿಧ ಉಂಡಿಗಳು, ಕಡಬು ಮೊದಲಾದವುಗಳನ್ನು ನೈವೇದ್ಯಮಾಡಿ, ದೂಪ-ದೀಪಗಳನ್ನು ಬೆಳಗುತ್ತಾರೆ. ಈ ಹಬ್ಬಕ್ಕೆ ಹೆಣ್ಣು ಮಕ್ಕಳು ತವರಿಗೆ ಬಂದು ತವರೂರ ಬಳಗಕ್ಕೆ ಹರಸುವರು. ಈ ಹಬ್ಬದಲ್ಲಿ ಉಯ್ಯಾಲೆ ಮುಂತಾದ ಸರಳ ಆಟಗಳನ್ನಾಡುವುದು ಮತ್ತು ಒಗಟುಗಳನ್ನು ಬಿಡಿಸುವುದೂ ಉಂಟು. ಶ್ರಾವಣ ಪೂರ್ಣಿಮೆಗೆ ಜನಿವಾರಧರಿಸುವ ಕೆಲವರಲ್ಲಿ ಜನಿವಾರ ಬದಲಾಯಿಸುವುದೂ ಹಾಗೂ ರಕ್ಷಾ ಬಂಧನವನ್ನು ಆಚರಿಸುವುದೂ ಉಂಟು. ಶ್ರಾವಣ ಬಹುಳ ಅಷ್ಟಮಿಯಂದು ಶ್ರೀಕೃಷ್ಣನ ಹುಟ್ಟು ಹಬ್ಬದ ಅಂಗವಾಗಿ ಗೋಕುಲಾಷ್ಟಮಿಯನ್ನು ಆಚರಿಸುತ್ತಾರೆ. ಈ ದಿನ ಕೃಷ್ಣನು ಹುಟ್ಟಿದ ಸಮಯವಾದ ಮಧ್ಯರಾತ್ರಿಯ ವೇಳೆಯಲ್ಲಿ ಕೃಷ್ಣನ ಮೂರ್ತಿಯನ್ನಿಟ್ಟು ಪೂಜಿಸುತ್ತಾರೆ. ಅನೇಕರು ರಾತ್ರಿ ಪೂಜೆಯವರೆಗೆ ಉಪವಾಸವಿರುತ್ತಾರೆ.

ಭಾದ್ರಪದ ಮಾಸದ ಶುಕ್ಲಪಕ್ಷದ ಗಣೇಶ ಚತುರ್ಥಿಯು ಒಂದು ಜನಪ್ರಿಯ ಹಬ್ಬವಾಗಿದೆ. ಈ ದಿನದಂದು ಗಣಪತಿಯನ್ನು ವಿಘ್ನ ನಿವಾರಕನೆಂದು ಸಾಮಾನ್ಯವಾಗಿ ಮಣ್ಣಿನಿಂದ ಮಾಡಿದ ಗಣಪತಿಯನ್ನು ಪ್ರತಿಷ್ಠಾಪಿಸಿ, ವಿವಿಧ ರೀತಿಯಲ್ಲಿ ಆಲಂಕರಿಸಿ, ಭಕ್ತಿಪೂರಕವಾಗಿ ಪೂಜಿಸಿ, ಭಕ್ಷ್ಯಬೋಜ್ಯಗಳನ್ನು ನೈವೇದ್ಯ ಮಾಡಿ ಧೂಪ ದೀಪಗಳನ್ನು ಬೆಳಗುತ್ತಾರೆ.

ಈ ಹಬ್ಬವನ್ನು ಮನೆಗಳಲ್ಲಿ ಆಚರಿಸುವುದಲ್ಲದೇ ಸಾರ್ವಜನಿಕವಾಗಿಯೂ ಆಚರಿಸುವುದುಂಟು ಹಾಗೂ ಈ ಸಂದರ್ಭದಲ್ಲಿ ಹಲವೆಡೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯುವುವು. ಗಣೇಶನ ಹಬ್ಬದ ಮರುದಿನ ಋಷಿ ಪಂಚಮಿಯನ್ನು ಕೆಲವರು ಆಚರಿಸುವುದು ಉಂಟು. ಭಾದ್ರಪದ ಶುದ್ಧ ಆರನೇ ದಿನದಿಂದ ಹದಿನಾಲ್ಕನೇ ದಿನದವರೆಗೆ ಜೋಕುಮಾರನ ಹಬ್ಬವನ್ನು ಆಚರಿಸುವುದುಂಟು. ಮಹಾಲಯ ಅಮಾವಾಸ್ಯೆಯನ್ನು ಹಿರಿಯರ ಹಬ್ಬವೆಂದು ಹಲವರು ಆಚರಿಸುತ್ತಾರೆ.

ಆಶ್ವಯುಜ ಶುದ್ಧ ಮೊದಲನೇ ದಿನ ನವರಾತ್ರಿ ಪಾಡ್ಯವಾಗಿದ್ದು ಈ ಹಬ್ಬವನ್ನು ಹತ್ತು ದಿನಗಳೂ ಹಿಂದೂಗಳು ದಸರಾ ಹಬ್ಬವಾಗಿ ಆಚರಿಸುತ್ತಾರೆ. ನವರಾತ್ರಿಯ ಏಳನೇಯ ದಿನ (ಸಪ್ತಮಿ) ಸರಸ್ವತಿಯನ್ನು, ಎಂಟನೇಯ ದಿನ (ಅಷ್ಟಮಿ) ಶಕ್ತಿ ದೇವತೆಯಾದ ದುರ್ಗಾದೇವಿಯನ್ನು, ಒಂಭತ್ತನೇಯ ದಿನ (ಮಹಾನವಮಿ) ಆಯುಧ ಪೂಜೆಯನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಯಂತ್ರೋಪಕರಣಗಳನ್ನೂ ಹಾಗೂ ವಿವಿಧ ವೃತ್ತಿಗೆ ಸಂಬಂಧಿಸಿದ ಉಪಕರಣಗಳನ್ನೂ ಪೂಜಿಸುವುದುಂಟು. ಹತ್ತನೇಯ ದಿನ ವಿಜಯದಶಮಿಯನ್ನು ಆಚರಿಸುತ್ತಾರೆ. ಈ ದಿನಕ್ಕೆ ಬನ್ನಿಯ ಹಬ್ಬವೆಂದು ಕರೆಯುತ್ತಾರೆ. ದೇವರಿಗೆ ಶಮೀಪತ್ರೆ ಅರ್ಪಿಸಿ, ಜನರು ತಾವೂ ತಮ್ಮ ತಮ್ಮಲ್ಲಿ ಬಂಗಾರವೆಂದು ಶಮಿಪತ್ರೆಗಳನ್ನು ಹಂಚಿಕೊಂಡು 'ಬನ್ನಿ ಪಡೆದು ಬಂಗಾರದಂತಿರೋಣ' ಎಂದು ಪರಸ್ಪರ ಹಾರೈಸುತ್ತಾರೆ. ಮನೆಗಳಲ್ಲಿ ಗೊಂಬೆ ಪ್ರದರ್ಶನಗಳು ದಸರಾ ಹಬ್ಬದ ಒಂದು ವಿಶೇಷತೆಯಾಗಿರುತ್ತವೆ.

ದೀಪಾವಳಿಯೆಂದರೆ ಮನೆಗಳಲ್ಲಿ ಬೆಳಕನ್ನು ಚೆಲ್ಲುವ ಹಬ್ಬ. ಈ ಹಬ್ಬವು ಆಶ್ವಯುಜ ಬಹುಳ ಹದಿಮೂರನೇಯ ದಿನ (ತ್ರಯೋದಶಿ) ಆರಂಭವಾಗಿ ಐದು ದಿನಗಳು ನಡೆಯುತ್ತದೆ. ತ್ರಯೋದಶಿಯನ್ನು ನೀರು ತುಂಬುವ ಹಬ್ಬವೆಂದು ಆಚರಿಸುತ್ತಾರೆ. ಚತುರ್ದಶಿಯ ದಿನ ಮನೆಯವರೆಲ್ಲರೂ ತೈಲಾಭ್ಯಂಜನ ಮಾಡಿ, ದೇವರನ್ನು ಪೂಜಿಸಿ ಸಿಹಿಯೂಟವನ್ನು ಮಾಡುತ್ತಾರೆ. ಸದರಿ ದಿನದಂದು ನರಕಾಸುರನ ವಧೆಯ ದಿನವೆಂದು ಆಚರಿಸುತ್ತಾರೆ. ಅಮಾವಾಸ್ಯೆಯ ದಿನ ಸಂಜೆಯಲ್ಲಿ ಲಕ್ಷ್ಮಿ ಪೂಜೆಯನ್ನು ಹಣ ಹಾಗೂ ಒಡವೆ ವಸ್ತುಗಳನ್ನಿಟ್ಟು ಆಚರಿಸುತ್ತಾರೆ. ವರ್ತಕರಿಗಂತೂ ಇದು ವಿಶೇಷ ಪೂಜೆಯೆನಿಸಿಕೊಂಡಿದೆ. ಕಾರ್ತಿಕ ಶುದ್ಧ ಪಾಡ್ಯದ ದಿನ ಪವಿತ್ರ ದಿನವೆಂದು ದೇವಸ್ಥಾನಗಳಿಗೆ ಹೋಗಿ ಬರುವ ಸಂಪ್ರದಾಯವೂ ಇದೆ. ಬಿದಿಗೆದಿನ ಬಾವ ಬಿದಿಗೆ ಎಂದು ಆಚರಿಸುವುದುಂಟು. ಸದರಿ ದಿನದಂದು ಅಕ್ಕತಂಗಿಯರು ಅಣ್ಣ ತಮ್ಮಂದರಿಗೆ ಆರತಿ ಬೆಳಗಿ ಹಬ್ಬ ಆಚರಿಸುವುದೂ ಹಾಗೂ ತದಿಗೆ ದಿನ ಅಣ್ಣತಮ್ಮಂದಿರು ಅಕ್ಕತಂಗಿಯರಿಗೆ ಸಿಹಿಊಟ ಹಾಕುವುದೂ ಸಂಪ್ರದಾಯವಿದೆ. ದೀಪಾವಳಿ ಸಂದರ್ಭದಲ್ಲಿ ಮನೆಯನ್ನು ಸ್ವಚ್ಛಗೊಳಿಸಿ ಹಸಿರು ತೋರಣಗಳಿಂದ ಹಾಗೂ ರಂಗವಲ್ಲಿಯಿಂದ ಅಲಂಕರಿಸುವುದೂ, ಪಟಾಕಿಗಳನ್ನೂ ಹಾರಿಸುವುದೂ ಮತ್ತು ಆಕಾಶ ಬುಟ್ಟಿಯನ್ನು ಹಾರಿಬಿಡುವುದೂ ಹಬ್ಬದ ವೈಶಿಷ್ಟ್ಯವಾಗಿದೆ ಮತ್ತು ಪಗಡೆಯಾಟ ಆಡುವುದು ಒಂದು ಸಂಪ್ರದಾಯವಾಗಿದೆ. ಈ ಹಬ್ಬದ ಸಂದರ್ಭದಲ್ಲಿ ಹುಲ್ಲಿನಿಂದ ಏಳುಹೆಡೆಯ ಆಕಾರದ ವಿನ್ಯಾಸ ಮಾಡಿ ಅದರೊಳಗೆ ದೀಪವನ್ನಿಟ್ಟು ಹಸುಗಳಿಗೆ ಬೆಳಗುತ್ತಾರೆ. ಇದಕ್ಕೆ ಅಣಿಪೀಣಿ ಎಂದು ಹೆಸರು. ಈ ಸಂದರ್ಭದಲ್ಲಿ ಹಾಡನ್ನು ಹಾಡುತ್ತಾರೆ. ಇದರಿಂದ ದನಕರುಗಳಿಗೆ ರೋಗ ರುಜನಗಳು ಬರುವುದಿಲ್ಲವೆಂಬ ನಂಬಿಕೆಯಿಂದ. ಗೌಳಿಗರು, ಕೋಣವನ್ನು ಮೆರೆಸುತ್ತಾರೆ. ಕಾರ್ತೀಕ ಶುದ್ಧ ದ್ವಾದಶಿಯ ದಿನ ತುಳಸಿಯ ಲಗ್ನವೆಂದು ತುಳಸಿ ಹಬ್ಬವನ್ನು ಆಚರಿಸುವುದುಂಟು. ಈ ದಿನ ತುಳಸಿಕಟ್ಟೆಯನ್ನು ಅಲಂಕರಿಸಿ ಸಂಜೆಗೆ ತುಳಸಿಯನ್ನು ಪೂಜಿಸುತ್ತಾರೆ. ಕಾರ್ತಿಕ ಶುದ್ಧ ಚತುರ್ದಶಿಯ ದಿನ ವೈಕುಂಠ ಚತುರ್ದಶಿಯನ್ನು ಕೆಲವರು ಆಚರಿಸುವುದುಂಟು. ಈ ದಿನ ರಾತ್ರಿ ಪೂಜೆ ಮಾಡಿ ವನ ಭೋಜನ ಮಾಡುವ ಸಂಪ್ರದಾಯವಿದೆ.

ಮಾರ್ಗಶಿರ ಹುಣ್ಣಿಮೆಯ ದಿನ ದತ್ತಾತ್ರೇಯನ ಭಕ್ತರು ದತ್ತ ಜಯಂತಿಯನ್ನು ಆಚರಿಸುವುದುಂಟು. ಈ ದಿನ ಗಾಣಗಾಪುರದಲ್ಲಿ ದತ್ತಾತ್ರೆಯನ ರಥೋತ್ಸವವು ನಡೆಯುತ್ತದೆ ಮತ್ತು ಅನೇಕರು ಗಾಣಗಾಪುರಕ್ಕೆ ಹೋಗಿ ದತ್ತಾತ್ರೇಯನ ದರ್ಶನ ಪಡೆಯುವುದುಂಟು. ಮಾರ್ಗಶಿರ ಅಮಾವಾಸ್ಯೆಯನ್ನು ಎಳ್ಳು ಅಮಾವಾಸ್ಯೆ ಎಂದು ಆಚರಿಸುತ್ತಾರೆ. ಸದರಿ ದಿನದಂದು ಕೃಷಿಕರು ಎಳ್ಳು ಹೋಳಿಗೆ, ಜೋಳ, ಗೋಧಿ ಹಾಗೂ ಸಜ್ಜೆಯ ಹಿಟ್ಟಿನಿಂದ ತಯಾರಿಸಿದ ಕಡುಬು, ಕಿಚಡಿ ಮೊದಲಾದ ಭಕ್ಷ್ಯಗಳನ್ನು ತಯಾರಿಸಿ ಹೊಲ ಗದ್ದೆಗಳಿಗೆ ಕೊಂಡೊಯ್ದು ಪಾಂಡವರ ಪೂಜೆ ಮಾಡಿ ಚೆರಗ ಚೆಲ್ಲಿ ಊಟ ಮಾಡುವರು.

ಪುಷ್ಯಮಾಸದ ಹುಣ್ಣಿಮೆಯನ್ನು ಅನೇಕರು ಬನದ ಹುಣ್ಣಿಮೆಯೆಂದು ಆಚರಿಸುವುದೂ ಹಾಗೂ ಬನಶಂಕರಿಯಲ್ಲಿ ನಡೆಯುವ ಜಾತ್ರೆಗೆ ಹೋಗುವುದೂ ಉಂಟು. ಪ್ರತಿ ಜನವರಿ ಹದಿನಾಲ್ಕು ಅಥವಾ ಹದಿನೈದನೇಯ ದಿನಾಂಕಕ್ಕೆ ಸಂಕ್ರಾಂತಿ ಹಬ್ಬವನ್ನು ಆಚರಿಸುವುದು ಸಂಪ್ರದಾಯವಾಗಿದೆ. ಈ ಹಬ್ಬದಲ್ಲಿ ಬಂಧುಮಿತ್ರರು ಪರಸ್ಪರ ಎಳ್ಳು-ಬೆಲ್ಲ ಕೊಟ್ಟು ಸ್ನೇಹಭಾವದಿಂದ ಸಿಹಿಯಾಗಿರೋಣ ಎಂದು ಅಭಿನಂದಿಸುತ್ತಾರೆ. ಮಾಘ ಶುದ್ಧ ಸಪ್ತಮಿಯಂದು ರಥ ಸಪ್ತಮಿಯನ್ನು ಆಚರಿಸುತ್ತಾರೆ. ಸೂರ್ಯನನ್ನು ಪೂಜಿಸುವುದು ಈ ಹಬ್ಬದ ವೈಶಿಷ್ಟ್ಯವಾಗಿದೆ. ಈ ಸಮಯಕ್ಕೆ ಸೂರ್ಯನ ಉತ್ತರಾಯಣವಾಗುತ್ತದೆ.

ಮಾಘಮಾಸದ ಅಮಾವಾಸ್ಯೆಯ ಹಿಂದಿನ ದಿನ ಮಹಾಶಿವರಾತ್ರಿ. ಶಿವಭಕ್ತರಿಗೆ ಇದು ಮಹತ್ವಪೂರ್ಣವಾದ ಆಚರಣೆಯಾಗಿದೆ. ಈ ದಿನ ಉಪವಾಸವನ್ನು ಕೈಗೊಂಡು ಶಿವನನ್ನು ಪೂಜಿಸುವುದಲ್ಲದೆ, ಶಿವದೇವಾಲಯಗಳಿಗೆ ಹೋಗಿ ಪೂಜೆ ಸಲ್ಲಿಸಿ, ಭಕ್ತಿಪರಭಜನೆ, ಸಂಗೀತ ಮೊದಲಾದ ಕಾರ್ಯಕ್ರಮಗಳ ಮೂಲಕ ರಾತ್ರಿ ಜಾಗರಣೆ ಮಾಡುವ ಸಂಪ್ರದಾಯವೂ ಇದೆ.

ಫಾಲ್ಗುಣ ಮಾಸದ ಹುಣ್ಣಿಮೆಯ ದಿನ ಹೋಳಿ ಅಥವ ಕಾಮನ ಹಬ್ಬವನ್ನು ಆಚರಿಸುತ್ತಾರೆ. ಸದರಿ ದಿನ ದಹನ ಮಾಡಲು ಸುಲಭವಾದ ಸಾಮಗ್ರಿಯಿಂದ ಕಾಮನ ಪ್ರತಿಮೆ ತಯಾರಿಸಿ,ಊರಿನ ಪ್ರಮುಖ ಕೇಂದ್ರಗಳಲ್ಲಿ ಸ್ಥಾಪಿಸಿ, ಸಂಜೆಯಲ್ಲಿ ದಹನ ಮಾಡುವರು, ಆ ದಿವಸ ಬಣ್ಣದ ನೀರಿನಿಂದ ಓಕಳಿ ಆಡುವರು. ಶ್ರೀರಾಮನವಮಿ,ಶಂಕರಜಯಂತಿ, ಬಸವಜಯಂತಿ, ದತ್ತಜಯಂತಿ, ಗಣೇಶೋತ್ಸವ ಇವೇ ಮೊದಲಾದ ಹಬ್ಬಗಳನ್ನು ಅನೇಕ ಸಂಘ-ಸಂಸ್ಥೆಗಳು ಸಾರ್ವಜನಿಕವಾಗಿ ಆಚರಿಸುವುದುಂಟು.

### ಜೈನರ ಹಬ್ಬಗಳು

ಅನೇಕ ಹಿಂದೂ ಹಬ್ಬಗಳನ್ನು ಜೈನರು ತಮ್ಮ ಪರಂಪರೆಗೆ ಅನುಸಾರವಾಗಿವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ. ಚೈತ್ರ ಪ್ರತಿ ಪದೆಯ ಯುಗಾದಿಯನ್ನು ಆದಿ ತೀರ್ಥಂಕರನಾದ ವೃಷಭದೇವ ಅಥವಾ ಅಧಿನಾಥನ ಮಗನಾದ ಭರತನ ವಿಜಯ ದಿನವೆಂದು ಆಚರಿಸುತ್ತಾರೆ. ಚೈತ್ರಶುದ್ಧ ತ್ರಯೋದಶಿಯಂದು ಮಹಾವೀರ ಜಯಂತಿಯನ್ನು ಆಚರಿಸುತ್ತಾರೆ. ವೈಶಾಖ ಶುದ್ಧ ಅಕ್ಷಯತೃತೀಯ ದಿನ ಶ್ರೇಯಸ್ ಅರಸನು ಆದಿನಾಥ ತೀರ್ಥಂಕರನಿಗೆ ದೀರ್ಘ ಉಪವಾಸದ ಪಾರಣೆಗೆ ಆಹಾರ ದಾನ ಮಾಡಿದ್ದರ ನೆನಪಿಗಾಗಿ ದಾನಗಳನ್ನು ಮಾಡುವರು. ಭಾದ್ರಪದದಲ್ಲಿ ಬರುವ ಗೌರಿ ಹಬ್ಬವನ್ನು. ಹಿಂದೂಗಳಂತೆ ಅಚರಿಸುತ್ತಾರೆ. ಗೌರಿಯು ಹನ್ನೊಂದನೇಯ ತೀರ್ಥಂಕರನ ಯಕ್ಷಿಯೆಂದು ಜೈನರಿಗೆ ಪೂಜ್ಯಳು. ಜೈನಧರ್ಮಿಯರು ಭಾದ್ರಪದ ಶುದ್ಧ ಪಂಚಮಿಯಿಂದ ಚತುರ್ದಶಿಯವರೆಗೆ (೧೦ ದಿವಸಗಳು) ದಶಲಕ್ಷಣ ಪರ್ವಕಾಲವೆಂದು ಆಚರಿಸುತ್ತಾರೆ. ಈ ಅವಧಿಯು ಇವರಿಗೆ ಧಾರ್ಮಿಕ ಆಚರಣೆಯ ಮಹತ್ವದ ದಿವಸಗಳಾಗಿದ್ದು ಇವರ ಮನೆಗಳಲ್ಲೂ ಹಾಗೂ ಜಿನಮಂದಿರಗಳಲ್ಲೂ ವಿಶೇಷ ಪೂಜೆ ಹಾಗೂ ಉಪನ್ಯಾಸಗಳು ನಡೆಯುತ್ತವೆ. ನವರಾತ್ರಿಯ ಅಷ್ಟಮಿಯಲ್ಲಿ ಉಪವಾಸ ಕೈಗೊಂಡು ಪ್ರಾಣಿಗಳಲ್ಲಿ ದಯೆ ಹಾಗೂ ಅಹಿಂಸೆಯ ಆಚರಣೆಯ ಪುರಾಣ ಕಥೆಗಳನ್ನು ಹೇಳುವರು. ಇದಕ್ಕೆ ಜೀವದಯಾಷ್ಟಮಿ ಎನ್ನುವರು. ಮಹಾನವಮಿಯು ಯಕ್ಷಿ-ಪದ್ಮಾವತಿ ದೇವಿಗೆ ಮೀಸಲಾದ ಪೂಜಾದಿನ. ವಿಜಯದಶಮಿಯಂದು ಭರತನು ಸೀಮೋಲ್ಲಂಘನ ಮಾಡಿದ ನೆನಪಿಗಾಗಿ ಹಬ್ಬವನ್ನು ಆಚರಿಸಿ, ಬಡವರಿಗೆ ದಾನ-ಧರ್ಮಗಳನ್ನು ಮಾಡುವರು. ದೀಪಾವಳಿಯನ್ನು ಮಹಾವೀರನ ಮಹಾನಿರ್ವಾಣದ ದಿನವೆಂದು ಆಚರಿಸಿ ಲಕ್ಷ್ಮೀದೇವಿಯನ್ನು ಪೂಜಿಸುತ್ತಾರೆ. ಶಿವರಾತ್ರಿಯನ್ನು ಜಿನರಾತ್ರಿಯೆಂದು ಕರೆದು ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬಗಳಲ್ಲದೇ ಇವರು ಇನ್ನೂ ಅನೇಕ ಉಪವಾಸ ಮತ್ತು ವ್ರತಗಳನ್ನು ಆಚರಿಸುವುದುಂಟು. ಇವರ ಹಬ್ಬಗಳಲ್ಲಿ ಉಪವಾಸ ಹಾಗೂ ದಾನ-ಧರ್ಮಗಳಿಗೆ ಹೆಚ್ಚಿನ ಮಹತ್ವವಿದೆ.

### ಮುಸ್ಲಿಮರ ಹಬ್ಬಗಳು

ಮುಸ್ಲಿಮರ ಪ್ರಮುಖ ಹಬ್ಬಗಳೆಂದರೆ ಈದ್-ಉಲ್-ಫಿತರ್ ಅಥವಾ ರಮ್‌ಜಾನ್ ತಿಂಗಳ ಕೊನೆಯಲ್ಲಿ ಬರುವ ಉಪವಾಸ ಮುಗಿದ ಮಾರನೆಯ ದಿನ ಮತ್ತು ಜಿಲ್-ಹಾಜ್ ತಿಂಗಳ ಹತ್ತನೆಯ ದಿನ ಬರುವ ಇದ್-ಉಲ್-ಜಾಹಾ ಅಥವಾ ಬಕ್ರೀದ್. ಇಡೀ ರಮ್‌ಜಾನ್ ತಿಂಗಳಲ್ಲಿ ಮುಸ್ಲಿಮರು ಮುಂಜಾವಿನೊಡನೆ ಉಪವಾಸ ಪ್ರಾರಂಭಿಸಿ

ಹೊತ್ತು ಮುಳುಗುವಾಗ ಊಟ ಮಾಡುತ್ತಾರೆ. ಈ ಹಬ್ಬಗಳಲ್ಲಿ ಇವರು ಈದ್ ಮೈದಾನಕ್ಕೆ ಗುಂಪಿನಲ್ಲಿ ಹೋಗಿ ಪ್ರಾರ್ಥನೆಯನ್ನು ಮಾಡುತ್ತಾರೆ. ರಂಜಾನ್ ಹಬ್ಬದಲ್ಲಿ ಇವರು ಬಡಬಗ್ಗರಿಗೆ ದಾನ-ಧರ್ಮಗಳನ್ನು ಮಾಡುವುದು ಮಹತ್ವವಾಗಿದೆ. ಶಾಬಾನ ತಿಂಗಳ ಹದಿನೈದನೆಯ ದಿವಸದಲ್ಲಿ ಬರುವ ಶಬ್-ಎ-ಬರಾತ್ ಹಬ್ಬವನ್ನು ಸಂಜೆಗೆ ಸಾಂಗಗೊಳಿಸುವರು ಮತ್ತು ಆ ಮಹತ್ವದ ಪುಣ್ಯ ದಿನದಲ್ಲಿ ಮುಸ್ಲಿಮರು ಮಸೀದಿಗಳಲ್ಲಿ ಇಡೀ ರಾತ್ರಿ ಪ್ರಾರ್ಥನೆ ಸಲ್ಲಿಸುವರು. ಪೈಗಂಬರರ ಜನ್ಮ ದಿನವಾದ ಮಿಲಾದ್-ಉನ್-ನಬಿ(ಈದ್ ಮಿಲಾದ್) ಹಾಗೂ ಮೊಹರಂ ಮುಸಲಾನ್ಮರು ಆಚರಿಸುವ ಇತರ ಮುಖ್ಯ ಹಬ್ಬಗಳಾಗಿವೆ. ಮೊಹರಂ ಅನ್ನು ತಾಬೂತ್ ಎಂಬ ಪ್ರತೀಕವಿಟ್ಟು ಆಚರಿಸುವ ಪದ್ಧತಿಯಿದ್ದು, ಹಿಂದೂಗಳೂ ಇದರಲ್ಲಿ ಪಾಲ್ಗೊಳ್ಳುತ್ತಾರೆ.

## ಕ್ರೈಸ್ತರ ಹಬ್ಬಗಳು

ಕ್ರೈಸ್ತರು ಜನವರಿ ಒಂದನೇ ತಾರೀಖನ್ನು ಹೊಸ ವರ್ಷದ ಆರಂಭದ ದಿನವೆಂದು ಆಚರಿಸುತ್ತಾರೆ. ಗುಡ್‌ಫ್ರೈಡೇ, ಈಸ್ಟರ್ ಸಂಜೆ (ಪುನರುತ್ಥಾನದ ದಿನ), ಸೆಪ್ಟಂಬರ್ ಎಂಟರಂದು ಕ್ಯಾಥೋಲಿಕರು ಸಂತ ಮೇರಿ ಹುಟ್ಟಿದ ಹಬ್ಬವನ್ನು ಚರ್ಚಿನಲ್ಲಿ ಆಚರಿಸುತ್ತಾರೆ. ಡಿಸೆಂಬರ್ ಇಪ್ಪತ್ತೈದರಂದು ಬರುವ ಕ್ರಿಸ್‌ಮಸ್ ಹಬ್ಬವು ಕ್ರೈಸ್ತರಿಗೆ ಬಹು ಮುಖ್ಯವಾದ ಹಬ್ಬವಾಗಿದೆ. ಚರ್ಚಿನಲ್ಲಿ ಹಿಂದಿನ ರಾತ್ರಿ ಸಾಮೂಹಿಕ ಪ್ರಾರ್ಥನೆ ಮಾಡುತ್ತಾರೆ. ಬಣ್ಣದ ನಕ್ಷತ್ರ ದೀಪಗಳನ್ನು ಮನೆಯ ಹೊರಗೆ ತೂಗು ಬಿಡುತ್ತಾರೆ. ಮನೆಯಲ್ಲಿ ಕ್ರಿಸ್‌ಮಸ್ ಟ್ರೀ ಇಟ್ಟು ಅಲಂಕರಿಸುತ್ತಾರೆ. ಮಿತ್ರರಿಗೆ ಕೇಕ್ ಹಂಚುತ್ತಾರೆ.

## ಜಾತ್ರೆಗಳು

ಒಂದು ಪ್ರದೇಶದ ಸಮಷ್ಟ ಜೀವನದ ಸಾಂಸ್ಕೃತಿಕ ಅವಿಭಾಜ್ಯ ಅಂಗಗಳಾಗಿ ಪಾರಂಪರಿಕವಾಗಿ ಜಾತ್ರೆಗಳು ಇಂದಿಗೂ ನಡೆದುಕೊಂಡು ಬರುತ್ತಿವೆ. ಆರ್ಥಿಕ, ಸಾಮಾಜಿಕ, ಬದಲಾವಣೆಗಳನ್ನು ಅನುಸರಿಸಿ ಇವುಗಳ ಆಚರಣೆಯಲ್ಲಿಯೂ ಹಲವಾರು ಬದಲಾವಣೆಗಳಾಗಿವೆ. ಇಂದು ಬಹುಪಾಲು ಹಿಂದಿನ ಆಚರಣೆಗಳು ಅಂದರೆ ಪಶುಬಲಿ, ಸಿಡಿ ಆಡುವುದು ಬೆತ್ತಲುಸೇವೆ, ದೇವದಾಸಿ,ಬಸವಿ ಬಿಡುವುದು ಮುಂತಾದ ಆಚರಣೆಗಳನ್ನು ಕಾನೂನು ರೀತ್ಯ ನಿರ್ಬಂಧಿಸಲಾಗಿದೆ. ಪ್ರತಿವರ್ಷ ಸಾಮಾನ್ಯವಾಗಿ ಸುಗ್ಗಿಯ ನಂತರ, ಗ್ರಾಮ ದೇವತೆಗಳಿಗೆ ಜನರು ತಮ್ಮ ಭಕ್ತಿ-ಗೌರವವನ್ನು ಸಲ್ಲಿಸುವ ಸಲುವಾಗಿ ಜಾತ್ರೆಗಳನ್ನು ನಡೆಸುವುದು ಸ್ವಾಭಾವಿಕವಾಗಿ ಕಂಡುಬರುತ್ತದೆ. ಹಿಂದೂ ದೇವಾಲಯಗಳಲ್ಲಿ, ಜೈನರ ಬಸದಿಗಳಲ್ಲಿ ಮುಸಲ್ಮಾನರ ದರ್ಗಾಗಳಲ್ಲಿ ಮತ್ತಿತರ ಪವಿತ್ರ ಪೂಜಾಸ್ಥಾನಗಳಲ್ಲಿ ಜನರು ವಾರ್ಷಿಕ ಉತ್ಸವಗಳನ್ನು ಏರ್ಪಡಿಸುವರು. ಹಳ್ಳಿಪಟ್ಟಣಗರೆಂಬ, ಜಾತಿ-ಮತಗಳೆಂಬ ಬೇಧಭಾವವಿಲ್ಲದೆ ಸ್ತ್ರೀ-ಪುರುಷರು ಜಾತ್ರೆಗಳಲ್ಲಿ ಭಾಗವಹಿಸುವುದು ಒಂದು ವೈಶಿಷ್ಟ್ಯವಾಗಿರುತ್ತದೆ. ಜಾತ್ರೆಗಳು ಸಾಮಾಜಿಕ ಜೀವನದ ಒಂದು ಪ್ರಧಾನ ಅಂಶವಾಗಿದ್ದು ಇದರಲ್ಲಿ ಭಾಗವಹಿಸುವ ಜನರಿಗೆ ಮನರಂಜನೆಯನ್ನು ಒದಗಿಸುತ್ತದೆ. ಜಾತ್ರೆಯ ಸಮಯದಲ್ಲಿ ಉತ್ಸವ ಮೂರ್ತಿಯನ್ನು ರಥ(ತೇರು)ದಲ್ಲಿರಿಸಿ ರಥೋತ್ಸವ ನಡೆಸುವರು ಅಥವಾ ಪಲ್ಲಕ್ಕಿಯಲ್ಲಿಟ್ಟು ಹೊತ್ತುತಂದು ವಾದ್ಯದ ಸಹಿತ ಮೆರವಣಿಗೆ ಹೋಗುವರು. ಇದೇ ಸದರ್ಭದಲ್ಲಿ ಕೆಲವು ಕಡೆಗಳಲ್ಲಿ ದನದ ಜಾತ್ರೆಯೂ ನಡೆಯುತ್ತದೆ. ಜಾತ್ರೆಗಳು ಗ್ರಾಮೀಣ ಜನರಿಗೆ ತಾವು ಉತ್ಪಾದಿಸುವ ಸರಕುಗಳನ್ನು ಮಾರಾಟ ಮಾಡಲು ಹಾಗೂ ತಮಗೆ ಅವಶ್ಯಕವಿರುವ ಪಾತ್ರೆ-ಪರಡಿ,ಬಟ್ಟೆ-ಬರೆ ಇವೇ ಮುಂತಾದ ಸರಕುಗಳನ್ನು ಕೊಳ್ಳಲು ಒಂದು ಅವಕಾಶವನ್ನು ಕಲ್ಪಿಸಿದೆ. ಈ ಜಿಲ್ಲೆಯಲ್ಲಿ ಅನೇಕ ಮುಸ್ಲೀಮ ಸಂತರ (ಸೂಫಿಸಂತರ) ಸಂಪರ್ಕ ಹೊಂದಿದ್ದ ಸ್ಥಳಗಳು ಇದ್ದು, ಅವುಗಳು ಇಂದಿಗೂ ಮತೀಯ ಸಾಮರಸ್ಯದ ಸಂಕೇತಗಳಾಗಿವೆ.ಅವರ ಸ್ಮರಣಾರ್ಥ ಉರುಸ್‌ಗಳು ಇಸ್ಲಾಮ್ ಪಂಚಾಂಗದ ಅನುಸಾರ ನಡೆಯುತ್ತವೆ. ಕ್ಯಾಥೋಲಿಕ್ ಚರ್ಚ್‌ಗಳಲ್ಲಿ ಸೆಪ್ಟೆಂಬರ್ ಎಂಟಕ್ಕೆ ಸಂತಮೇರಿ ಉತ್ಸವ ಆಚರಿಸುತ್ತಾರೆ. ಗುಲಬರ್ಗಾ ಜಿಲ್ಲೆಯಲ್ಲೂ ಸಹ ಅನೇಕ ಕಡೆಗಳಲ್ಲಿ ಜಾತ್ರೆ ಮತ್ತು ಉರುಸ್‌ಗಳು ನಡೆಯುತ್ತವೆ. ಜಿಲ್ಲೆಯಲ್ಲಿ ಆಚರಿಸುವ ಕೆಲವು ಪ್ರಮುಖ ಜಾತ್ರೆ ಹಾಗೂ ಉರುಸ್‌ಗಳನ್ನು ಈ ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ. ಹಿಂದೂ ಹಾಗೂ ಮುಸ್ಲಿಂ ಪಂಚಾಂಗದಂತೆ ಜಾತ್ರೆ ಅಥವ ಉರುಸ್ ನಡೆಯುವ ದಿನಗಳು ಲಭ್ಯವಿಲ್ಲದಿರುವ ಕಡೆ ಸಾಮಾನ್ಯವಾಗಿ ಬರುವ ಇಂಗ್ಲೀಷ್ ತಿಂಗಳನ್ನು ಸೂಚಿಸಲಾಗಿದೆ. ಇದು ವ್ಯತ್ಯಾಸವಾಗಬಹುದು.

| ದೇವತೆ : ಸಂತರ ಹೆಸರು | ಜಾತ್ರೆ : ಉರುಸು ನಡೆಯುವ ಸ್ಥಳ | ಜಾತ್ರೆ : ಉರುಸ್ ನಡೆಯುವ ತಿಂಗಳು | ಜಾತ್ರೆಗೆ ಸೇರುವ ಅಂದಾಜು ಜನ ಸಂಖ್ಯೆ | ದನದ ಜಾತ್ರೆ |
|---|---|---|---|---|
| ೧ | ೨ | ೩ | ೪ | ೫ |
| **ಅಫಜಲ್‌ಪುರ ತಾಲೂಕು** | | | | |
| ರೇವಣ್ಣ ಸಿದ್ದೇಶ್ವರ | ಹಾವಳಗಿ | ಜನವರಿ ೧೪ | ೧೦ ಸಾವಿರ | ಇದೆ. |
| ಬಸವೇಶ್ವರ | ಬಳೂರಗಿ | ಏಪ್ರಿಲ್ /ಮೇ | ೮-೧೦ | ಇಲ್ಲ |
| ಯಲ್ಲಾಲಿಂಗ ಮಹರಾಜ ಸಿದ್ದಿಪರುಷರು | ಕರಜಗಿ | ಮಾರ್ಚ್ | ೧೦-೧೫ ಸಾವಿರ | ಇಲ್ಲ |
| ಖಾಜಾ ಸ್ವೆಫನ್ ಸಾಹೇಬ ಮುಲ್ಕ | ಕರಜಗಿ | ಅಕ್ಟೋಬರ್ | ೧೦-೧೨ ಸಾವಿರ | ಇಲ್ಲ |
| ಯಲ್ಲಮ್ಮದೇವಿ | ಮಣ್ಣೂರು | ಅಗಿಹುಣಿಮೆ | ೫-೧೦ ಸಾವಿರ | ಇಲ್ಲ |
| ಚೌಡೇಶ್ವರಿ | ಮಾಶಾಳ | ಬಾದಾಮಿ ಅಮಾವಾಸ್ಯೆ | ೧೫-೨೦ ಸಾವಿರ | ಇಲ್ಲ |
| ಶಂಕರಲಿಂಗ ಮಹಾರಾಜ | ಉಡಚಣ | ಕಾರ್ತಿಕಮಾಸ | ೧೦ ಸಾವಿರ | ಇಲ್ಲ |
| ಹುಚ್ಚುಲಿಂಗೇಶ್ವರ | ಉಡಚಣ | ಮಾರ್ಚ್ | ೧೦-೧೨ ಸಾವಿರ | ಇಲ್ಲ |
| ಹೊನ್ನಲಿಂಗೇಶ್ವರ | ಭೋಸಗಾ | ಏಪ್ರಿಲ್ / ಮೇ | ೮-೧೦ ಸಾವಿರ | ಇಲ್ಲ |
| ಗಾಲಿಫಸಾಬ | ಸಾಗನೂರ | ನವೆಂಬರ್ | ೪-೫ ಸಾವಿರ | ಇಲ್ಲ |
| ಬಸವೇಶ್ವರ | ಸಾಗನೂರ | ಮೇ | ೫ ಸಾವಿರ | ಇಲ್ಲ |
| ಕಾಲಸಾಬ ಫುಲಾಲಿ | ಹಸರಗುಂಡಗಿ | ಜಟೂನ್ | ೫ ಸಾವಿರ | ಇಲ್ಲ |
| ಲಲಿತಾದೇವಿ | ಬಂದರವಾಡ | ನವೆಂಬರ್ | ೮ ಸಾವಿರ | ಇಲ್ಲ |
| ವೀರಭದ್ರೇಶ್ವರ | ಚಿಣಮಗೇರಿ | ನವೆಂಬರ್ | ೮ ಸಾವಿರ | ಇಲ್ಲ |
| ದಾವಲಮಲ್ಲಿಕ್ | ಭೈರಾಮಡಗಿ | ಏಪ್ರಿಲ್ | ೬ ಸಾವಿರ | ಇಲ್ಲ |
| ಮಲಕಣ್ಣದೇವರ | ಭೈರಾಮಡಗಿ | ಜೂನ್ | ೬ ಸಾಮಿರ | ಇಲ್ಲ |
| **ಆಳಂದ ತಾಲೂಕು** | | | | |
| ಮಹಾಪುರಕ್ರಾಯಿ | ಚಿಂಚನಸೂರು | ಏಪ್ರಿಲ್ | ೫-೮ ಸಾವಿರ | ಇಲ್ಲ |
| ಸಿದ್ಧೇಶ್ವರ | ಮುನ್ನಹಳ್ಳಿ | ಮೇ | ೫ ಸಾವಿರ | ಇಲ್ಲ |
| ಲಾಡ್ಲೇಮಶಾಖ ಸಾಬ್ ಉರುಸ್ | ಆಳಂದ | ರಂಜಾನ್‌ನಿಂದ ೯ನೇ ದಿನ | ೧೦ ಸಾವಿರ | ಇಲ್ಲ |
| ಹನುಮಾನ್ | ಆಳಂದ | ಏಪ್ರಿಲ್ | ೮-೧೦ ಸಾವಿರ | ಇಲ್ಲ |
| ಶರಣಬಸವೇಶ್ವರ | ನಿಂಬರ್ಗಿ | ಅಕ್ಟೋಬರ್ | ೧೦-೧೫ ಸಾವಿರ | ಇಲ್ಲ |
| ಬಾಬಾಸಾಹೇಬ | ಬಟ್ಟರಗಿ | ಮೇ | ೪-೫ ಸಾವಿರ | ಇಲ್ಲ |

| | | | | |
|---|---|---|---|---|
| **ಚಿಂಚೋಳಿ ತಾಲೂಕು** | | | | |
| ವೀರಭದ್ರೇಶ್ವರ | ಸುಲೇಪೇಟೆ | ಮೇ | ೫ ಸಾವಿರ | ಇಲ್ಲ |
| ಹಾರಕೂಡ ಚೆನ್ನಬಸವೇಶ್ವರ | ಚಿಂಚೋಳಿ | ಮಾರ್ಚ್ | ೬ ಸಾವಿರ | ಇಲ್ಲ |
| **ಚಿತ್ತಾಪುರ ತಾಲೂಕು** | | | | |
| ರೇವಣ್ಣ ಸಿದ್ಧೇಶ್ವರ | ರೇವಾಯಿ | ಆಗಸ್ಟ್ | ೩೫ ಸಾವಿರ | ಇಲ್ಲ |
| ಅಣ್ಣವೀರಭದ್ರೇಶ್ವರ | ಕೋರವಾರ | ಶಿವರಾತ್ರಿ | ೩೫ ಸಾವಿರ | ಇದೆ |
| ನಾಗಾಯಿಯಲ್ಲಮ್ಮ | ನಾಗಾಯಿ | ಸೆಪ್ಟೆಂಬರ್ | ೨೦ ಸಾವಿರ | ಇಲ್ಲ |
| ಚಂದ್ರಲಾಂಬೆ | ಸನ್ನತಿ | ಏಪ್ರಿಲ್ | ೩೫ ಸಾವಿರ | ಇಲ್ಲ |
| ಹನುಮಂತ | ಕೊಂಚೂರ | ಡಿಸೆಂಬರ್ | ೨೫ ಸಾವಿರ | ಇದೆ |
| ಮೊನ್ನಪ್ಪಅಯ್ಯ | ಅಳ್ಳೊಳ್ಳಿ | ಜನವರಿ | ೪೦ ಸಾವಿರ | ಇದೆ |
| ಬಸವಣ್ಣ | ದಂಡಗುಂಡ | ಆಗಸ್ಟ್ | ೨೦ ಸಾವಿರ | ಇಲ್ಲ |
| ಕೋರಿಸಿದ್ದೇಶ್ವರ | ನಾಲವಾರ | ಜನವರಿ | ೩೫ ಸಾವಿರ | ಇದೆ |
| ಶರಣ ಬಸವೇಶ್ವರ | ಶಹಾಬಾದ್ | ಏಪ್ರಿಲ್ | ೩೦ ಸಾವಿರ | ಇಲ್ಲ |
| ವೀರಭದ್ರೇಶ್ವರ | ಹಲಕರಟಿ | ಏಪ್ರಿಲ್ | ೨೦ ಸಾವಿರ | ಇಲ್ಲ |
| ಚಿತ್ತಾವಲ್ಲಿ ಉರುಸ್ | ಚಿತ್ತಾಪುರ | ಏಪ್ರಿಲ್ | ೨೦ ಸಾವಿರ | ಇಲ್ಲ |
| ಬಾಬಫಕ್ರೋದ್ದಿನ್ ಖಾದ್ರಿ ಉರುಸ್ | ಹಲಕರಟಿ | ಏಪ್ರಿಲ್ | ೨೫ ಸಾವಿರ | ಇಲ್ಲ |
| ಕೇರಿಮ್ಮ | ಭಂಕೂರ | ಜೂನ್ | ೩೦ ಸಾವಿರ | ಇಲ್ಲ |
| **ಗುಲಬರ್ಗಾ ತಾಲೂಕು** | | | | |
| ಶರಣಬಸವೇಶ್ವರ | ಗುಲಬರ್ಗಾ | ಮಾರ್ಚ್ | ೨೦ ಸಾವಿರ | ಇದೆ |
| ನವಾಬ್ ಉರುಸ್ | ಗುಲಬರ್ಗಾ | ಮಾರ್ಚ್ | ೧೧ ಸಾವಿರ | ಇಲ್ಲ |
| ಶರಣ ಬಸವೇಶ್ವರ | ಫರಹತಾಬಾದ್ | ಏಪ್ರಿಲ್ | ೬ ಸಾವಿರ | ಇಲ್ಲ |
| ಅಂಭ ಭವಾನಿ | ನಡುವಿನಹಳ್ಳಿ | ಏಪ್ರಿಲ್ | ೨೫ ಸಾವಿರ | ಇಲ್ಲ |
| ಖಲೀಫಿಕ್ ರಹಿಮಾನ್ | ಫಿರೋಜಾಬಾದ್ | ಜನವರಿ | ೧೦ ಸಾವಿರ | ಇಲ್ಲ |
| ಶರಣ ಬಸವೇಶ್ವರ | ಬೆಳಗುಂಪ | ಜನವರಿ | ೬ ಸಾವಿರ | ಇಲ್ಲ |
| ಸಾದುಶಿವಲಿಂಗೇಶ್ವರ | ಇಟಗಿ | ಏಪ್ರಿಲ್ | ೬ ಸಾವಿರ | ಇಲ್ಲ |
| ಶಿವಲಿಂಗೇಶ್ವರ | ಸಾವಳಗಿ(ಬಿ) | ಮಾರ್ಚ್ | ೫ ಸಾವಿರ | ಇಲ್ಲ |
| ಶಂಕರಲಿಂಗೇಶ್ವರ | ಗುಲಬರ್ಗಾ | ಏಪ್ರಿಲ್ | ೫ ಸಾವಿರ | ಇಲ್ಲ |
| ಲಕ್ಷ್ಮೀದೇವಿ | ಪಟ್ಟಣ | ಮೇ | ೮ ಸಾವಿರ | ಇಲ್ಲ |
| **ಜೇವರ್ಗಿ ತಾಲೂಕು** | | | | |
| ಶರಣಬಸವೇಶ್ವರ | ರ್‍ಯಾವನೂರ | ಆಕ್ಟೋಬರ್ | ೫ ಸಾವಿರ | ಇಲ್ಲ |

| | | | | |
|---|---|---|---|---|
| ಹಜರತ್ ಬಾವಾ | | | | |
| ಫಕ್ರೊದಿನ್ ಉರುಸ್ | ಕೋಡಿ | ಫೆಬ್ರವರಿ | ೮ ಸಾವಿರ | ಇಲ್ಲ |
| ಮಹಾಲಕ್ಷ್ಮಿ | ಜೇವರ್ಗಿ (ಬಿ) | ನವೆಂಬರ್ | ೧೦ ಸಾವಿರ | ಇಲ್ಲ |
| ಬಸವೇಶ್ವರ | ಕೋಳಕೂರು | ಏಪ್ರಿಲ್ | ೮ ಸಾವಿರ | ಇಲ್ಲ |
| ಸಿದ್ಧಲಿಂಗದೇವರು | ಸೊನ್ನ | ಫೆಬ್ರವರಿ | ೬ ಸಾವಿರ | ಇಲ್ಲ |
| ನಿಂಗರಾಯ | ಕಲ್ಲಹಂಗರಗಿ | ಅಕ್ಟೋಬರ್ | ೫ ಸಾವಿರ | ಇಲ್ಲ |
| ಯಲ್ಲಮ್ಮ | ಇಟಗಿ | ಬನದಹುಣ್ಣಿಮೆ | ೫ ಸಾವಿರ | ಇಲ್ಲ |
| ಅಮ್ಮೆಗಿಸಿದ್ದೇಶ್ವರ | ಕಲ್ಲೂರ ಬಿ | ಬಾದಾಮಿ | ೫ ಸಾವಿರ | ಇಲ್ಲ |
| ಶರಣ ಬಸವೇಶ್ವರ | ಅರಳಗುಂಡಗಿ | ಮಾರ್ಚ್ | ೫ ಸಾವಿರ | ಇಲ್ಲ |
| ಅಯ್ಯಪ್ಪಮುತ್ಯಾ | ಜಮಖಂಡಿ | ಮಾರ್ಚ್ | ೫ ಸಾವಿರ | ಇಲ್ಲ |
| ಖಾಜಾಅಮಿನೊದ್ದಿನ್ | ಇಜೇರಿ | - | ೫ ಸಾವಿರ | ಇದೆ |
| ಯಲ್ಲಾಲಿಂಗೇಶ್ವರ | ಕಟ್ಟೆಸಂಗಾವಿ | ಯುಗಾದಿ/ಸಂಕ್ರಾಂತಿ | ೧೦ ಸಾವಿರ | ಇದೆ |
| **ಸೇಡಂ ತಾಲೂಕು** | | | | |
| ಜಯತೀರ್ಥಸ್ವಾಮಿ | ಮಳಖೇಡ | ಫೆಬ್ರವರಿ/ಆಗಸ್ಟ್ | ೧೦-೧೨ ಸಾವಿರ | ಇಲ್ಲ |
| ಲೋಕೇಶ್ವರ | ಹಂದರಕಿ | ಫೆಬ್ರವರಿ | ೫-೬ ಸಾವಿರ | ಇಲ್ಲ |
| ಶ್ರೀರಾಮದೇವರು | ಯಾನಾಗುಂದಿ | ಫೆಬ್ರವರಿ | ೫-೬ ಸಾವಿರ | ಇಲ್ಲ |
| ಬಲಭೀಮಸೇವ | ಪೋತಕಪಲ್ಲಿ | ಡಿಸೆಂಬರ್ | ೧೦-೧೨ ಸಾವಿರ | ಇಲ್ಲ |
| ಮೌಲಾಲಿದರ್ಗಾ | ಯಾನಾಗುಂದಿ | ಮಾರ್ಚ್ | ೫-೬ ಸಾವಿರ | ಇಲ್ಲ |
| ಸಂಗಮೇಶ್ವರ | ಕುರಕುಂಟಿ | ಮೇ | ೪-೬ ಸಾವಿರ | ಇಲ್ಲ |
| ಕೊಡ್ತಲಬಸವೇಶ್ವರ | ಸೇಡಂ | ಏಪ್ರಿಲ್ | ೧೦-೧೫ ಸಾವಿರ | ಇಲ್ಲ |
| ವೀರಭದ್ರೇಶ್ವರ | ಕೋಲಕುಂಡಿ | ಏಪ್ರಿಲ್ | ೫-೮ ಸಾವಿರ | ಇಲ್ಲ |
| ಖಲಿಪತ್‌ರಹಮಾನ್‌ಉರುಸ್ | ಮಳಖೇಡ | ಏಪ್ರಿಲ್ | ೧೫-೨೦ ಸಾವಿರ | ಇಲ್ಲ |
| ರಾಮಸ್ವಾಮಿ | ಮುಧೋಳ | ಮೇ | ೬-೮ ಸಾವಿರ | ಇಲ್ |
| ವೆಂಕಟೇಶ್ವರ | ಅಡಕಿ | ಮೇ | ೫-೬ ಸಾವಿರ | ಇಲ್ಲ |
| ಗೋಪಾಲಸ್ವಾಮಿ | ಮುಧೋಳ | ಆಗಸ್ಟ್ | ೪-೬ ಸಾವಿರ | ಇಲ್ಲ |
| **ಶಹಾಪುರ ತಾಲೂಕು** | | | | |
| ಸಂಗಮೇಶ್ವರ | ದಿಗ್ಗಿ | ಜನವರಿ : ಆಗಸ್ಟ್ | ೫ ಸಾವಿರ | ಇಲ್ಲ |
| ಭೀಮರಾಯ | ಭೀಮರಾಯನಗುಡಿ | " | ೫ ಸಾವಿರ | ಇಲ್ಲ |
| ಲಿಂಗೇಶ್ವರ | ಹಯ್ಯಾಳ (ಬಿ) | " | ೫ ಸಾವಿರ | ಇದೆ |
| ಸೋಪಿನಾಸರಮಸ್ತ ಉರುಸ್ | ಸಗರ | ಜನವರಿ | ೫ ಸಾವಿರ | ಇಲ್ಲ |
| ಯಲ್ಲಮ್ಮ | ಮಹಲ್ ರೋಜಾ | ಜನವರಿ | ೬ ಸಾವಿರ | ಇಲ್ಲ |

| | | | | |
|---|---|---|---|---|
| ಚಂದಾಸಾಬ್ ಉರುಸ್ | ಗೋಗಿ | | ೫ ಸಾವಿರ | ಇಲ್ಲ |
| ಚರಬಸವೇಶ್ವರ | ಶಹಾಪುರ | ಮಾರ್ಚ್ : ಏಪ್ರಿಲ್ | ೮ ಸಾವಿರ | ಇದೆ |
| ಶರಬಲಿಂಗೇಶ್ವರ | ರಸ್ತಾಪುರ | ಏಪ್ರಿಲ್ | ೬ ಸಾವಿರ | ಇದೆ |
| ಯಲ್ಲಮ್ಮ | ಹಾಲಗೇರಿ | ಮಾರ್ಚ್ | ೪-೫ ಸಾವಿರ | ಇಲ್ಲ |
| **ಸುರಪುರ ತಾಲೂಕು** | | | | |
| ಮೌನೇಶ್ವರ | ತಿಂಥಣಿ | ಫೆಬ್ರವರಿ | ೫೦ ಸಾವಿರ | ಇಲ್ಲ |
| ಸೋಮನಾಥ | ಕಕ್ಕೇರಿ | ಜನವರಿ | ೧೫ ಸಾವಿರ | ಇದೆ |
| ಪರಮಾನಂದ | ಹೆಬ್ಬಾಳ | ಮಾರ್ಚ್ | ೧೦ ಸಾವಿರ | ಇದೆ |
| ಶರಣಬಸವೇಶ್ವರ | ನಗನೂರು | ಏಪ್ರಿಲ್ | ೨೫ ಸಾವಿರ | ಇದೆ |
| ಗುತ್ತಿಬಸವೇಶ್ವರ | ಯಕ್ತಾಪುರ | ಡಿಸೆಂಬರ್ | ೫ ಸಾವಿರ | ಇಲ್ಲ |
| ಬಸವೇಶ್ವರ | ಕೊಡೇಕಲ್ | ಏಪ್ರಿಲ್ : ನವೆಂಬರ್ | ೨೫ ಸಾವಿರ | ಇದೆ |
| ಮೌನೇಶ್ವರ | ದೇವರಗೊನಾಳ | ಏಪ್ರಿಲ್ ಆಗಸ್ಟ್ | ೧೦ ಸಾವಿರ | ಇದೆ |
| ಫಖಲಾಪಾಶಾದರ್ಗಾ | ಸುರಪುರ | ರಂಜಾನಾ ನಂತರ | ೫ ಸಾವಿರ | ಇಲ್ಲ |
| ವೇಣುಗೋಪಾಲಸ್ವಾಮಿ | ಸುರಪುರ | ಆಗಸ್ಟ್ | ೧೦ ಸಾವಿರ | ಇಲ್ಲ |
| **ಯಾದಗಿರಿ ತಾಲೂಕು** | | | | |
| ಶಂಕರಲಿಂಗೇಶ್ವರ | ಇಡ್ಲೂರು | ಮಾರ್ಚ್ ಏಪ್ರಿಲ್ | ೧೦ ಸಾವಿರ | ಇದೆ |
| ಅಲ್ಲಾಉದ್ದಿನ್ ಉರುಸು | ಅನಪೂರ | | ೫ ಸಾವಿರ | ಇಲ್ಲ |
| ಮೈಲಾರಲಿಂಗೇಶ್ವರ | ಮೈಲಾಪುರ | ಜನವರಿ | ೩ ಲಕ್ಷ | ಇಲ್ಲ |
| ರಾಚಟಯ್ಯಕಲ್ಲಪಯ್ಯ | ಗಾಜರಕೋಟೆ | ಮಾರ್ಚ್ : ಏಪ್ರಿಲ್ | ೧೦ ಸಾವಿರ | ಇಲ್ಲ |
| ಸೋಮೇಶ್ವರ | ಕಡೇಚೂರು | ಜನವವಿ | ೬ ಸಾವಿರ | ಇಲ್ಲ |
| ಅಂಬಾಮಹೇಶ್ವರ | ಬಾಡಯಾಳ | ನವೆಂಬರ್ : ಡಿಸೆಂಬರ್ | ೫ ಸಾವಿರ | ಇಲ್ಲ |
| ಮೌನೇಶ್ವರ | ಯಾದಗಿರಿ | " | ೫ ಸಾವಿರ | ಇಲ್ಲ |
| ಅಂಭಾಭವಾನಿ | ಯಾದಗಿರಿ | ಅಕ್ಟೋಬರ್ : ನವೆಂಬರ್ | ೧೦ ಸಾವಿರ | ಇಲ್ಲ |
| ಮರೆಮ್ಮ | ಮಲಾರ | ಮಾರ್ಚ್ : ಏಪ್ರಿಲ್ | ೫ ಸಾವಿರ | ಇಲ್ಲ |
| ಬಸವೇಶ್ವರ | ಮಲಾರ | ಮೇ : ಜೂನ್ | ೫ ಸಾವಿರ | ಇಲ್ಲ |
| ಬಸವೇಶ್ವರ | ಕಾಳೆಬೆಳಗುಂದಿ | ಮಾರ್ಚ್ | ೧೫ ಸಾವಿರ | ಇಲ್ಲ |
| ಬಸಲಿಂಗಪ್ಪ | ಕೂಡ್ಲೂರು | ಶ್ರಾವಣ | ೧೫ ಸಾವಿರ | ಇಲ್ಲ |
| ಮಶಮ್ಮ | ಬಳಿಚಕ್ರ | ಮೂರುವರ್ಷಕ್ಕೊಮ್ಮೆ | ೧೫ ಸಾವಿರ | ಇಲ್ಲ |
| ಸೇವಾಲಾಲ ಮರಗಮ್ಮ | ಗೋಪುನಾಯ್ಕ ತಾಂಡಾ | ಮೇ | ೫ ಸಾವಿರ | ಇಲ್ಲ |
| ವೆಂಕಟರಮಣ | ಅಲ್ಲಾಪೂರತಾಂಡಾ | ಆಗಸ್ಟ್ | ೧೦ ಸಾವಿರ | ಇಲ್ಲ |
| ಬಂದಿಸಾಬಉರುಸ್ | ಯಡಳ್ಳಿ | ಏಪ್ರಿಲ್ | ೫ ಸಾವಿರ | ಇದೆ |

| | | | | |
|---|---|---|---|---|
| ವಿಶ್ವರಾಧ್ಯ | ಅಬ್ಬೆತುಮಕೂರು | ಆಗಸ್ಟ್ | ೫೦ ಸಾವಿರ | ಇಲ್ಲ |
| ಮಲ್ಲಯ್ಯ | ಮಲೇರಿ | ಅಕ್ಟೋಬರ್ | ೧೦ ಸಾವಿರ | ಇಲ್ಲ |
| ಪರಮಾನಂದ | ಅರಕೇರಾ (ಕೆ) | ಫೆಬ್ರವರಿ | ೧೬ ಸಾವಿರ | ಇದೆ |
| ಜಮಾಲೋದ್ದಿನ ಸಾಹೇಬ ಉರುಸ್ | ಯರಗೋಳ | ಏಪ್ರಿಲ್ : ಮೇ | ೫ ಸಾವಿರ | ಇದೆ |
| ಯಾಕೂಬ ಬುಕಾರಿ ಉರುಸ್ | ಯಾದಗಿರಿ | | ೧೦ ಸಾವಿರ | ಇಲ್ಲ |
| ಶಹಾಜನಾಶಹಾ ಉರುಸ್ | ಯಾದಗಿರಿ | | ೧೦ ಸಾವಿರ | ಇಲ್ಲ |
| ಪಿರಗಯಬಸಾಬ | ಯಾದಗಿರಿ | | ೧೦ ಸಾವಿರ | ಇಲ್ಲ |
| ಗುಂಜಲಮ್ಮ | ಬಂದಳ್ಳಿ | ಫೆಬ್ರವರಿ | ೬ ಸಾವಿರ | ಇಲ್ಲ |
| ಮಶಮ್ಮ | ಯಾದಗಿರಿ ದುಕಾನವಾಡಿ | ಮೂರುವರ್ಷಕ್ಕೊಮ್ಮೆ | ೭ ಸಾವಿರ | ಇಲ್ಲ |
| ದೇವಮ್ಮ | ಯಾದಗಿರಿ ಹಿರೆಲಿಗಸಿ | ಆಗಸ್ಟ್ | ೫ ಸಾವಿರ | ಇಲ್ಲ |
| ಬಸಣ್ಣ | ಯಾದಗಿರಿ ವಾಲ್ಮೀಕಿನಗರ | ಜುಲೈ | ೭ ಸಾವಿರ | ಇಲ್ಲ |
| ಹನುಮಾನ್ | ಕೊಯಿಲೂರು | ಏಪ್ರಿಲ್ | ೫ ಸಾವಿರ | ಇಲ್ಲ |